ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಪದವಿ ನಿಬಂಧ

ಡಾ॥ ಗೀತಾನಾಗಭೂಷಣರವರ "ಬದುಕು" ಕಾದಂಬರಿಯಲ್ಲಿ ಸಾಮಾಜಿಕ ಪ್ರಜ್ಞೆ ಒಂದು ಅಧ್ಯಯನ.

ಸಂಶೋಧನ ವಿದ್ಯಾರ್ಥಿ

ಮಧು ಆರ್.ಎಸ್.

ಮಾರ್ಗದರ್ಶಕರು

ಡಾ॥ ವಿಜಯಾ ಸುಬ್ಬರಾಜ್

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

2010

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಪದವಿ ನಿಬಂಧ

ಡಾ॥ ಗೀತಾನಾಗಭೂಷಣರವರ "ಬದುಕು" ಕಾದಂಬರಿಯಲ್ಲಿ ಸಾಮಾಜಿಕ ಪ್ರಜ್ಞೆ ಒಂದು ಅಧ್ಯಯನ.

ಸಂಶೋಧನ ವಿದ್ಯಾರ್ಥಿ

ಮಧು ಆರ್.ಎಸ್.

ಮಾರ್ಗದರ್ಶಕರು

ಡಾ॥ ವಿಜಯಾ ಸುಬ್ಬರಾಜ್

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

2010

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2009–2010ನೇ ಸಾಲಿನ ಎಂ.ಫಿಲ್. ಪದವಿಗಾಗಿ "'ಬದುಕು' ಕಾದಂಬರಿಯಲ್ಲಿ ಸಾಮಾಜಿಕ ಪ್ರಜ್ಞೆ – ಒಂದು ಅಧ್ಯಯನ" ಎಂಬ ನಿಬಂಧವನ್ನು ಮಧು. ಆರ್.ಎಸ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧವು ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ. ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ

ವಿಜಯಾ ಸುಬ್ಬರಾಜ್

ಡಾ. ವಿಜಯಾ ಸುಬ್ಬರಾಜ್

ದಿನಾಂಕ : 3/08/2010

ಸ್ಥಳ : ಬೆಂಗಳೂರು

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2009–2010ನೇ ಸಾಲಿನ ಎಂ.ಫಿಲ್. ಪದವಿಗಾಗಿ. "'ಬದುಕು' ಕಾದಂಬರಿಯಲ್ಲಿ ಸಾಮಾಜಿಕ ಪ್ರಜ್ಞೆ– ಒಂದು ಅಧ್ಯಯನ" ಎಂಬ ನಿಬಂಧವನ್ನು ಡಾ. ವಿಜಯಾ ಸುಬ್ಬರಾಜ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ

ದಿನಾಂಕ : 3/08/2010

ಸ್ಥಳ : ಬೆಂಗಳೂರು

(ಮಧು. ಆರ್.ಎಸ್)
ಸಂಶೋಧನಾ ವಿದ್ಯಾರ್ಥಿ

ಪರಿವಿಡಿ

❖ ❖ ❖

ಅಧ್ಯಾಯ - 1

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ

ಡಾ॥ ಗೀತಾನಾಗಭೂಷಣ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಜನಪ್ರಿಯತೆ ಹೊಂದಿರುವ ಕಾದಂಬರಿಗಾರ್ತಿ; ಬಂಡಾಯ ನೆಲೆಯಿಂದ ಬಂದಂಥವರು. ಅವರ ಕಾದಂಬರಿಯಲ್ಲಿ ಗ್ರಾಮೀಣ ಬದುಕಿನ ಜೀವನದ ಸ್ಥಿತಿಗತಿಗಳು ನೋವು-ನಲಿವು ಶೋಷಣೆ ದೌರ್ಜನ್ಯ ಮತ್ತು ಹಿಂಸೆಗಳು, ವರ್ಣಭೇದ ಕೆಳವರ್ಗದ ದಲಿತ ಜನಾಂಗದಲ್ಲಿರುವ ಕೆಟ್ಟ ಹರಕೆಗಳು; ಜೋಗಿಣಿ ಪದ್ಧತಿ ದುಡಿಮೆಗಾಗಿ ಸ್ತ್ರೀಯರ ಮೇಲೆ ನಡೆಯುವ ದೈಹಿಕ ಹಿಂಸೆ, ಬೆತ್ತಲೆ ಸೇವೆ, ಆಚಾರ-ವಿಚಾರ ಹೈದ್ರಾಬಾದ್ ಕರ್ನಾಟಕದ ಗುಲ್ಬರ್ಗಾದ ಗ್ರಾಮೀಣ ಭಾಷೆಯ ಶೈಲಿ ಪ್ರಾಣಿಬಲಿ, ವಿಧವೆಯರ ಸಮಸ್ಯೆ, ಜಾತಿ ತಾರತಮ್ಯಗಳು - ಇವೆಲ್ಲವೂ "ಬದುಕು" ಕಾದಂಬರಿಯ ವಸ್ತುವಾಗಿದೆ ಡಾ. ಗೀತಾರವರ ಸಾಹಿತ್ಯದ ಮಹತ್ವ ಯಾವ ಬಗೆಯದು ಎಂಬುದನ್ನು ತಿಳಿಸಿಕೊಡುವ ಉದ್ದೇಶದಿಂದ ಸಾಮಾಜಿಕ ಪ್ರಜ್ಞೆ ಕುರಿತು ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಡಾ. ಗೀತಾ ರವರ ಕಾದಂಬರಿಯ ವಸ್ತು ದಲಿತ ಸ್ತ್ರೀ ಕೇಂದ್ರಿತವಾಗಿದೆ. ದಲಿತರ ನೋವು ಸುಃಖ ದುಃಖಗಳನ್ನು ಅವರು ಹತ್ತಿರದಿಂದ ನೋಡಿ ಜನರ ಬದುಕನ್ನು ಅವರ 'ಬದುಕು' ಕಾದಂಬರಿಯಲ್ಲಿ ಸೃಷ್ಠಿಸಿದ್ದಾರೆ.

ಡಾ. ಗೀತಾ ರವರು ಗ್ರಾಮೀಣ ಜನರ ಬದುಕನ್ನು ಹತ್ತಿರದಿಂದ ಕಂಡು ಅವರ ಸ್ಥಿತಿಗತಿಗಳನ್ನು ನೋವು-ನಲಿವುಗಳನ್ನು ಆ ಪ್ರದೇಶದ ಪರಿಸರ ಮತ್ತು ಸಾಂಸ್ಕೃತಿಕ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ.

ಡಾ. ಗೀತಾನಾಗಭೂಷಣ ಶೋಷಿತ ವರ್ಗದ ಹಿನ್ನೆಲೆಯಿಂದ ಬಂದಂಥವರು. ಅವರ ಸಾಧನೆ ಶ್ಲಾಘನೀಯವಾದದ್ದು ಅವರ ಕಾದಂಬರಿಗಳು, ಕಥೆಗಳು ಒಂದು ವಿಶಿಷ್ಟ ಲೋಕವನ್ನೇ ಕನ್ನಡ ಸಾಹಿತ್ಯಾಸಕ್ತರಿಗೆ ಪರಿಚಯಿಸಿದವು. ದಲಿತ ಶೋಷಿತ ಹೆಣ್ಣು ಮಕ್ಕಳ ಅಸಹನೀಯ ಬದುಕನ್ನು ಎಳೆ ಎಳೆಯಾಗಿ ನಿರೂಪಿಸಿದ್ದಾರೆ. ಗೀತಾ ರವರು ಬಳಸುವ ಭಾಷೆ ಅಪೂರ್ವವಾದದ್ದು; ಅಲ್ಲಿ ನೋವಿದೆ, ದುಃಖವಿದೆ, ಶೋಷಣೆಯ ಚಿತ್ರವಿದೆ. ಗ್ರಾಮೀಣ ಗುಲ್ಬರ್ಗದ ಕನ್ನಡ ಭಾಷೆಯನ್ನು ಸಾಹಿತ್ಯದಲ್ಲಿ ಸುಂದರವಾಗಿ ಬಳಸುವ ಮೂಲಕ ಆ ಭಾಗದ ಪರಿಸರವನ್ನು ಭಾಷೆಯ ಮೂಲಕವೇ ಪರಿಚಯಿಸಿದ್ದಾರೆ.

ಶ್ರೀಮತಿ ಗೀತಾ ರವರ ಕಥೆ ಕಾದಂಬರಿಗಳು ಬಡವರ ಜೀವನದ ಅನೇಕ ಸಾಧ್ಯತೆಗಳಿಗೆ ಕನ್ನಡಿ ಹಿಡಿದಂಥವು, ಇವರ ಸಾಹಿತ್ಯದಲ್ಲಿ ಜಾತಿಯೊಂದೇ ಮುಖ್ಯವಾಗಲಿಲ್ಲ. ಜಮೀನುದಾರರಿಗೆ ದರ್ಪ. ವರ್ಣವರ್ಗ ಸಂಘರ್ಷ ಇವೆಲ್ಲದರ ನಡುವೆ ಬಡವರ ಬದುಕು ಗ್ರಹಿಸುವುದರಲ್ಲಿ ಇವರಿಗೆ ಸರಿಸಾಟಿ ಯಾರೂ ಇಲ್ಲ ಎಂದು ಹೇಳಬಹುದು. ದೇವರು, ಧರ್ಮದ ಹೆಸರಿನಲ್ಲಿ ಗುಲ್ಬರ್ಗದ ಗ್ರಾಮೀಣ ಭಾಗದಲ್ಲಿ ಶೋಷಿತರ ಮೇಲೆ ನಡೆಯುತ್ತಿದ್ದ ದೌರ್ಜನ್ಯಗಳು, ಮೂಢನಂಬಿಕೆಗಳು ಆಚರಣೆಗಳೆ ಇವರ ಸಾಹಿತ್ಯಕ್ಕೆ ಪ್ರೇರಣೆಯಾಗಿದ್ದವು.

ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಅಖಂಡ ಪರಂಪರೆ ಇದೆ. ಭಾಷೆಯು ಕಾಲ ದೇಶ ಸಮಾಜಗಳಿಗೆ ಅನುಗುಣವಾಗಿ ಬದಲಾಗುವ ಹಾಗೆ ಸಾಹಿತ್ಯ ಪ್ರಕಾರವು ಬದಲಾಗುತ್ತದೆ. ವಸ್ತುವಿನ ಆಯ್ಕೆ, ಅಭಿವ್ಯಕ್ತಿ ಪ್ರಕ್ರಿಯೆ, ಆಶಯ, ದೋರಣೆ, ಮೌಲ್ಯಶೋಧ, ಭಾಷಾ ಪ್ರಯೋಗ ಮುಂತಾದ ನೆಲೆಗಳಲ್ಲಿ ಆಗಿರುವುದು ಗಮನಾರ್ಹವಾಗಿದೆ.

ಸಾಹಿತ್ಯವು ಹೊಸ ಹೊಸ ಚಳುವಳಿಗಳಿಂದ ಪ್ರೇರಿತವಾಗುತ್ತದೆ. ಹೊಸಹೊಸ ಪಂಥಗಳ ಸೃಷ್ಟಿಗೆ ಕಾರಣವಾಗುತ್ತದೆ. ಪ್ರಾಚೀನ ಮಧ್ಯಕಾಲಿನ ಆಧುನಿಕ ಎಂಬ ಬೇರೆ ಬೇರೆ ಕಾಲಘಟ್ಟಗಳಲ್ಲಿ ವಿಭಿನ್ನ ಸಾಹಿತ್ಯ ಪಂಥಗಳು ಹುಟ್ಟಿಕೊಂಡಿರುವುದು ಸಾಹಿತ್ಯದಲ್ಲಿ ಬದಲಾವಣೆಗೆ ಕಾರಣವಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯವೆಂಬ ವಿಭಿನ್ನ ನೆಲೆಗಳಲ್ಲಿ ಸಾಹಿತ್ಯ ಪಂಥಗಳು ಕಾಣಿಸಿಕೊಂಡಿವೆ. ಕಾವ್ಯ, ನಾಟಕ, ಸಣ್ಣ ಕಥೆ, ಕಾದಂಬರಿ, ಪ್ರಬಂಧ, ವಿಚಾರ, ವಿಮರ್ಶೆ, ಸಂಶೋಧನೆ ಮುಂತಾದ ಪ್ರಕಾರಗಳು ಆಧುನಿಕ ಕನ್ನಡ ಸಾಹಿತ್ಯ ಉತ್ತುಂಗಕ್ಕೆರಲು ಸಾಕ್ಷಿಯಾಗಿವೆ.

ದಲಿತ-ಬಂಡಾಯ

1970ರ ನಂತರ ಸಮಾಜದ ಪಟ್ಟಭದ್ರ ಹಿತಾಸಕ್ತ ವ್ಯವಸ್ಥೆಯ ವಿರುದ್ಧ ಬಂಡಾಯವೆದ್ದು ದಲಿತ ಸಾಹಿತಿಗಳಿಂದ ರಚಿಸಲ್ಪಟ್ಟ ಸಾಹಿತ್ಯವನ್ನು ದಲಿತ ಸಾಹಿತ್ಯವೆಂದೂ ಅದೇ ರೀತಿ ಪಟ್ಟಭದ್ರ ಹಿತಾಸಕ್ತ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿ ಬಂಡಾಯ ಸಂಘಟನೆ ಮಾಡಿ ಸಾಹಿತ್ಯ ರಚನೆ ಮಾಡಿದ ದಲಿತೇತರ ಸಾಹಿತಿಗಳಿಂದ ರಚಿತವಾದದ್ದನ್ನು ಬಂಡಾಯ ಸಾಹಿತ್ಯವೆಂದೂ ಗುರುತಿಸಲಾಗುತ್ತದೆ.

ದಲಿತ-ಬಂಡಾಯ ಚಳುವಳಿ ಪುರೋಹಿತಶಾಹಿ, ಬಂಡವಾಳಶಾಹಿ, ವಸಾಹತುಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಲು ಹೋರಾಟದ ಹಾದಿಯನ್ನು ಹಿಡಿಯಿತು. ಕಥಾ ಸಾಹಿತ್ಯಕ್ಕೆ

ಸಂಬಂಧಿಸಿದಂತೆ ಬೆಸಗರಹಳ್ಳಿ ರಾಮಣ್ಣ, ಕರೀಗೌಡ ಬೀಚನಹಳ್ಳಿ, ದೇವನೂರು ಮಹಾದೇವ, ಮುಳ್ಳೂರು ನಾಗರಾಜ್, ಮ.ನ. ಜವರಯ್ಯ, ಕಾಳೇಗೌಡ ನಾಗವಾರ, ಕು. ವೀರಭದ್ರಪ್ಪ ಸಾ.ರಾ ಅಬೂಬಕರ್ ಅತ್ಯುತ್ತಮ ಕಥೆಗಳನ್ನು ನೀಡಿದ್ದಾರೆ.

ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ರಚನೆಗೊಂಡ ಗಮನಾರ್ಹ ಕೃತಿಗಳೆಂದರೆ ಸಣ್ಣ ಕಥೆ ಕಾದಂಬರಿ ಕ್ಷೇತ್ರದಲ್ಲಿ ಬೆಸಗರಹಳ್ಳಿ ರಾಮಣ್ಣನವರ 'ಕನ್ನಂಬಾಡಿ' ಸಮುದ್ರ ಕಥೆಗಳು, ದೇವನೂರು ಮಹಾದೇವರ 'ಒಡಲಾಳ', ಕಾಳೆಗೌಡ ನಾಗವಾರರವರ 'ಕರಾವಳಿಯಲ್ಲಿ ಗಂಗಾಲಗ್ನ' ಅರವಿಂದ ಮಾಲಗತ್ತಿರವರ 'ಗೌರ್ಮೆಂಟ್ ಬ್ರಾಹ್ಮಣ', ಮ.ನ. ಜವರಯ್ಯನವರ 'ಮಾಗಿ' ಸಾ.ರಾ ಅಬೂಬಕರ್‌ರವರ 'ಚಪ್ಪಲಿಗಳು'. ಹೀಗೆ ಹಲವಾರು ಕಾದಂಬರಿಗಳು ಸಾಹಿತ್ಯ ಲೋಕಕ್ಕೆ ಪರಿಚಯಗೊಂಡವು. ಬಂಡಾಯ ಸಾಹಿತ್ಯದಲ್ಲಿ ಕಾವ್ಯಗಳೂ ರಚನೆಗೊಂಡವು ಬಿ.ಟಿ. ಲಲಿತನಾಯಕ್‌ರವರ 'ನಂರೂಪ್ಲಿ'. ಸಿದ್ದಲಿಂಗಯ್ಯರವರ 'ಹೊಲೆಮಾದಿಗರ ಹಾಡು'. ವಿಮರ್ಶೆಯ ಕ್ಷೇತ್ರದಲ್ಲಿಯೂ ಸಾಕಷ್ಟು ಕೃತಿಗಳು ಬಂದಿವೆ ರಹಮತ್ ತರೀಕೇರೆಯವರ 'ಪ್ರತಿ ಸಂಸ್ಕೃತಿ' ಮರದೊಳಗರಣಕಿಚ್ಚು ಬರಗೂರು ರಾಮಚಂದ್ರಪ್ಪನವರ 'ಬಂಡಾಯ ಸಾಹಿತ್ಯ ಮೀಮಾಂಸೆ' ದೇವಯ್ಯ ಹರವೆರವರ 'ದಲಿತ ಸಾಹಿತ್ಯ' ಇತರ ಲೇಖನಗಳು ಸಿದ್ದಲಿಂಗಯ್ಯರವರ 'ಹಕ್ಕಿನೋಟ' ಹೀಗೆ ಬಂಡಾಯ ಸಾಹಿತ್ಯ ಶ್ರೀಮಂತಗೊಳ್ಳಲು ಅನೇಕ ಸಾಹಿತಿಗಳ ಕೊಡುಗೆ ಅಪಾರವಾದದ್ದು. ಬಂಡಾಯ ಸಾಹಿತಿಗಳಾದ ಡಾ. ಗೀತಾನಾಗಭೂಷಣರವರ 'ಬದುಕು' ಎಂಬ ಕಾದಂಬರಿ ಒಂದು ಪ್ರದೇಶದ ಸಮಗ್ರ ಬದುಕನ್ನೇ ಕಟ್ಟಿಕೊಡುತ್ತದೆ. ಕೆಳವರ್ಗದ ಜೀವನವನ್ನು ಇಷ್ಟೊಂದು ಅರ್ಥಪೂರ್ಣವಾಗಿ ಚಿತ್ರಿಸುವ ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ವಿವರಗಳೊಂದಿಗೆ ಬರೆದಿರುವ ಕಾದಂಬರಿಗಳು ಕನ್ನಡದಲ್ಲಿ ಒಂದೊ ಎರಡೋ ದೊರೆಯಬಹುದಾದರೂ ಗೀತಾರವರ ಕಾದಂಬರಿಯ ವೈಶಿಷ್ಟ್ಯವೇ ಬೇರೆ. ಕಲ್ಬುರ್ಗಿಯ ಪರಿಸರ, ಅಲ್ಲಿಯ ಭಾಷೆಯನ್ನು ಯಥಾವತ್ತಾಗಿ ಹಿಡಿದಿಡುವ ಅವರ ಅಭಿವ್ಯಕ್ತಿ ಶಕ್ತಿ ಅಸಾಧಾರಣವಾದದ್ದು. ಬದುಕಿನ ದಟ್ಟ ಅನುಭವದಿಂದ ಸ್ಥಳೀಯ ಭಾಷೆಯ ಸೊಗಡಿನಿಂದ, ಶೋಷಿತ ವರ್ಗದ ನೋವುಗಳಿಂದ ಮಹಿಳೆಯ ಮೊನಚಾದ ಸಂವೇದನಗೆರಿದ ಈ ಕೃತಿ ಅನನ್ಯವೆನಿಸುತ್ತದೆ.

ಭಾರತದಂತಹ ಪುರುಷ ಪ್ರಧಾನ ಸಂಸ್ಕೃತಿಯಿರುವ ದೇಶದಲ್ಲಿ ಮಹಿಳೆಯರು ಲೇಖನಿ ಹಿಡಿದದ್ದೆ ಒಂದು ದೊಡ್ಡ ಬಂಡಾಯ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಅಕ್ಕಮಹಾದೇವಿ, ಸಂಚಿಹೊನ್ನಮ್ಮ ಮುಂತಾದವರು ಕಾಣಿಸಿಕೊಂಡಿದ್ದರು. ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಅನೇಕ ಲೇಖಕಿಯರು ಉತ್ಸಾಹದಿಂದ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡರು. ಇವರಲ್ಲಿ

ಬಹಳ ಮಂದಿ ಕಾದಂಬರಿಗಳನ್ನೇ ಹೆಚ್ಚಾಗಿ ಬರೆದರು. ಆದರೆ ಮಹಿಳಾ ಚಳುವಳಿಯ ಸಂದರ್ಭದಲ್ಲಿ ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಕಾವ್ಯದತ್ತ ಒಲವು ತೋರಿದರು.

ಇಪ್ಪತ್ತನೆ ಶತಮಾನದ ಆದಿಯಲ್ಲಿ ಹಲವಾರು ಮಹಿಳಾ ಸಾಹಿತಿಗಳು ಕಂಡುಬಂದರು. ಅವರ ಬರವಣಿಗೆಯಲ್ಲಿ ಅಬಲೆಯರೂ ಶೋಷಿತರೂ ಆದ ಹೆಣ್ಣು ಮಕ್ಕಳ ಬಾಳಿನ ವಾಸ್ತವ ಚಿತ್ರಣವನ್ನು ಸಮಾಜದ ಮುಂದೆ ಅನಾವರಣಗೊಂಡಿತು.

ವಸಾಹತುಶಾಹಿಯ ಪ್ರವೇಶದಿಂದ ಸಮಾಜದ ಎಲ್ಲಾ ವರ್ಗಗಳಿಗೂ ದೊರೆತ ಶಿಕ್ಷಣ. ಸುಧಾರಣಾ ಚಳುವಳಿಯಿಂದ ಹೊಸ ಚಿಂತನೆಗಳ ಹೋರಾಟಗಳಿಂದ ಮಹಿಳಾ ಸಾಹಿತ್ಯದ ಉದಯವಾಯಿತು. ಮಹಿಳೆಯರು ತಮ್ಮ ಬರವಣಿಗೆಯ ಮೂಲಕವೇ ತಮ್ಮದೇ ಆದ ವಿಶಿಷ್ಟ ಸ್ಥಾನಮಾನಗಳನ್ನು ಗಳಿಸಿದರು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಂಜನಗೂಡು ತಿರುಮಲಾಂಬಾ ತಮ್ಮ ಹಲವಾರು ಕೃತಿಗಳಿಂದಾಗಿ ಪ್ರಮುಖರೆನಿಸಿಕೊಂಡರು. ಇವರ 'ಸುಶೀಲೆ' ಕಾದಂಬರಿ ವಸ್ತು ವಿಧವಾ ಸಮಸ್ಯೆ, ಬಾಲ್ಯ ವಿವಾಹದ ನಿರಾಕರಣೆ, ಸ್ತ್ರೀ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಿರುವುದು ಕಂಡುಬರುತ್ತದೆ. ಆರ್. ಕಲ್ಯಾಣಮ್ಮನವರ 'ನಿರ್ಭಾಗ್ಯವನಿತೆ' ವಿಧವಾ ಪುನರ್ವಿವಾಹದ ಆದರ್ಶವನ್ನು ಹೊಂದಿದ ಕಾದಂಬರಿ. ವೇಶ್ಯ ಜೀವನ, ವರದಕ್ಷಿಣೆ ಸಮಸ್ಯೆ ಬಗ್ಗೆ ಬರೆದಿದ್ದಾರೆ.

ತ್ರೀವೇಣಿಯವರ 'ಅಪಸ್ವರ', ಎಂ.ಕೆ. ಇಂದಿರಾರವರ 'ಗೆಜ್ಜೆ ಪೂಜೆ', ಅನೂಪಮಾ ನಿರಂಜನರವರ 'ಮಾಧವಿ', ಹೆಚ್.ವಿ. ಸಾವಿತ್ರಮ್ಮನವರ 'ವಿಮುಕ್ತಿ' ಮುಂತಾದ ತಮ್ಮ ಕೃತಿಗಳು ಮಹಿಳೆಯರ ಸಮಸ್ಯೆಗಳನ್ನು ಅವರ ನೋವು ನಲಿವುಗಳನ್ನು ದಮನಕ್ಕೆ ಒಳಗಾದ ಸ್ತ್ರೀಯರ ದನಿಯನ್ನು ಎತ್ತಿಹಿಡಿದಿವೆ.

ಮುಸ್ಲಿಂ ಸಮಾಜದ ಸ್ತ್ರೀ ಜಗತ್ತಿನ ಮೌನವನ್ನ ಮುರಿದ ಸಾ.ರಾ. ಅಬೂಬಕರ್ ತಮ್ಮ ಕಥಾ ಸಾಹಿತ್ಯದ ಮೂಲಕವಾಗಿ ಬುದಿರದೊಳಗಿನ ಬದುಕಿನ ನೋವನ್ನು ಅನಾವರಣಗೊಳಿಸಿ ಉಸಿರಾಡುವಂತೆ ಮಾಡಿದರು 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ 'ತಲಾಖ್' ಪದ್ಧತಿಯ ಅಮಾನವೀಯ ಮುಖವನ್ನು ಅನಾವರಣಗೊಳಿಸುತ್ತದೆ. ಬಾನು ಮುಷ್ತಾಖ್, ಡಿ.ಬಿ. ರಜಿಯಾ ಮುಂತಾದ ಮುಸ್ಲಿಂ ಲೇಖಕಿಯರು ಕನ್ನಡದಲ್ಲಿ ಆ ಸಮಾಜದ ಮಡಿವಂತಿಕೆಯನ್ನು ಹಿಂದೆ ಸರಿಸಿದರು.

ದಲಿತ ವರ್ಗದ ಸಂವೇದನೆಗಳನ್ನು ಬಿ.ಟಿ. ಲಲಿತಾ ನಾಯಕ್‌ರವರ ಕಾದಂಬರಿಗಳಾದ 'ನಂ.ರೂಪ್ಲಿ'. 'ಚಂದ್ರಪರಾಭವ', 'ಗತಿ' ಕೃತಿಗಳಲ್ಲಿ ಲಂಬಾಣಿ ಜನಾಂಗದ ವಿಶಿಷ್ಟ ಸಂಸ್ಕೃತಿ

ದುರ್ಬಲ ವರ್ಗದ ಮಹಿಳೆಯರ ಚಿತ್ರಣವಿದೆ. ಗುಲ್ಬರ್ಗಾ ಜಿಲ್ಲೆಯ ಗ್ರಾಮೀಣಾ ಭಾಷೆಯಲ್ಲಿ ಹಳ್ಳಿಯ ದಲಿತ ಹೆಣ್ಣು ಮಕ್ಕಳ ಮೇಲಾಗುವ ಧಾರ್ಮಿಕ, ಆರ್ಥಿಕ, ಸಾಮಾಜಿಕ ಶೋಷಣೆಯನ್ನು ಗೀತಾರವರ ಬದುಕು ಕಾದಂಬರಿಗಳಲ್ಲಿ ಕಾಣಬಹುದು. ದಲಿತ ಹೆಣ್ಣು ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರ ಚಿತ್ರಣವಿದೆ.

ಡಾ. ಗೀತಾ ರವರು ತಮ್ಮ ಸಾಹಿತ್ಯದಲ್ಲಿ ಬೇರೆ ಕಾದಂಬರಿಗಾರ್ತಿಯರಿಗೆ ಭಿನ್ನವಾಗಿ ನಿಲ್ಲುತ್ತಾರೆ, ತಮ್ಮ ಬದುಕು ಕಾದಂಬರಿ ವ್ಯಾಪ್ತಿ ಬಹಳ ದೊಡ್ಡದು ಸಮುದಾಯದ ಬದುಕನ್ನು ಕಣ್ಣ ಮುಂದೆ ಚಿತ್ರವತ್ತಾಗಿ ಕಟ್ಟಿ ಕೊಡುತ್ತದೆ, ಎಲ್ಲಾ ಕುಟುಂಬಗಳ, ಅನೇಕ ವ್ಯಕ್ತಿಗಳ ಬದುಕು ಜಾತಿ ಪ್ರದೇಶದ ಹಿನ್ನೆಲೆಯಲ್ಲಿ ಅನಾವರಣಗೊಳ್ಳುತ್ತವೆ.

ಡಾ. ಗೀತಾ ರವರು ಗುಲ್ಬರ್ಗಾ ಜಿಲ್ಲೆಯ ಗ್ರಾಮೀಣ ಜನತೆಯ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಅವರು ಹತ್ತಿರದಿಂದ ಕಂಡಂತಹ ಪರಿಸರ ಚಿತ್ರಣ, ಜನಾಂಗದ ಉಡುಗೆ ತೊಡುಗೆ ನೋವು ನಲಿವುಗಳನ್ನು, ಶೋಷಿತ ನೆಲೆಯಲ್ಲಿ ಕಾಣಿಸಿಕೊಳ್ಳುವ ಪ್ರೀತಿ ಹಾಗು ಪ್ರಣಯ ಸಲ್ಲಾಪ್ಪಗಳನ್ನು, ಎಳೆ ಎಳೆಯಾಗಿ ಚಿತ್ರಿಸಿದ್ದಾರೆ ಇವರ ನಿರೂಪಣೆಯ ಶೈಲಿ ಬಹಳ ಅದ್ಭುತವಾದದ್ದು ಹೈದ್ರಾಬಾದ್ ಕರ್ನಾಟಕದ ಗ್ರಾಮೀಣ ಉರ್ದು ಮಿಶ್ರಿತ ಭಾಷೆಯಿಂದ ಕೂಡಿದೆ. ವರ್ಣ ವರ್ಣಗಳ ಸಂಘರ್ಷ, ದೌರ್ಜನ್ಯ ಸಾಹುಕಾರ, ಬಡವ ಎಂಬ ಜಾತಿ. ಜಾತಿಗಳ ಬೇದವಿರುವುದನ್ನು ಕಾದಂಬರಿಯಲ್ಲಿ ಕಾಣಬಹುದು.

ಅಧ್ಯಯನದ ಆರಂಭದಲ್ಲಿ ಕನ್ನಡ ಕಾದಂಬರಿ ಬೆಳೆದು ಬಂದುದನ್ನು ಗುರುತಿಸಲಾಗಿದೆ. ಎರಡನೇ ಅಧ್ಯಾಯನದಲ್ಲಿ ಡಾ. ಗೀತಾ ರವರ ಬದುಕು ಬರಹವನ್ನು ಅವರ ಸ್ಥಾನಮಾನವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಮೂರನೇ ಅಧ್ಯಾಯದಲ್ಲಿ ಡಾ. ಗೀತಾನಾಗಭೂಷಣ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳನ್ನು ಅವರ ಕಾದಂಬರಿಯಲ್ಲಿ ಬರುವ ಸ್ತ್ರೀ ಶೋಷಣೆ, ಜೋಗಿಣಿ ಪದ್ಧತಿ ಸ್ತ್ರೀಯನ್ನು ದೈಹಿಕ ಹಿಂಸೆಗೆ ಒಳಪಡಿಸುವುದು ಹಾಗೂ ಹಸಿ ಪ್ರಣಯ ಸಲ್ಲಾಪಗಳನ್ನು ಸ್ತ್ರೀ ಮೇಲೆ ನಡೆಯುವ ದೌರ್ಜನ್ಯವನ್ನು ವಿಸ್ತೃತ ಅಧ್ಯಯನ ಮಾಡಲಾಗಿದೆ.

ನಾಲ್ಕನೇ ಅಧ್ಯಾಯನದಲ್ಲಿ 'ಪ್ರಾದೇಶಿಕ ವೈಶಿಷ್ಟ್ಯತೆ' ಗೀತಾರವರ ಕಾದಂಬರಿಗಳಲ್ಲಿ ಬರುವ ಪರಿಸರ ಜನ ಜೀವನದ ಚಿತ್ರಣವನ್ನು ಪ್ರದೇಶದ ಉಡುಗೆ ತೊಡುಗೆಗಳನ್ನು ಅಧ್ಯಾಯನದ ಮುಖಾಂತರ ತಿಳಿಸಲಾಗಿದೆ.

ಐದನೇ ಅಧ್ಯಾಯನದಲ್ಲಿ 'ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು'

ಈ ಅಧ್ಯಾಯದಲ್ಲಿ ಸಾಮಾಜಿಕ ಸ್ಥಿತಿ-ಗತಿಗಳನ್ನು ಆ ಸಮಾಜದಲ್ಲಿನ ಆಚರಣೆಗಳು ಸಂಪ್ರದಾಯಗಳು. ಹಬ್ಬ ಹರಿದಿನಗಳು ಮೊದಲಾದವುಗಳನ್ನು ವಿವರಿಸಲಾಗಿದೆ.

ಆರನೇ ಅಧ್ಯಾಯನದಲ್ಲಿ ವಸ್ತು ಮತ್ತು ಪಾತ್ರಗಳ ಪರಿಚಯವನ್ನು ವಿವರಣಾತ್ಮಕವಾಗಿ ತಿಳಿಸಿಕೊಡಲಾಗಿದೆ. ಕಾದಂಬರಿಯಲ್ಲಿ ಬರುವ ನೀಲವ್ವ, ತುಳುಜಾ, ಹಾಲಪ್ಪ, ಮಾರ್ತಾಂಡ, ಸಣ್ಣಮಲ್ಲು, ನಾಗವ್ವಾಯಿ ಹಾಗೂ ಈರವ್ವ ಇವರುಗಳ ವ್ಯಕ್ತಿಚಿತ್ರಣಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ.

❖ ❖ ❖

ಅಧ್ಯಾಯ – 2

ಬದುಕು ಬರಹ

ಕನ್ನಡ ಸಾಹಿತ್ಯ ಲೋಕದಲ್ಲಿ ಅಮೋಘ ಸಾಧನೆ ಮಾಡಿರುವ ಡಾ. ಗೀತಾನಾಗಭೂಷಣ ಬಂಡಾಯ ನೆಲೆಯಿಂದ ಬಂದಂಥವರು ಮಾರ್ಚ್ 25, 1942ರಲ್ಲಿ ಗುಲ್ಬರ್ಗಾ ಜಿಲ್ಲೆಯ ಸಾವಳಗಿ ಗ್ರಾಮದ ಗಂಗಮತಸ್ಥ ಕುಟುಂಬದಲ್ಲಿ ಜನಿಸಿದರು. ತಂದೆ ಶಾಂತಪ್ಪ ಎಂ.ಎಸ್.ಎಲ್. ಮಿಲ್‌ನಲ್ಲಿ ಕಾರ್ಮಿಕರಾಗಿದ್ದರೆ ತಾಯಿ ಶಾಂತಮ್ಮ ಶೋಷಿತ ಸಮಾಜದ ಸಂಕೇತದಂತಿದ್ದ ಸಾಮಾನ್ಯ ಮಹಿಳೆ. ಗೀತಾರವರ ತಂದೆ ಸ್ವಾತಂತ್ರ್ಯ ಹೋರಾಟಗಾರರಾಗಿ ನಿಜಾಮರ ಆಡಳಿತದ ವಿರುದ್ಧ ಕಹಳೆಯಾಗಿ ಸೆರೆಮನೆ ವಾಸ ಅನುಭವಿಸಿದವರು ಅಕ್ಷರದ ಬಗ್ಗೆ ಹೆಚ್ಚು ಮಹತ್ವವನ್ನು ಹೊಂದಿದ್ದ ಇವರ ತಂದೆ ಮಗಳು ಓದಲೆಬೇಕೆಂಬ ಹಠದಿಂದ ಗೀತಾರವರನ್ನು ಹೈದರಾಬಾದ್ ಕರ್ನಾಟಕ 1948ರಲ್ಲಿ ನಿಜಾಮರ ಆಳ್ವಿಕೆಯಿಂದ ಭಾರತ ಒಕ್ಕೂಟಕ್ಕೆ ಸೇರಿದ ಹೊಸದರಲ್ಲಿ ಶಾಲೆಯ ಮೆಟ್ಟಲು ಹತ್ತಿಸಿ, ಶೋಷಿತ ಹಿಂದುಳಿದ ವರ್ಗದ ಏಕೈಕ ಹುಡುಗಿ ಆಗಿಸಿದ್ದರು, ಮನೆಯಲ್ಲಿ ಬಡತನ ತಾಂಡವವಾಡುತ್ತಿದ್ದ ಸಮಯದಲ್ಲಿ ಅವರ ಮೇಲ್ವರ್ಗದ ಮನೆಯಲ್ಲಿ ಅಭ್ಯಾಸ ಮಾಡಲು ಹೋದಾಗ ಅಲ್ಲಿ ಅನುಭವಿಸಿದ ಅವಮಾನ ತಾರತಮ್ಯ ನೀತಿಗಳು ಎಳೆಯ ಮನಸ್ಸಿನ ಮೇಲೆ ಅಚ್ಚಳಿಯದೇ ಉಳಿದು ಕಿಚ್ಚನ್ನು ಹೊತ್ತಿಸಿ ವ್ಯವಸ್ಥೆಯ ವಿರುದ್ಧ ಬಂಡೇಳುವ ಸ್ಥೈರ್ಯವನ್ನು ತಂದುಕೊಟ್ಟಿತು. ಬಹಳ ಕಷ್ಟದಿಂದಲೇ ಶಿಕ್ಷಣ ಪಡೆದ ಇವರಿಗೆ ಇನ್ನೂ ಹೆಚ್ಚು ಓದಲು ಆಸಕ್ತಿ ಇದ್ದರೂ ಮನೆಯಲ್ಲಿ ಅತೀವ ಬಡತನ ಅಡ್ಡಿಯಾಗಿತ್ತು ಆಗ ಅವರು ಗುಲ್ಬರ್ಗಾ ಜಿಲ್ಲಾಧಿಕಾರಿ ಕಛೇರಿಯಲ್ಲಿ ಗುಮಾಸ್ತೆಯಾಗಿ ಸೇರಿ, ಜೊತೆಗೆ ಓದನ್ನು ಮುಂದುವರಿಸಿದರು. ಆ ಕಾಲದಲ್ಲಿ ಪುರುಷರೊಂದಿಗೆ ಸರಿಸಮನಾಗಿ ಕೆಲಸಕ್ಕೆ ಹೋಗುವ ಏಕೈಕ ಯುವತಿಯಾಗಿದ್ದರು. ಉತ್ಸಾಹದಿಂದಲ್ಲೆ ಉನ್ನತ ಶಿಕ್ಷಣವನ್ನು ಮುಗಿಸಿದರು.

ಡಾ. ಗೀತಾರವರು ಉಪನ್ಯಾಸಕಿಯಾಗಿ ವೃತ್ತಿ ಬದುಕನ್ನು ಆರಂಭಿಸಿದರು. ಸೃಜನಶೀಲ ಬರವಣಿಗೆಯಲ್ಲಿ ತೊಡಗಿಸಿಕೊಂಡು 'ತಾವರೆ ಹೂವಿನಿಂದ' ಹಿಡಿದು 'ಬದುಕು' "ಕಾಗೆ ಮುಟ್ಟಿತು" ವರಗೂ 30 ಕಾದಂಬರಿಗಳು ಹಾಗು ಸಣ್ಣ ಕತೆಗಳು ನಾಟಕಗಳು ಮತ್ತು ಉಪಸಂಸ್ಕೃತಿ ಮಾಲೆಗಳನ್ನು ರಚಿಸಿದ್ದಾರೆ. "ದುರುಗ ಮುರುಗಿಯರ ಸಂಸ್ಕೃತಿ" ಇವರ ಸಂಶೋಧನಾ ಪ್ರಬಂಧವಾಗಿದೆ. ಪ್ರಾಚಾರ್ಯರಾಗಿ ತಮ್ಮ ವೃತ್ತಿ ಬದುಕಿನಿಂದ ನಿವೃತ್ತಿ ಹೊಂದಿದರು.

'ಹಸಿಮಾಂಸ ಮತ್ತು ಹದ್ದುಗಳು' ಮತ್ತು 'ನೀಲಗಂಗಾ' ಚಲನಚಿತ್ರವಾಗಿವೆ. ಅವ್ವ ಮತ್ತು ಇತರ ಕಥೆಗಳು, ಧುಮಸ್ಸು, ಬದುಕು, ಕಾದಂಬರಿಗಳು ಪ್ರೌಢಶಾಲೆಯಿಂದ ವಿ.ವಿ.ವರೆಗೂ. ಅಧ್ಯಯನದ ಪಠ್ಯವಾಗಿವೆ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಸಾಧನೆಗಳನ್ನು ಮಾಡಿದ್ದನ್ನು ಗುರುತಿಸಿ ಕರ್ನಾಟಕ ಸರಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿಗಳನ್ನ ನೀಡಿ ಗೌರವಿಸಿದ್ದಾರೆ. ಬದುಕು ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2004), ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (1995), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1998), ಕರ್ನಾಟಕ ಸರ್ಕಾರದ ದಾನ ಚಿಂತಾಮಣಿ ಪ್ರಶಸ್ತಿ (2002), ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ (2004) ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯದ ಡಾಕ್ಟರೇಟ್ ಪ್ರಶಸ್ತಿ ಇವು ಅವರ ಸಾಹಿತ್ಯ ಕೃಷಿಗೆ ಲಭಿಸಿವೆ.

ಡಾ. ಗೀತಾರವರು ಹಿಂದುಳಿದ ಜನಾಂಗದ ಬಡ ಕುಟುಂಬದಿಂದ ಬಂದು ಬದುಕಿನಲ್ಲಿ ನೋವುಗಳನ್ನು ಅನುಭವಿಸುತ್ತ, ಸಾಹಿತ್ಯವನ್ನು ಸೃಷ್ಟಿ ಮಾಡಿ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೆ ಆದ ವಿಶಿಷ್ಟವಾದ ಸ್ಥಾನವನ್ನು ಪಡೆದಿದ್ದಾರೆ.

ಡಾ. ಗೀತಾರವರು ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಅನುಭವಿಸುವ ಯಾತನೆ, ಸಂಕಟ, ದೌರ್ಜನ್ಯ, ನೋವು, ಬಡವರ ಬದುಕು ಬವಣೆಯನ್ನು ಹತ್ತಿರದಿಂದ ಕಂಡು ಜನಪದ ಸಂಸ್ಕೃತಿ ದಲಿತ ಮಹಿಳೆಯರನ್ನು ಜೋಗಿಣಿಗೆ ಬಿಟ್ಟು ದೇವರ ಹೆಸರಿನಲ್ಲಿ ಅವರ ಮೇಲೆ ನಡೆಯುವ ಬೆತ್ತಲೆ ಸೇವೆ ಇಂತಹ ಅಮಾನುಷ ಪದ್ಧತಿಯ ವಿರುದ್ಧ ದನಿಯತ್ತಿದ್ದ ಮೊದಲ ಬರಹಗಾರ್ತಿ ಈ ಹಿನ್ನೆಲೆಯಲ್ಲಿ ರಚಿತವಾದುದೇ 'ಹಸಿ ಮಾಂಸ ಮತ್ತು ಹದ್ದುಗಳು' ಇದು ಅವರ ಸುಪ್ರಸಿದ್ಧ ಕಾದಂಬರಿ, ಹೀಗೆ ಶೋಷಿತ ವರ್ಗ ಮತ್ತು ಮಹಿಳೆಯರಿಗೆ ದನಿಯಾಗಿ ನಿಲ್ಲುತ್ತಾರೆ, ತಮ್ಮ ಗಟ್ಟಿ ಬರವಣಿಗೆಯಿಂದ ಸಾಹಿತ್ಯಲೋಕದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಗದಗನಲ್ಲಿ ನಡೆದ 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಯಶಸ್ವಿಯಾಗಿ ಪೂರೈಸಿದರು, ಇವರು ಅತ್ಯುನ್ನತ ಸ್ಥಾನ ಪಡೆದ ಶೋಷಿತ ಸಮುದಾಯದ ಮೊದಲ ಮಹಿಳೆಯಾಗಿದ್ದಾರೆ.

ಕಾದಂಬರಿಯಲ್ಲಿ 'ಸಮಾಜದ ಕಟ್ಟಕಡೆಯ ವ್ಯಕ್ತಿಯೆಂದರೆ ದಲಿತ ಮಹಿಳೆ ಅವರ ಬದುಕು ಭಾಷೆ ಸಾಂಸ್ಕೃತಿಕ ವಿವರಗಳನ್ನೂ ನೀಡಿದ್ದಾರೆ, ದಲಿತ ಸ್ತ್ರೀಯನ್ನು ಕೇಂದ್ರೀಕರಿಸಿ. ದಲಿತ ಮಹಿಳೆಯ ಪ್ರೀತಿ ಪ್ರೇಮ ಮುಕ್ತ ಲೈಂಗಿಕತೆ ಉದಾರತೆ ಮಾನವೀಯತೆ, ಸಣ್ಣತನ ಮುಂತಾದ ಮಗ್ಗುಲುಗಳನ್ನು ತೆರೆದಿಟ್ಟರು. ಅನನ್ಯ ಬದುಕುಗಳನ್ನು ಸಾಂಸ್ಕೃತಿಕವಾಗಿ ತೆರೆದಿಟ್ಟ ಗೀತಾರವರ ಬರಹಗಳಿಗೆ ಕನ್ನಡ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಸ್ಥಾನವಿದೆ.

ಡಾ. ಗೀತಾರವರು ಬರಹಗಳು ದಲಿತ ಮಹಿಳೆ, ಜಮೀನ್ದಾರು ಪದ್ಧತಿಯ ಲೈಂಗಿಕ ರಾಜಕಾರಣಕ್ಕೆ ಬಲಿಯಾಗುವ ತುಮುಲವನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ. ದಲಿತ ಹೆಣ್ಣನ್ನು ಕೇವಲ ಭೋಗಕ್ಕೊಸ್ಕರ ಬಳಸಿಕೊಳ್ಳುವುದು, ವರ್ಗ ತಾರತಮ್ಯ, ಅವರ ಕಾದಂಬರಿಯಲ್ಲಿ ಕಾಣಬಹುದು. ಕಥೆ ಕಾದಂಬರಿಯ ಪಾತ್ರಗಳು ಕನ್ನಡ ಸಾಹಿತ್ಯದಲ್ಲಿ ಹೊಚ್ಚ ಹೊಸ ಅನುಭವಗಳನ್ನು ಸೃಷ್ಟಿಸಿವೆ ಅಕ್ಷರ ದಕ್ಕದ ಆ ವರ್ಗದ ನೋವು ಅಪಮಾನ ಸಂಕಟ ಆಸೆ ಅವರ ಸಾಂಸ್ಕೃತಿಕ ಲೋಕ, ಭಾಷಿಕ ಪರಂಪರೆಗಳನ್ನು ಚಿತ್ರಿಸಿದ್ದಾರೆ.

ಡಾ. ಗೀತಾರವರ ಕಥೆ ಕಾದಂಬರಿಗಳು ಬದುಕಿನ ಜೀವನಗಾಥೆಯನ್ನು ಸುದೀರ್ಘವಾಗಿ ಹೇಳುತ್ತವೆ ಯಾವುದೋ ಒಂದು ಘಟನೆ ಅಥವಾ ವ್ಯವಸ್ಥೆಯ ಝೋಪಡಿಗಳಲ್ಲಿನ ಜನರ ಬದುಕಿನ ಸಂಕೀರ್ಣ ಅನುಭವಗಳ ಅನನ್ಯ ದಾಖಲೆಯೇ ಗೀತಾರವರ ಬರಹಗಳಾಗಿವೆ.

ಗೀತಾರವರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷೆಯಾದ ಕನ್ನಡದ ಮೊದಲ ಮಹಿಳೆ. ಅವರ ಕ್ರಿಯಾಶೀಲತೆ, ಸೃಜನಶೀಲ ಬರಹಗಳು, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರೀಮಂತವಾಗಿವೆ.

ಕಾದಂಬರಿಯಲ್ಲಿ ಬಡವರ, ನಿರ್ಗತಿಕರ, ದಲಿತ ಸ್ತ್ರೀಯರ ಕೆಳವರ್ಗದ ಜೀವನವನ್ನೆ ಬದುಕಿನಲ್ಲಿ ಕಟ್ಟಿಕೊಟ್ಟಿದ್ದಾರೆ.

'ಬದುಕು' ಕಾದಂಬರಿಯಲ್ಲಿ ಮಲ್ಲಪ್ಪ ಜಮಾದಾರನ ಕುಟುಂಬವನ್ನೆ ಕೇಂದ್ರಿಕರಿಸಿ ಬರೆದಿದ್ದರೂ ಕೂಡ, ಕುಟುಂಬದ ಹೊರಗಿನ ಅನ್ಯ ಕುಟುಂಬಗಳ ಸಂಬಂಧಗಳ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಆಚರಣೆಗಳನ್ನು ಅನಾವರಣಗೊಳಿಸಿದ್ದಾರೆ.

ಹಸಿ ಹಸಿ ಪ್ರೀತಿ–ಪ್ರೇಮ ಹಾದರಗಳನ್ನು ಮತ್ತು ಕಾಶಮ್ಮ ತನ್ನ ಗಂಡ ಮಾರ್ತಾಂಡನನ್ನು ಬಿಟ್ಟು ಸಾವುಕಾರನ ಮಗನ ಜೊತೆ ರಂಡೆಯಾಗಿ ಬದುಕುವ ಚಿತ್ರಣ ಹಾಗೂ ಗರತಿಯಂಥ ಬೆಳ್ಳಿ ಜೀವನದಲ್ಲಿ ಅನುಭವಿಸುವ ಕಷ್ಟಗಳು, ಕಲ್ಯಾಣಿ ಜೈಲಿಗೆ ಸೇರುವ ಪ್ರಸಂಗ, ಹಾಗೂ ಪತರೂ ಎಂಬ ಮುಸ್ಲಿಂ ಹುಡುಗ ಮಲ್ಲಪ್ಪ ಜಮಾದಾರನ ಕುಟುಂಬಕ್ಕೆ ಆಸರೆಯಾಗಿ ಮನೆ–ತೋಟ ಮತ್ತು ಸಂಸಾರದ ಆಗು ಹೋಗುಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಕೆಳ ವರ್ಗದ ಬದುಕಿನ ನೋವುಗಳನ್ನು ಕಾದಂಬರಿಯ ಮೂಲಕ ನಿರೂಪಿಸಿದ್ದಾರೆ.

ಗೀತಾನಾಗಭೂಷಣರವರು ಬರಹದಲ್ಲಿ ಅನಕ್ಷರಸ್ಥ ಹೆಂಗಸರ ಶೋಷಣೆ, ಸಂಕಟಗಳು, ಸಮಾಜದ ಕಂದಾಚಾರಗಳು, ದೇವಿಯ ಹೆಸರಿನ ಮೇಲೆ ನಡೆಸುವ ಸೂಳೆಗಾರಿಕೆ, ಊರಗೌಡ, ಕುಲಕರ್ಣಿ, ಸಾಹುಕಾರರು, ನಿರ್ಗತಿಕ ಹೆಂಗಸರ ಮೇಲೆ ನಡೆಸುವ ದೌರ್ಜನ್ಯ, ದಬ್ಬಾಳಿಕೆ,

ಲೈಂಗಿಕ ಶೋಷಣೆ, ಮೂಢನಂಬಿಕೆಗಳ ವಿರುದ್ಧ ಬರವಣಿಗೆಯ ಮುಖಾಂತರ ಸಮಾಜದ ಆಚಾರ ವಿಚಾರಗಳನ್ನು ತಿಳಿಸಿದ್ದಾರೆ.

ಡಾ. ಗೀತಾನಾಗಭೂಷಣರವರು ಹೈದರಾಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಆಡು ಮಾತನ್ನು ಸಮರ್ಥವಾಗಿ ಬಳಸುವುದರಲ್ಲಿ ಗೀತಾರವರನ್ನು ಬಿಟ್ಟರೆ ಇನ್ನೊಬ್ಬರಿಲ್ಲ ಜನಪದದ ನುಡಿಗಟ್ಟು ವಾಕ್ಯ, ಗಾದೆ, ಒಗಟು, ಹಾಡು, ಉರ್ದು, ಭಾಷೆಯ ಪದ ಪುಂಜಗಳನ್ನು ಬಳಸಿರುವುದನ್ನು ಅವರ ಬರವಣಿಗೆಯಲ್ಲಿ ಕಾಣಬಹುದು.

❖ ❖ ❖

ಅಧ್ಯಾಯ – 3

ಡಾ. ಗೀತಾನಾಗಭೂಷಣ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು

ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಸಾಧನೆಮಾಡಿದ ಕೀರ್ತಿ ಗೀತಾಭೂಷಣರಿಗೆ ಸಲ್ಲುತ್ತದೆ. ಹೈದ್ರಾಬಾದ್ ಕರ್ನಾಟಕದ ಸಾಹಿತ್ಯ ಕ್ಷೇತ್ರದಲ್ಲಿ ನೆನಪಾಗುವ ವ್ಯಕ್ತಿ ಗೀತಾರವರು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಾಹಿತ್ಯವನ್ನು ಕರಗತ ಮಾಡಿಕೊಂಡು ಅನೇಕ ಕಾದಂಬರಿಗಳು ಸಣ್ಣ ಕಥೆಗಳು ಹಾಗೂ ನಾಟಕಗಳನ್ನು ರಚಿಸಿದ್ದಾರೆ.

ಕಾದಂಬರಿಯಲ್ಲಿ ಚಿತ್ರಿತವಾಗಿರುವ ಸ್ತ್ರೀಯರ ಸ್ಥಿತಿಗತಿಗಳು ಬಹಳ ಗಂಭೀರತೆಯಿಂದ ಕೂಡಿದೆ ಇತಿಹಾಸದಲ್ಲಿ ಮಹಿಳೆಯರ ಪರವಾಗಿ ಧೋರಣೆಗಳನ್ನೆತ್ತುವುದು ಬಹಳ ವಿರಳ. ಸ್ತ್ರೀಯರನ್ನು ಸೃಜನಶೀಲ ಕಾರ್ಯಗಳಿಂದ ದೂರವಿಟ್ಟರು. ಹೈದ್ರಾಬಾದ್ ಕರ್ನಾಟಕದಲ್ಲಿ ಗ್ರಾಮೀಣ ಜನತೆಯ ನೋವು ನಲಿವು ಹಿಂಸೆ ದೌರ್ಜನ್ಯ ಬೆತ್ತಲೆ ಸೇವೆ ಜೋಗಿಣಿ ಬಿಡುವ ಪದ್ಧತಿಗಳು ಸ್ತ್ರೀಯರ ಆಂತರಿಕ ಮನಸ್ಸನ್ನು ಕದಡಿಸುತ್ತದೆ ದಲಿತ ಸ್ತ್ರೀಯರಲ್ಲಿ ಹೆಚ್ಚಾಗಿ ಜೋಗಿಣಿಗೆ ಬಿಡುವ ಪದ್ಧತಿ ರೂಢಿಯಲ್ಲಿದ್ದು ದಲಿತ ಹೆಣ್ಣುಮಕ್ಕಳನ್ನು ಮಾಪುರ ತಾಯಿಯ ಅಣತಿಯಂತೆ ಆ ದೇವಿಯ ಸೇವೆಗೆ ಬಿಟ್ಟು, ಹೆಣ್ಣು ಭಿಕ್ಷೆಯನ್ನು ಬೇಡುತ್ತಾ ದೇವಿಯ ಹೆಸರಿನಲ್ಲಿ ಬಂದಂತಹ ಗಂಡಸರಿಗೆಲ್ಲಾ ಸೆರಗು ಹಾಸುತ್ತ ಕಾಮಕ್ಕೆ ಬಲಿಯಾಗುತ್ತಾ ದಿನ ಕಳಿಯಬೇಕು. ಅವಳಿಗೆ ಹುಟ್ಟುವ ಮಕ್ಕಳಿಗೆ ತಂದೆಯ ಹೆಸರಿಲ್ಲ, ತಾಯಿಯದೆ ಹೆಸರು. ಹೀಗೆ ಸ್ತ್ರೀಯರ ಮೇಲೆ ನಡೆಯುವ ದೈಹಿಕ ಹಿಂಸೆ, ಜಾತಿ ಮತ ಧರ್ಮದಲ್ಲಿ ಮೇಲು ಕೀಳು ಎಂಬ ಭಾವನೆ ವರ್ಣವರ್ಣಗಳ ನಡುವೆ ಕಲಹ, ಈ ಕೆಳವರ್ಗದ ಜನತೆಯಲ್ಲಿ ಹೆಚ್ಚಾಗಿ ಕಂಡು ಬರುವ ಮೂಢನಂಬಿಕೆಗಳ ಆಚರಣೆಗಳನ್ನು ವಿವರಣಾತ್ಮಕವಾಗಿ ಚಿತ್ರಿಸಿದ್ದಾರೆ.

ಕಾದಂಬರಿಯಲ್ಲಿ ಹದಿ ಹರೆಯ ಪ್ರೇಮ–ಪ್ರಣಯವನ್ನು ವೈಭವೀಕರಿಸಿ ಮಹಿಳಾ ಸಂವೇದನೆ ಕುರಿತು ವಿಧುವೆಯರ ಬದುಕಿನ ಸ್ಥಿತಿಗತಿ, ಗೋಳು, ಸವತಿ ಮಾತ್ಸರ್ಯ ಇವುಗಳ ಬಗ್ಗೆ ತೆಳುವಾದ ಧೋರಣೆಯಲ್ಲಿ ನಿರೂಪಿಸಿದ್ದಾರೆ. ದಲಿತ ಮಹಿಳೆಯರ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೋರಿದ್ದಾರೆ, ಹೆಣ್ಣು ಮದುವೆ ಆಗಿ ಅನುಭವಿಸುವ ಯಾತನೆಗಳು ಸುಖಕ್ಕಿಂತ ಕಷ್ಟವೇ ಜಾಸ್ತಿ ಆಗಿರುತ್ತದೆ. ದೈನಂದಿನ ಚಟುವಟಿಕೆಯನ್ನು ಚಾಚು ತಪ್ಪದೆ

ನಿರ್ವಹಿಸಬೇಕು. ಗಂಡ, ಮಕ್ಕಳು, ಸಂಸಾರ, ತನ್ನ ಮೈಯಿಗೆ ಅಂಟಿಕೊಂಡ ಕೆಲಸಗಳನ್ನು ಮಾಡಿ ಜೊತೆಗೆ ತನ್ನನ್ನು ಗಂಡನಿಗೆ ಒಪ್ಪಿಸಿಕೊಳ್ಳಬೇಕು. ಹೀಗೆಲ್ಲ ಮಾಡಿದರೂ ಸಮಾಜದಲ್ಲಿ ಅನೇಕ ಸಂಕೋಲೆಗಳಲ್ಲಿ ಸಿಲುಕಿ ನಾಲ್ಕು ಗೋಡೆಗಳ ಮಧ್ಯೆ ಶರ ಪಂಜರದ ರೀತಿ ಅನುಭವಿಸುವ ನೋವು ಅವಳ ಮನಸ್ಸಿಗೆ ಯಾತನೆ ಉಂಟು ಮಾಡುತ್ತದೆ.

ಡಾ॥ ಗೀತಾರವರ ಕಾದಂಬರಿಗಳಲ್ಲಿ ಉನ್ನತ ವರ್ಗದ ಗೌಡ, ಕುಲ್ಕರ್ಣಿ, ಸಾಹುಕಾರ ಮುಂತಾದ ಗ್ರಾಮ ವ್ಯವಸ್ಥೆಯ ಆಡಳಿತಗಾರರು ಹಾಗು ಸಮಗ್ರ ಪುರುಷ ವರ್ಗವು ದಲಿತ ಸ್ತ್ರೀಯರ ಮೇಲೆಸಗುವ ಹಿಂಸೆ ಕ್ರೌರ್ಯ ಅನ್ಯಾಯಗಳು ಪ್ರಧಾನವಾಗಿ ಚಿತ್ರಣಗೊಂಡಿವೆ.

ಕಾದಂಬರಿಯಲ್ಲಿ, ಸೇಂದಿ ಬಾಡು ಹೆಣ್ಣಿನ ಮೇಲೆ ನಡೆಯುವ ದೇಹದಾಕ್ರಮಣ. ಜಗಳ, ಅಸೂಯೆ, ಮಮತೆ, ಸ್ವಾರ್ಥ ದಲಿತ ಜನತೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಡಾ. ಗೀತಾನಾಗಭೂಷಣ ರವರ ಬಹುತೇಕ ಕಾದಂಬರಿಗಳು ಸ್ತ್ರೀ ಸಂವೇದನೆಯನ್ನು ಒಳಗೊಂಡಿವೆ. 'ಮಾಪುರ ತಾಯಿ ಮಕ್ಕಳು', 'ಧುಮ್ಮಸ್ಸು', 'ದಂಗೆ', 'ಆಸರೆ', 'ನೀಲಗಂಗಾ', 'ಬದುಕು', 'ಕಾಗೆ ಮುಟ್ಟಿತು' ಈ ಕೃತಿಗಳಲ್ಲಿ ಹೆಚ್ಚಾಗಿ ದಲಿತ ಸ್ತ್ರೀಯರ ಬದುಕಿನ ಸ್ಥಿತಿಗತಿಗಳನ್ನು ಹತ್ತಿರದಿಂದ ಕಂಡು. ಸ್ತ್ರೀಯರ ಮೇಲೆ ನಡೆಯುವ ಬಲಾತ್ಕಾರ ಹಿಂಸೆ ಕ್ರೌರ್ಯ ಅನ್ಯಾಯಗಳು ಎಳೆ ಎಳೆಯಾಗಿ ಚಿತ್ರಣಗೊಂಡಿವೆ.

ಶ್ರೀಮತಿ ಗೀತಾರವರು ದಲಿತ ಲೋಕದ ಮಹಿಳೆಯರ ಬದುಕನ್ನು ಅನಾವರಣಗೊಳಿಸಿದ್ದಾರೆ, ದಲಿತ ಸ್ತ್ರೀಯರ ಸಂಘರ್ಷ, ಕೆಳಗೇರಿಯ ಹೆಣ್ಣುಗಳ ಪ್ರೀತಿ, ಪ್ರೇಮ, ಪ್ರಣಯ, ಕಾಮ. ಇವುಗಳನ್ನು ಅವರ ಕಾದಂಬರಿಗಳಲ್ಲಿ ವ್ಯವಸ್ಥಿತ ಪರಿಧಿಯಲ್ಲಿ ಚಿತ್ರಿಸಿದ್ದಾರೆ.

ಕಾದಂಬರಿಗಳಲ್ಲಿ ಸಾಹುಕಾರ ಗೌಡ ಒಟ್ಟಾರೆ ಮೇಲ್ವರ್ಗದ ಜನರು, ದಲಿತ ಸ್ತ್ರೀಯರ ಮೇಲೆಸಗುವ ದೈಹಿಕ ಹಿಂಸೆ, ಕ್ರೌರ್ಯ, ಪ್ರಧಾನವಾಗಿ ಚಿತ್ರಣಗೊಂಡಿವೆ. ಒಂದು ಸಮುದಾಯದ ಸಾಂಸ್ಕೃತಿಕ ಬದುಕನ್ನು ಸುಕ್ಷ್ಮಾತಿಸೂಕ್ಷ್ಮವಾಗಿ ಅನಾವರಣಗೊಳಿಸಿದ್ದಾರೆ.

'ಬದುಕು' ಕಾದಂಬರಿಯಲ್ಲಿ ಸ್ತ್ರೀ ಸಂವೇದನೆಯ ನೆಲೆಗಳನ್ನು ಕಾಣಬಹುದು. ಕಾಶಮ್ಮ ಮಲ್ಲಪ್ಪ ಜಮಾದಾರನ ಮಗಳು. ಊರ ಸಾವುಕಾರ ಲಿಂಗರಾಜನನ್ನು ಪ್ರೀತಿಸಿದ್ದರಿಂದ ತಾನು ಮದುವೆಯಾದ ಗಂಡ ಮಾರ್ತಾಂಡನನ್ನು ಬಿಟ್ಟು ಬಂದು ಪ್ರೇಮಿಸಿದ ಲಿಂಗರಾಜನ ಜೊತೆ ಬಾಳ್ವೆ ಮಾಡುವುದು, ಕೆಳ ವರ್ಗ ಮತ್ತು ಮೇಲ್ವರ್ಗದ ಜನರ ನಡುವೆ

ಕಂದಕವನ್ನುಂಟುಮಾಡುತ್ತದೆ. ಕಾಶಿ ತನ್ನ ದಿನ ನಿತ್ಯ ಬದುಕಿನಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ದಲಿತ ಕೇರಿ ಮಂದಿಯ ಶ್ರದ್ಧೆ, ನಂಬಿಕೆ, ಕೆಚ್ಚು, ಸ್ಥೈರ್ಯಗಳನ್ನು ಹಿಡಿದಿಡುತ್ತಲೆ ಚಾರಿತ್ರಿಕ ಸಂಘರ್ಷಗಳೊಂದಿಗೆ ತಳಕು ಹಾಕಿಕೊಳ್ಳುತ್ತದೆ. ಕಾಶಿ ಮತ್ತು ಬೆಳ್ಳಿ ಇಬ್ಬರು ದಲಿತ ಸ್ತ್ರೀಯರ, ಬದುಕಿನ ಸುತ್ತ ಹೆಣದ ಕಾದಂಬರಿ ಮುಖ್ಯವಾಗಿ ಒಂದು ಸಾಂಸ್ಕೃತಿಕ ಹುಡುಕಾಟವಾಗಿದೆ. ಮಹಿಳಾ ಸಂವೇದನೆ ಎಂಬುದು ಕೇವಲ ಸ್ತ್ರೀಯರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರಶ್ನೆಯಾಗಿ ನಿಲ್ಲುವುದಿಲ್ಲ, ಅವಳ ಮೇಲಾಗುತ್ತಿರುವ ಲೈಂಗಿಕ ಶೋಷಣೆ, ಆರ್ಥಿಕ ದಬ್ಬಾಳಿಕೆ, ಸಾಂಸ್ಕೃತಿಕ ಮಡಿವಂತಿಕೆಗಳಿಗಾಗಿ ಚರ್ಚಿತವಾಗುವ ನೆಲೆಯನ್ನು ಮೀರಿ ಅವಳ ಮನೋವೈಜ್ಞಾನಿಕ ಭಿತ್ತಿಗೂ ಚಾಚಿಕೊಳ್ಳುತ್ತದೆ.

ನೀಲವ್ವನನ್ನು ಜೋಗಿಣಿ ಪದ್ಧತಿಗೆ ಬಿಡುವ ಸಂದರ್ಭದಲ್ಲಿ ಅವಳ ಮನಸ್ಸಿನ ಅಂತರಾಳದ ನೋವನ್ನು ಕಾಣಬಹುದು. "ನಾ ಒಲ್ಲೆಪೋ...... ನಾ ಜೋಗಣಿ ಆ ಗಂಗಿಲ್ಲೋಯಪ್ಪಾ ನಾನು ಬ್ಯಾರೆ ಹೆಂಗಸರಂಗ ಮದಿ ಮಾಡ್ಕೊಂಡು ಒಬ್ಬ ಗಂಡನ ಹೆಣ್ತ್ಯಾಗಿ ಗರತ್ಯಾಗಿ ಬಾಳ್ಯಾ ಮಾಡ್ತೀನೊಯಪ್ಪಾ..... ನಾ ದೇವರ ಹೆಸರಿನ ಮ್ಯಾಲ ಸೂಳಿ ಧಂಧಾ ಮಾಡಂಗಿಲ್ಲೇಯ ವ್ವಾ........" (ಕ್ರಿ.ಸಿ. ೬೨)

ಜಮಾದಾರ ಮಲ್ಲಪ್ಪನ ದೊಡ್ಡಿ ಹೊಲ್ಯಾ ಭರಮ್ಯಾನ ಮಗಳು ನೀಲವ್ವ ತನ್ನ ಗೋಳನ್ನು ತನ್ನ ಅವ್ವನ ಜೊತೆ, ಜೋಗಿಣಿಯಾಗೋದು ನನಗೆ ಬೇಡವ್ವ ಎಂದು ಕರಳು ಹಿಂಡುವ ರೀತಿಯಲ್ಲಿ ತನ್ನ ಅಳಲನ್ನು ತೋಡಿಕೊಳ್ಳುತ್ತಾಳೆ, ಜೋಗಿಣಿ ಪದ್ಧತಿ ದಲಿತ ಕುಟುಂಬದಲ್ಲಿ ಶಾಪಗ್ರಸ್ಥವಾಗಿ ಕಾಡುತ್ತದೆ. ಈ ಸಂಪ್ರದಾಯ ಮೇಲ್ವರ್ಗದ ಜನಾಂಗದಲ್ಲಿ ಕಂಡು ಬರುವುದಿಲ್ಲ, ಆದರೆ ಜೋಗಿಣಿ ಬಿಡುವಾಗ ಈ ಮೇಲ್ವರ್ಗದವರೆ ಆದ ಗೌಡನೂ ಸಾವುಕಾರನೂ. ಕುಲ್ಕರ್ಣಿಯೂ ಜೋಗಣಿಗೆ ಕೊಡಬೇಕಾದ ಖರ್ಚನ್ನೂ ಕೊಟ್ಟು ಅವಳನ್ನು ರಾತ್ರಿ ಪಟ್ಟಕ್ಕೆ ಹಾಕಿಕೊಂಡು ಕನ್ಯೆತನವನ್ನು ಕಳೆದು ಅವಳನ್ನು ಹೆಣ್ಣು ಮಾಡುತ್ತಾನೆ. ಈ ಪದ್ಧತಿ ಮಾಮುರ ತಾಯಿಯ ಅಣತಿಯಂತೆ ನಡೆಯಬೇಕು ಎಂಬುದು ಆ ಜನಾಂಗದ ನಂಬಿಕೆ ಆದರೆ ಸಮಾಜದ ದೃಷ್ಟಿಯಲ್ಲಿ ಇದೊಂದು ಮೂಢನಂಬಿಕೆಯ ಅನಿಷ್ಠ ಪಿಡುಗು, ಇದು ಆಧುನಿಕ ಸಮಾಜಕ್ಕೆ ಒಂದು ಕಳಂಕ. ಇದರಿಂದಾಗಿ ಜೋಗಿಣಿಯಾದ ನೀಲವ್ವನ ಬದುಕು ಸಾವಿನಲ್ಲಿ ಅಂತ್ಯವಾಗುತ್ತದೆ.

ಡಾ. ಗೀತಾರವರ ಕಾದಂಬರಿಯಲ್ಲಿ ದಲಿತ ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ, ಹಿಂಸೆ, ಶೋಷಣೆ ಇತ್ಯಾದಿಯಾಗಿ ಏನೇ ನಡೆದರೂ ಅದನ್ನು ಸಹಿಸಿಕೊಂಡು, ಸಮಾಜದ ಮೇಲ್ವರ್ಗದ ಜನರ ಜೊತೆ ಸಂಘರ್ಷಕ್ಕೆ ಹೋಗದೆ ಅವರನ್ನು ಗೌರಾವಾದರಗಳಿಂದ ಕಾಣುತ್ತಿದ್ದರು.

ದಲಿತ ಜಾತಿಯ ಹೆಣ್ಣು ತನ್ನ ಮೈಯನ್ನು ಮೇಲ್ವರ್ಗದ ಗಂಡಿನ ಜೊತೆ ಹಂಚಿಕೊಳ್ಳಲು ಅದಕ್ಕೆ ಅವರಲ್ಲಿ ಇದ್ದ ಹಸಿವು ಬಡತನ, ಇವುಗಳೆ ಕಾರಣವಾಗಿತ್ತು.

'ಜೋಗಿಣಿ' ಪದ್ಧತಿಗೆ ಬಲಿಯಾದ ದಲಿತ ಮಹಿಳೆಯನ್ನು ದೇವರು, ಧರ್ಮ ಎಂಬ ಹೆಸರಿನಲ್ಲಿ ಅವಳ ದೇಹವನ್ನು ಲೈಂಗಿಕ ಕ್ರಿಯೆಯಲ್ಲಿ, ಊರ ಗೌಡನೂ ಅಥವಾ ಸಾಹುಕಾರನೂ ಅವಳ ಜೊತೆಯಲ್ಲಿ ಬಲವಂತವಾಗಿ ತೊಡಗಿಸುತ್ತಾರೆ. ಅವಳಿಗೆಂದೂ ಮದುವೆ ಅನ್ನುವುದೇ ಅವಳ ಬಾಳಿನಲ್ಲಿ ಇರದಂತೆ ಮಾಡುತ್ತಿದ್ದರು. ಇದರಿಂದಾಗಿ ದೇಹದ ಸುಖವನ್ನು ಅವರಿವರಿಗೆ ಕೊಡುತ್ತ, ಅವಳು ಮಾಪುರ ತಾಯಿಯ ಹೆಸರಿನಲ್ಲಿ ಭಿಕ್ಷೆಯನ್ನು ಬೇಡುತ್ತಾ ಗಾಢಾಂಧಕಾರದಲ್ಲಿ ಅವಳು ಜೀವನವನ್ನು ಕಳಿಯುತ್ತಾ, ಅವಳಿಗೆ ಸಮಾಜದಲ್ಲಿ ಬಾಳ್ವೆ ಮಾಡಲು ಬಹಳ ಅಪಾಯಕಾರಿ ಅನಿಸುತ್ತದೆ, ಅವಳ ಬದುಕಿನ ಕೊನೆಯ ಕ್ಷಣಗಳು ದುರಂತಮಯವಾಗಿ ಕೂಡಿರುತ್ತದೆ.

ದಲಿತ ನೋವಿನಲ್ಲಿ ಹುಟ್ಟಿ, ತುತ್ತು ಕೂಳಿಗೆ ವಿಲವಿಲನೆ ಒದ್ದಾಡುತ್ತಾ ಬದುಕಿನಲ್ಲಿ ಏಳು ಬೀಳುಗಳನ್ನು ಕಂಡು, ಮೂಢನಂಬಿಕೆಗಳೆಂಬ ಕಟ್ಟುಪಾಡಿನಲ್ಲಿ ಬಿದ್ದು, ಅವರ ಮನಸ್ಸು ಒಡೆದ ಕನ್ನಡಿಯಂತೆ ಇರುತ್ತದೆ.

ಬದುಕು ಕಾದಂಬರಿಯಲ್ಲಿ ಸಾಬವ್ವ ಗಂಡನಿಂದ ತುಳಿತಕ್ಕೆ ಒಳಗಾಗುವುದನ್ನು ಕಾಣಬಹುದು. ಸಾಬವ್ವ ಕುರುಬರ ಹಣುಮಪ್ಪನ ಮೊದಲ ಹೆಂಡತಿ. ಇವಳಿಗೆ ಮಕ್ಕಳು ಆಗಿಲ್ಲ ಎಂದು ನರೋಣಾಹಳ್ಳಿಯ ಗಂಡ ಬಿಟ್ಟ ಮಲಕವ್ವನನ್ನ 'ಉಡುಕಿ' ಮಾಡಿಕೊಂಡು ಬಂದು ಸವತಿಯರಿಬ್ಬರು ತಲೆಗೂದಲನ್ನು ಹಾಗು ಕೊರಳಿನ ಕರಿಮಣಿ ತಾಳಿಯನ್ನು ಹಿಡಿದು ಜಗಳವಾಡುವುದು ಹಾಗೂ ರಾತ್ರಿಯಲ್ಲಿ ಹಣುಮಪ್ಪನನ್ನು ಇಬ್ಬರು ಎಳೆದಾಡುವುದು, ಹಣುಮಪ್ಪ ಸಂಕಟದಿಂದ ಅವರಿಗೆ ಬೈಯುತ್ತಾ ಸಾಬ್ಬವ್ವನಿಗೆ ಒದ್ದು ಮನೆಯಿಂದ ಹೊರಹಾಕಿದಾಗ, ಸಾಬವ್ವ ಕೇರಿಯ ದೈವದವರನ್ನು ಪಂಚಾಯಿತಿ ಸೇರಿಸಿದಳು. ಪಂಚಾಯಿತಿಯಲ್ಲಿ ಗಂಡ ಹಣುಮಪ್ಪ ಬೇರೆ ಹೆಂಗಸನ್ನು 'ಉಡುಕಿ' ಮಾಡ್ಕೊಂಡು ನನಗೆ ಹೊಡೆದು ಮನೆಯಿಂದ ನಡು ರಾತ್ರಿಯಲ್ಲಿ ಹೊರಗೆ ಹಾಕಿದ್ದಾರೆ, ನನಗೆ ಅಪ್ಪ ಅವ್ವ ಇಲ್ಲದ ನನಗೆ ನೀವು ನ್ಯಾಯ ಕೊಡಿಸಿ ಎಂದು ಬೇಡಿಕೊಂಡಳು. ಹಣಮಪ್ಪನನ್ನು ನ್ಯಾಯವಾದಿಗಳು ವಿಚಾರಿಸಿದಾಗ ಅವನು ಸಾಬವ್ವನಿಗೆ ಮಕ್ಕಳಾಗಿಲ್ಲ ಅದಕ್ಕೆ ಮಲಕವ್ವನನ್ನು ಕಟ್ಟಿಕೊಂಡೆ, ಎಂದು ಹೇಳಿದನು. ಹಣಮಪ್ಪನಿಗೆ ಹೊಲ ಮನೆ ಅಂತ ಏನು ಇಲ್ಲವಾದ್ದರಿಂದ ಪಂಚಾಯಿತಿಯಲ್ಲಿ ಕಾಗದದಮೇಲೆ 'ಫಾರಿಕತಿ' ಬರೆಸಿ ಹೆಬ್ಬಟ್ಟೊತ್ತಿಸಿದರು ಹಣಮಪ್ಪ ಸಾಬವ್ವನ ಕತ್ತಿನಲ್ಲಿದ್ದ ಕರಿಮಣಿ ತಾಳಿಯನ್ನು ಕಿತ್ತುಕೊಂಡು 'ತಲಾಕನಾಮಾ' ಹೇಳಿದನು.

ಸಾಬವ್ವ ಅವನಿಂದ ದೂರ ಸರಿದು, ಧೈರ್ಯದಿಂದ ಗಂಡಿನಂತೆ ದುಡಿದು ಬದುಕುತ್ತಾಳೆ. ಅವಳು ತನ್ನ ಹರೆಯದಲ್ಲಿ ಯಾರಿಗೂ ತನ್ನ ಮೈಯನ್ನು ಒಪ್ಪಿಸಿ ಬಾಳದೆ ದಿಟ್ಟತನದ ಹೆಣ್ಣಾಗಿ ಬದುಕಿದಳು. ಹೀಗೆ ಸಾಬವ್ವನ ಬದುಕು ಕಣ್ಣೀರಿನಲ್ಲಿ ಅಂತ್ಯವಾಗುತ್ತದೆ.

'ಹಸಿಮಾಂಸ ಮತ್ತು ಹದ್ದುಗಳು" ಎಂಬ ಕೃತಿಯಲ್ಲಿ ಅನಕ್ಷರಸ್ಥ ಮುಗ್ಧ ದಲಿತ ಮತ್ತು ಮಾದಿಗ ಬಡಜನತೆಯನ್ನು ಮೇಲ್ವರ್ಗದವರು ಅವರನ್ನು ನಿರಂತರವಾಗಿ ಶೋಷಣೆ ಹಿಂಸೆ ಮಾಡುತ್ತ ಅವರ ಬದುಕನ್ನು ನರಕಯಾತನೆ ಮಾಡುವ ದೃಶ್ಯ ಹೃದಯವಿದ್ರಾವಕ ಚಿತ್ರಣವನ್ನು ಈ ಕೃತಿಯಲ್ಲಿ ಅನಾವರಣಗೊಳಿಸಿದ್ದಾರೆ.

ಈ ಕೃತಿಯಲ್ಲಿ ಕೇಂದ್ರ ಬಿಂದುವೆನ್ನಿಸಿದ ಲಚ್ಚಿಯ ದಾರುಣ್ಯ ಜೀವನದ ಅವಳ ಬದುಕು, ದುರಂತದಿಂದ ಕೂಡಿರುತ್ತದೆ ಅವಳು ಅನುಭವಿಸುವ ಯಾತನೆ, ನೋವು, ಸಂಕಟ, ಪ್ರಜ್ಞಾಹೀನ ಸ್ಥಿತಿಗೆ ಕೊಂಡೂಯ್ಯುತ್ತದೆ.

ಲಚ್ಚಿ ದಲಿತ ಫಕೀರಪ್ಪನ ಮಗಳು. ಚಿಕ್ಕ ವಯಸ್ಸಿನಲ್ಲಿ ತಂದೆ–ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿ ಪ್ರಿಯಕರ ಕಾಶೀನಾಥನನ್ನು ನಂಬಿ ಜೀವನವನ್ನು ಕಳೆಯುತ್ತಾಳೆ, ಕಾಮುಕ ಕುಲಕರ್ಣಿಯ ಕ್ರೂರ ದೃಷ್ಟಿಗೆ ಬಲಿಯಾಗುತ್ತಾಳೆ. ಕುಂಬಳಕಾಯಿ ಕಳವು ಮಾಡಿದ ವಿಚಾರಕ್ಕೆ ಕುಲಕರ್ಣಿ ಅವಳನ್ನು ಜೈಲಿಗೆ ಹಾಕಿಸುತ್ತಾನೆ. ಅವಳು ಜೈಲಿನ ಅಧಿಕಾರಿಗಳಿಂದ ಬಲತ್ಕಾರವಾಗಿ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಅನಂತರ ಜೈಲಿನಿಂದ ಲಚ್ಚಿಗೆ ಬಿಡುಗಡೆ ಆದಾಗ ಅವಳಿಗೆ ಕಾಶೀನಾಥನ ಮುಖ ಎಲ್ಲಿಯೂ ಕಾಣಿಸಲಿಲ್ಲ. ಅವನು ಕಾಣದೆ ಹೋದದ್ದು ಮನಸ್ಸಿಗೆ ಆಘಾತ ಉಂಟಾಗಿ, ಅವಳು ಮುಂದೆ ಸ್ತ್ರೀನಿಕೇತನದಲ್ಲಿ ಆಶ್ರಯ ಪಡೆಯುತ್ತಾಳೆ. ಅಲ್ಲಿನ ಮೇಲ್ವಿಚಾರಕಿ ಅವಳನ್ನು ಮೈ ಮಾರುವಿಕೆಗೆ ಇಳಿಸುತ್ತಾಳೆ. ಅವಳ ಅಳು ಅರಣ್ಯರೋದನವಾಯಿತು. ಅವಳು ಕಾಮುಕರಿಗೆ ಬಲಿಯಾಗುತ್ತಾಳೆ. ಹೀಗೆ ಸಾಗುವ ಲಚ್ಚಿಯ ಜೀವನದ ಬದುಕು ಮುಂದೆ ಬಸ್ಸೆಣ್ಣೆ ಎಂಬ ವಿಧುರನ ಹೆಂಡತಿಯಾಗಿ ಲಚ್ಚಿ 'ಸ್ತ್ರೀನಿಕೇತನ' ಬಿಟ್ಟು ಅವನ ಮನೆಗೆ ಬಂದರೂ ಅಲ್ಲಿ ಅವಳು ದೈಹಿಕ ಹಿಂಸೆಗೆ ಒಳಗಾಗುತ್ತಾಳೆ. ಬಸ್ಸೆಣ್ಣೆ ನಾಯಿಯಂತೆ ಇವಳ ಮೈ ನೆಕ್ಕಿದ ಗಿಡುಗನಂತೆ ಅಪ್ಪಿ ಹಿಡಿದ ಕಾಗೆಯಂತೆ ಕುಕ್ಕಿದ ರಣಹದ್ದಿನಂತೆರಗಿ ಹಸಿಮಾಂಸ ಹಿಂಡಿದಾಗ ಲಚ್ಚಿ ಕಂಗಾಲಾಗಿ ನರಳಿದಳು. ಪುರುಷ ಪ್ರಧಾನ ಸಮಾಜದ ಕ್ರೂರ ಹಿಂಸೆಗೆ ಬಲಿಯಾಗುತ್ತಾಳೆ. ಲಚ್ಚಿಯನ್ನು ಬಸ್ಸೆಣ್ಣೆ ಅವಳನ್ನು ನಡತೆಯ ಬಗ್ಗೆ ಪ್ರಶ್ನಿಸುತ್ತಾ ಮನೆಯಿಂದ ಹೊರಗಟ್ಟುತ್ತಾನೆ. ತುಂಬು ಬಸುರಿಯಾದ ಲಚ್ಚಿ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ, ಕೂಸು ಗಂಡಾಯಿತಲ್ಲ ಎನ್ನುವ ಬೇಸರದಿಂದ ಬಸ್ಸೆಣ್ಣೆಯ ಮೊಂಡುತನದಿಂದ ಲಚ್ಚಿ ಹುಚ್ಚಿಯಾಗಿ ಮಗುವಿನ ಜೊತೆ ಬಾವಿಗೆ ಬೀಳುತ್ತಾಳೆ ಮಗು ಸತ್ತು ತಾನು ಉಳಿದಾಗ 'ಬುಕು' ಇನ್ನಷ್ಟು ಭಯಂಕರವಾಗುತ್ತದೆ.

ಹಸಿಮಾಂಸಕ್ಕೆ ರಣ ಹದ್ದುಗಳು ಎರಗಿ ಬಂದಂತೆ ಲಚ್ಚಿ ಎಂಬ ದಲಿತ ಹೆಣ್ಣಿನ ಮೇಲೆ ಕಾಶೀನಾಥ, ಕುಲಕರ್ಣಿ, ಖಾಕಿಧಾರಿಗಳು, 'ಸ್ತ್ರೀನಿಕೇತನ'ದ ಅಧಿಕಾರಿಗಳು, ಅವಳನ್ನು ಮಾರಾಟ ಮಾಡಿದಾಗ ಬಂದ ಗಂಡಸರು ಹಾಗೂ ತಾಳಿ ಕಟ್ಟಿದ್ದ ಬಸ್ಸೆಣ್ಣ ಗಂಡನಾಗಿ ಬಂದರೂ ಅವಳ ದೇಹವನ್ನು ರಣಹದ್ದಿನಂತೆ ಕುಕ್ಕಿ ಕುಕ್ಕಿ ತಿಂದು ಕೊನೆಯಲ್ಲಿ ಅವಳನ್ನು ನರಕಯಾತನೆಗೆ ತಬ್ಬಿದರು. ಹೆಣ್ಣು ಕೂಡ ಒಂದು ವ್ಯಕ್ತಿ ಅವಳಿಗೂ ಬದುಕುವ ಹಂಬಲವಿದೆ, ಎಂಬುದನ್ನು ಮರೆತು ಹೆಣ್ಣಿನ ಮೇಲೆರುವ ಕ್ರೌರ್ಯವೇ ಈ ಕಾದಂಬರಿಯ ವಸ್ತುವಾಗಿದೆ.

ಇದೇ ಹಿನ್ನೆಲೆಯಲ್ಲಿ ದಂಗೆ ಕಾದಂಬರಿ ನೋಡಿದಾಗ ದುರುಗಿ ಎಂಬ ದಲಿತ ಮಹಿಳೆಯ ಬದುಕಿನ ನೋವು, ನಲಿವಿನ ಚಿತ್ರಣ ಅನಾವರಣಗೊಳ್ಳುತ್ತದೆ. ದುರ್ಗಿ ಅನಾಥೆಯಾಗಿದ್ದು ಅವಳು ತನ್ನ ಅಕ್ಕನ ಮನೆಯಲ್ಲಿ ಆಶ್ರಯ ಪಡೆದುಕೊಳ್ಳುತ್ತಾಳೆ. ತನ್ನ ಭಾವನಿಂದಲೆ ಅತ್ಯಾಚಾರಕ್ಕೆ ಒಳಗಾಗಿ ತನ್ನ ಶೀಲವನ್ನು ಕಳೆದುಕೊಳ್ಳುತ್ತಾಳೆ, ಅದನ್ನು ಹೇಳಿಕೊಳ್ಳುವ ಸ್ಥಿತಿ ಅವಳಿಗೆ ಇರಲಿಲ್ಲ ಮುಂದೆ ಮಾಳಪ್ಪನ ಜೊತೆ ಮದುವೆ ಆಗುತ್ತದೆ, ಮಾಳಪ್ಪ ಮೈಗಳ್ಳನಾಗಿದ್ದು ಅವಳ ಸಂಸಾರದಲ್ಲಿ ಬಹಳಷ್ಟು ದಿನ ನಿಲ್ಲಲಾರದೆ ದೇಶಾಂತರ ಹೊರಟುಹೋಗುತ್ತಾನೆ. ದುರ್ಗಿ ಸ್ವಾತಿ ಎಂಬ ಮಗುವಿಗೆ ಜನ್ಮ ನೀಡಿ ಅವಳು ಅನೇಕ ಕಷ್ಟಗಳಿಗೆ ಗುರಿಯಾಗುತ್ತಾಳೆ. ಗಂಡ ಬಿಟ್ಟವಳ ಮೇಲೆ ಅನೇಕ ಕಾಮುಕರು ಕಣ್ಣು ಹಾಯಿಸುತ್ತಾರೆ. ಅವರಲ್ಲಿ ಕುಕ್ಕಣಿ ಗೋವಿಂದಪ್ಪ ದುರ್ಗಿಯ ಮನಸ್ಸಿಗೆ ಸೋತು, ಆಕೆಯನ್ನು ತನ್ನ ತೋಟದ ಮನೆಯ ರಾಣಿಯಾಗಿ ಇಟ್ಟುಕೊಳ್ಳುತ್ತಾನೆ. ಮುಂದೆ ದುರ್ಗಿಯ ಮಗಳು ಸ್ವಾತಿ ಗೋವಿಂದಪ್ಪನ ಮಗ ಸೀನಪ್ಪನನ್ನು ಪ್ರೀತಿಸಿ ಮದುವೆಯಾಗುವ ಹಂತಕ್ಕೆ ಬಂದಾಗ ಜಾತಿ ಪ್ರಜ್ಞೆ ಎದ್ದು ಕಾಣುತ್ತದೆ ಇದನ್ನು ಅರಿತ ಗೋವಿಂದಪ್ಪ ದುರುಗಿಯನ್ನು ಆಕೆಯ ಮಗಳನ್ನು ಕೊಲ್ಲುವ ಸಂಚು ಹೂಡುವಷ್ಟರಲ್ಲಿ ಇದನ್ನು ತಿಳಿದ ದುರ್ಗಿ ರೈಲಿನಲ್ಲಿ ಪ್ರಯಾಣಿಸುವಾಗ ಓಡುವ ರೈಲಿನಿಂದ ಗೋವಿಂದಪ್ಪನನ್ನು ತಳ್ಳಿಬಿಡುತ್ತಾಳೆ. ಗರತಿಯಾಗಿರ ಬೇಕೆಂಬ ಆಸೆಯಿಂದ ದುರ್ಗಿ ಮಗಳ ಭವಿಷ್ಯಕ್ಕೆ ತನ್ನನ್ನು ಗೋವಿಂದಪ್ಪನಿಗೆ ಒಪ್ಪಿಸಿಕೊಳ್ಳುತ್ತಾಳೆ. ದಲಿತ ಮತ್ತು ಮೇಲ್ವರ್ಗದ ಜಾತಿ ನಿಂದನೆ ಎದ್ದು ಕಂಡರೂ ಅದನ್ನು ಪ್ರತಿಭಟಿಸಿ ಹೋರಾಡುವ ಧೈರ್ಯವಿದ್ದರೂ ಮೂಕವೇದನೆಯಲ್ಲಿ ಕಾದಂಬರಿ ಅಂತ್ಯಗೊಳ್ಳುತ್ತದೆ. ತುಳಿತಕ್ಕೊಳಗಾದ ದಲಿತ ಸ್ತ್ರೀಯ ನೋವು ನಲಿವನ್ನು, ಕ್ರೌರ್ಯ ದೌರ್ಜನ್ಯಗಳನ್ನು ಗೀತಾರವರು ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

'ಮಾಮರ' ತಾಯಿ ಮಕ್ಕಳು' ಕಾದಂಬರಿಯಲ್ಲಿ ಜೋಗಿಣಿ ಸಂಪ್ರದಾಯವನ್ನು ಒಳಗೊಂಡ ಕೃತಿ. ದೇವಿಯ ಹೆಸರಿನಲ್ಲಿ ದಲಿತ ಹೆಣ್ಣು ಮಗಳನ್ನು ಸೂಳೆಗಾರಿಕೆಗೆ ಒಪ್ಪಿಸುವ ಪದ್ಧತಿ.

ಸಮಾಜದ ಸ್ವಾರ್ಥ ಬದುಕಿನಲ್ಲಿ ಅಸಹನೀಯವೆನಿಸುತ್ತದೆ. ಚಂದ್ರಪ್ಪನ ಮಗಳು ಸಿಂಗಾರಿ ಸೋದರ ಮಾವನ ಮಗ ಶಿವರುದ್ರನನ್ನು ಪ್ರೀತಿಸಿದರೂ. ಜೋಗಣಿ ಸಂಪ್ರದಾಯಕ್ಕೆ ಬಲಿಯಾಗಿ ಸೂಳೆಗಾರಿಕೆಗೆ ಇಳಿಸಿದ್ದೇ ಈ ಕಾದಂಬರಿಯ ವಸ್ತು. ಮೇಲ್ವರ್ಗದ ಜನರು ತಮ್ಮ ಸಂಪ್ರದಾಯವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ದೇವರ ಹೆಸರಿನಲ್ಲಿ ನಡೆಯುವ ಈ ಮೂಢನಂಬಿಕೆ ಪದ್ಧತಿಯನ್ನು ರೂಢಿಗತವಾಗಿ ಮಾಡಿಕೊಂಡು ದಲಿತ ಸ್ತ್ರೀಯರನ್ನು ತಮ್ಮ ಲೈಂಗಿಕ ದಾಹಕ್ಕೆ ಬಳಸಿಕೊಂಡು ಅವರ ಮೇಲೆ ದಬ್ಬಾಳಿಕೆಯನ್ನು ಮಾಡುತಿದ್ದರು. 'ಜೋಗತಿ' ಸಂಪ್ರದಾಯ ಸಮಾಜದ ದೃಷ್ಟಿಯಲಿ ಕೀಳರಿಮೆಯನ್ನು ಮೂಡಿಸುತ್ತದೆ. ದಲಿತ ಹೆಣ್ಣು ತನ್ನ ಬದುಕಿನಲ್ಲಿ ದೇಹದ ಸುಃಖಕ್ಕಿಂತ ಹೆಚ್ಚು ಆಂತರಿಕ ನೋವಿನ ತೊಳಲಾಟಕ್ಕೆ ಒಳಗಾಗುತ್ತಾಳೆ.

ಕಾಗೆ ಮುಟ್ಟಿತು ಕಾದಂಬರಿಯಲ್ಲಿ ಎರಡು ಕುಟುಂಬಗಳ ನಡುವೆ ನಡೆಯವಂತಹ ಬದುಕಿನ ಚಿತ್ರಣವನ್ನು ನಿರೂಪಿಸುತ್ತದೆ. ಶಿವಳ್ಳಿಯ ಉಗ್ರಪ್ಪಗೌಡ ಆತನ ಎರಡನೇ ಹೆಂಡತಿ ಗಂಗಮ್ಮ. ಕಿಲಾರಿ ಭೂಕಂಪದಲ್ಲಿ ನಿರ್ಗತಿಕನಾಗಿ ಬಂದು ಗೌಡನಲ್ಲಿ ಜೀತದಾಳಾಗಿ ನೆಲೆ ನಿಲ್ಲುವ ಬಾಳ್ಯಾ ಆತನ ಹೆಂಡತಿ ಸೋನಿ ಈ ನಾಲ್ಕು ಪಾತ್ರಗಳು ಬಹಳ ಪ್ರಮುಖವಾಗಿವೆ. ಉಗ್ರಪ್ಪ ಸೋನಿಯ ಒತ್ತಾಯದಿಂದ ಅನುಭವಿಸುವುದು ಬಾಳ್ಯಾ ಗೌಡನ ಹೆಂಡತಿ ಗಂಗಮ್ಮ ಬಾಳ್ಯಾನೊಂದಿಗೆ ಕೂಡಿ ಗಂಡು ಸಂತಾನವಿಲ್ಲದ ಕೊರತೆಯನ್ನು ನೀಗಿಸಿಕೊಳ್ಳುತ್ತಾಳೆ, ಜೊತೆಗೆ ದಾಂಪತ್ಯ ಜೀವನದ ಸುಃಖವನ್ನು ಪಡೆಯುತ್ತಾಳೆ. ಸೋನಿಯ ಮಗ ಕರ್‍ಯಾ ಉಗ್ರಪ್ಪನ ಬೀಜವಾದರೆ, ಗಂಗಾಳಿಗೆ ಹುಟ್ಟಿದ ಮಗ ಶರಣ ಬಸಪ್ಪ ಬಾಳ್ಯನ ಬೀಜ, ಹೀಗೆ ಕಾದಂಬರಿಯಲ್ಲಿ ಮೇಲು ಕೀಳು ಎನ್ನದೆ ಶ್ರಮದ ನೆಲೆಯಲ್ಲಿ ಶೋಷಣೆಗೊಳಗಾದರೆ, "ಸ್ತ್ರೀಯರು ಶ್ರಮ ಹಾಗು ಲೈಂಗಿಕ ನೆಲೆಯಲ್ಲಿ, ಸ್ವಜಾತಿ ಪುರುಷರಿಂದ ಮಾನಸಿಕ ನೆಲೆಯಲ್ಲಿ ಶೋಷಿತರಾಗುತ್ತಾರೆ ಎಂಬ ಕಟು ಸತ್ಯವನ್ನು ಪ್ರಸ್ತುತ ಕಾದಂಬರಿ ಅನಾವರಣಗೊಳಿಸುತ್ತದೆ".

ಊಳಿಗಮಾನ್ಯ ಜಮೀನುದಾರಿಕೆಯ ಕ್ರೌರ್ಯಗಳಿಂದ ಶೋಷಣೆಗೊಳ ಪಡುವ ಮಹಿಳೆಯರ ಸಂವೇದನೆಗಳನ್ನೂ ದಾಖಲಿಸಿರುವ ವಿಶಿಷ್ಟ ಕೃತಿಯಾಗಿದೆ. ಇದೆ ರೀತಿ ಈ ಕಾಗೆ ಮುಟ್ಟಿತು ಕೃತಿಯಲ್ಲಿ ಇನ್ನೆರಡು ಶೋಷಿತ ಪಾತ್ರಗಳು ಬರುತ್ತವೆ. ಮಾದಗ ಮೂಕ್ಯಾ, ಚೆನ್ನಿ ಹಾಗೂ ಕುಕ್ಕಣ್ಣಿಯರ ಪ್ರಸಂಗ ದಲಿತ ಮಹಿಳೆಯರ ಬದುಕಿನ ಸಂಕೀರ್ಣ ಸ್ವರೂಪವನ್ನು, ಪುರುಷ ಶೋಷಣೆಯ ಇನ್ನೊಂದು ಮುಖವನ್ನು ಸೂಕ್ಷ್ಮವಾಗಿ ದರ್ಶಿಸುತ್ತಾರೆ.

ಮೂಕ್ಯ ತಾನು ಮಾಡಿದ ಸಾಲಕ್ಕೆ ತನ್ನ ಹೆಂಡತಿ ಚೆನ್ನಿಯನ್ನು ಕುಕ್ಕಣ್ಣಿಯಲ್ಲಿ ಅಡವಿಟ್ಟು, ಅವನು ದುಡಿದು ಬಿಡಿಸುವಷ್ಟರಲ್ಲಿ ಕುಲಕರ್ಣಿ ಚೆನ್ನಿಯನ್ನು ತನ್ನ ದೈಹಿಕ ಸುಖದಲ್ಲಿ

ಅನುಭವಿಸಿ, ಅವಳನ್ನು ಬಸಿರು ಮಾಡಿದನು. ಇದು ಮೂಕ್ಯನಿಗೆ ದಂಗು ಬಡಿದಂತಾಯಿತು, ಅವನು ಊರಿನ ಪಂಚಾಯಿತಿ ಮಾಡಿಸಿದನು. ಬಸಿರು ಮಾಡಿಸಿದವನೆ ಸಾಕಬೇಕು ಎಂದಾಗ ಚೆನ್ನಿಯ ಮನಸ್ಸು ಸಿಡಿದೇಳುತ್ತದೆ. ಜಮೀನ್ದಾರಿ ಪದ್ಧತಿ ಎದ್ದು ಕಾಣುತ್ತದೆ. ದಲಿತ ಸ್ತ್ರೀಯರ ಮೇಲೆ ಮೇಲ್ವರ್ಗದ ಜನರು ನಡೆಸುವ ಕ್ರೌರ್ಯ ಸಮಾಜದಲ್ಲಿ ಆಘಾತವನ್ನುಂಟು ಮಾಡುತ್ತದೆ.

ಡಾ. ಗೀತಾನಾಗಭೂಷಣರವರ ಕೃತಿಗಳಲ್ಲಿ ಹೆಣ್ಣಿನ ಲೈಂಗಿಕತೆಯ ಸ್ವೀಕರಣ ನಿರಾಕರಣದ ಸಂಘರ್ಷದಲ್ಲಿ ಬದುಕಿನ ಪರಿಭಾಷೆ ರೂಪಗೊಳ್ಳುತ್ತದೆ. ಇಲ್ಲಿಯ ನಾಯಕಿಯರು ಪುರುಷ ಕೇಂದ್ರದ ಪರಿಧಿಯಲ್ಲಿ ಸುತ್ತುವ ಸ್ತ್ರೀ ಮಾದರಿಗಳು, ದೇಹ ಬದ್ದ ಸೌಂದರ್ಯ, ಪ್ರೇಮ-ಕಾಮಗಳಲ್ಲೆ ಬದುಕಿನ ಸೋಲು-ಗೆಲುವುಗಳನ್ನು ಕಂಡುಕೊಳ್ಳುವವರು. ದಲಿತ ಜಗತ್ತಿನೊಳಗಿನ ತಾಕಲಾಟ ಸಣ್ಣತನ, ಸ್ವಾರ್ಥ, ಜಗಳ, ಅಸಹನೀಯತೆ, ಮಮತೆ ಮಾರ್ದವಗಳು ಅಲಕ್ಷ್ಯಕ್ಕೊಳಗಾದ್ದರಿಂದ ಬದುಕು ಜಟಿಲಗೊಳ್ಳುವುದನ್ನು ಕಾಣಬಹುದು.

ಗೀತಾರವರ ಕಾದಂಬರಿಗಳು ಹೆಣ್ಣನ್ನು ಸಮಾಜದ ಮುಖ್ಯಘಟಕವಾಗಿ ಭಾವಿಸುತ್ತವೆ. ಹೆಣ್ಣಿನ ವೈಯಕ್ತಿಕ ಬದುಕಿನಲ್ಲಿ ನಡೆಯುವ ಸಂಗತಿಗಳು, ಸಾಮಾಜಿಕ, ರಾಜಕೀಯ ಕಾರಣಗಳ ಪರಿಣಾಮಗಳು ಎಂಬುದನ್ನು ನಿರೂಪಿಸುತ್ತಾರೆ. ದಲಿತ ಸ್ತ್ರೀಯರ ಮೇಲೆ ನಡೆಯುವ ದೌರ್ಜನ್ಯ ಲೈಂಗಿಕ ಶೋಷಣೆಯನ್ನು ಪ್ರಧಾನವಾಗಿಟ್ಟುಕೊಂಡು ಕಾದಂಬರಿಗಳನ್ನು ರಚಿಸಿದ್ದಾರೆ.

❖ ❖ ❖

ಅಧ್ಯಾಯ – 4

ಪ್ರಾದೇಶಿಕ ವೈಶಿಷ್ಟತೆ

ಡಾ. ಗೀತಾನಾಗಭೂಷಣರವರ ಕಾದಂಬರಿಗಳಲ್ಲಿ ವ್ಯಕ್ತವಾಗುವ ಭೌಗೋಳಿಕ ಪರಿಸರವೆಲ್ಲ ಆ ಪ್ರದೇಶದ ಜನಪದ ಪರಿಸರವೇ ಆಗಿರುತ್ತದೆ. ಪ್ರಾದೇಶಿಕ ಕಾದಂಬರಿಗಳು ಎಂದು ಗುರುತಿಸಿಕೊಳ್ಳಬೇಕಾದರೆ, ಆ ಪ್ರದೇಶದ ಜೀವನದ ರೀತಿ ನೀತಿಗಳು ಅವರು ಆಚರಿಸುವ ಆಚರಣೆ ವಿಧಿವತ್ತಾದ ಕ್ರಿಯೆಗಳು ಮೊದಲಾದವುಗಳ ಯಥಾವತ್ತಾದ ನಿರೂಪಣೆಯನ್ನು ಹೊಂದಿರಬೇಕಾಗುತ್ತದೆ.

ಕಾದಂಬರಿಯ ಭಾಷೆಯ ಶೈಲಿ ಹೈದ್ರಾಬಾದ್ ಕರ್ನಾಟಕದ ಕಲ್ಬುರ್ಗಿ ಜಿಲ್ಲೆಯ ಆಡು ಭಾಷೆಯಾಗಿದೆ. ಡಾ. ಗೀತಾರವರ ಒಲವು ಹೆಚ್ಚಿನ ಪ್ರಾದೇಶಿಕ ಭಾಷೆಯಲ್ಲಿದೆ, ಹಿಂದಿ, ಉರ್ದು, ಬೀದರ ಭಾಷೆಯ ಮಿಶ್ರಿತ ಸಂಭಾಷಣೆಯಿಂದ ಕೂಡಿದೆ. ಕಲ್ಬುರ್ಗಿ ಪ್ರಾಂತ್ಯದ ಗ್ರಾಮೀಣ ಪ್ರದೇಶಗಳನ್ನು ಹತ್ತಿರದಿಂದ ನೋಡಿದ ಡಾ॥ ಗೀತಾರವರು ಅಲ್ಲಿನ ಜನರ ಬದುಕು–ಬವಣೆ, ನೋವು–ನಲಿವು, ಆಚಾರ–ವಿಚಾರ, ಶಾಂತಿ–ಕಲಹ, ಎಲ್ಲವನ್ನು ಪ್ರಾದೇಶಿಕ ಭಾಷೆಯ ಮೂಲಕ ಸಮರ್ಥವಾಗಿ ರಚಿಸಿದ್ದಾರೆ.

ಡಾ. ಗೀತಾರವರ ಬಹುತೇಕ ಕತೆಗಳು ಬಂಡಾಯ ಧೋರಣೆಗಳಾಗಿವೆ, ಗ್ರಾಮೀಣ ಶೋಷಿತರ ನೊಂದವರ ಬದುಕಿನ ಕಥೆಯ ವಸ್ತುವಾಗಿದೆ 'ನೀಲಗಂಗಾ', 'ಹಸಿಮಾಂಸ ಮತ್ತು ಹದ್ದುಗಳು', 'ಮಾಪುರ ತಾಯಿಯ ಮಕ್ಕಳು' ಕಾದಂಬರಿಗಳು ಪ್ರಾದೇಶಿಕ ಭಾಷೆಯಿಂದ ಕೂಡಿವೆ.

'ಬದುಕು' ಹಾಗೂ 'ಕಾಗೆ ಮುಟ್ಟಿತು', ಎರಡು ಕಾದಂಬರಿಗಳಲ್ಲಿ ಶಿವಳ್ಳಿ ಮತ್ತು ಸುತ್ತಣ ಪರಿಸರ ಸಾಮಾಜಿಕ ಸಂಸ್ಕೃತಿಗಳನ್ನು ಕಾಣಬಹುದು, ಚುಂಚೂರಿನ ಮಾಪುರ ತಾಯಿಯ ಜಾತ್ರೆ, ಅಲ್ಲಿ ನಡೆಯುವ ಪ್ರಾಣಿ ಬಲಿ, ಪೂಜೆ ಪುರಸ್ಕಾರ ಜೋಗಿಣಿ ಪದ್ಧತಿ, ಹಬ್ಬಹರಿದಿನಗಳ ಆಚರಣೆ ಹುಟ್ಟು ಸಾವು ಸಂಸ್ಕಾರದ ಸಂದರ್ಭಗಳನ್ನು ಚಿತ್ರಿಸಿದ್ದಾರೆ.

ಡಾ. ಗೀತಾರವರ ಬದುಕು ಕಾದಂಬರಿಯಲ್ಲಿ 'ಪ್ರಾದೇಶಿಕತೆ'ಯನ್ನು ಗುರುತಿಸುವಾಗ ಅವರು ಸಮಾಜದಲ್ಲಿ ಒಂದು ಸಮುದಾಯದ ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ ಧಾರ್ಮಿಕ ಆಚರಣೆಗಳನ್ನು ಆ ಪ್ರದೇಶದ ಪರಿಸರ ಚಿತ್ರಣವನ್ನು ಜಾನಪದ ಗ್ರಾಮೀಣ

ಭಾಷೆಯ ಒಗಟು, ನುಡಿಗಟ್ಟು, ಉರ್ದು, ಮರಾಠಿ ಮಿಶ್ರಿತ ಪದಪುಂಜಗಳನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ.

'ಬದುಕು' ಕಾದಂಬರಿ ಹೈದ್ರಾಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಶಿವಳ್ಳಿ, ಸಾವಳಗಿ, ಬಾಸಗಿ, ಭೀಮಳ್ಳಿ ಇವುಗಳ ಗ್ರಾಮೀಣ ಪರಿಸರದ ಚಿತ್ರಣವನ್ನು ಅಲ್ಲಿ ವಾಸಿಸುವ ಕೆಳಗೇರಿ ದಲಿತ ಜನಾಂಗದ ಗುಡಿಸಲೊಳಗಿನ ಬಡತನ, ಜನಪದ ಬದುಕಿನ ಹೋರಟಗಳನ್ನು ನೋವು–ನಲಿವು, ಕಷ್ಟ–ಸುಖಗಳನ್ನು ಹತ್ತಿರದಿಂದ ಕಂಡಂತಹ ಗೀತಾರವರು. ಬಯಲುಸೀಮೆಯ ಗ್ರಾಮ್ಯ ಭಾಷೆಯ ಸೊಗಡಿನಲ್ಲಿ ವಿವರಣಾತ್ಮಕವಾಗಿ ರಚಿಸಿದ್ದಾರೆ.

ಡಾ. ಗೀತಾರವರು ಶಿವಳ್ಳಿಯ ಪರಿಸರವನ್ನು ವಿವರಿಸುತ್ತಾ ಅಲ್ಲಿ ಕಾಣುವ ಬನದಲ್ಲಿರುವ ಯಾಲಕ್ಕಿ ಸೇಂದಿ ಗಿಡಗಳು, ಕಾಡಸಿದ್ದನ ಬೆಟ್ಟ ಹೆಮ್ಮರಗಳ ಚಿತ್ರಣವನ್ನು, ಊರಿನೊಳಗಿರುವ ಮ್ಯಾಗೇರಿ, ಕೇಳಗೇರಿ, ಹೋಲಗೇರಿಯ ಕೇರಿ ಏಂಗಡನೆಗಳನ್ನು ಮತ್ತು ಅಲ್ಲಿ ವಾಸಿಸುವ ಗೌಡ, ಸಾವುಕಾರ, ಕುಕ್ಕಣಿ, ಸುಬೇದಾರ ಎಂಬ ಮೆಲ್ವರ್ಗದ ಮನೆಗಳ ಜೊತೆ ಕುರುಬರು, ಗೊಲ್ಲರು. ಬುಡುಬುಡುಕೆಯವರ ಮನೆಗಳನ್ನು ಅವರು ಬಳಸುವ ಉಡುಗೆ ತೊಡುಗೆಗಳ ಜೊತೆ ಸಾಮಾಜಿಕ ಚಿತ್ರಣವನ್ನು ಸ್ಪಷ್ಟವಾಗಿ ನೀಡಿದ್ದಾರೆ.

ಬದುಕು ಕಾದಂಬರಿಯಲ್ಲಿ ಚುಂಚೂರು ಮಾಪುರ ತಾಯಿ ದೇವಿಯ ಜಾತ್ರೆ ಪ್ರಾರಂಭದಲ್ಲಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೆಳಗೇರಿ ಹಾಗೂ ಮ್ಯಾಗೇರಿಗಳನ್ನು ಹಸನು ಮಾಡುವುದು. ಹೊಲೆ ಮಾದಿಗರ, ಕಾಟಕ ಕಬ್ಬಲಿಗರ, ಕುರುಬ, ತಳವಾರ ಬ್ಯಾಡ, ಗೊಲ್ಲರಂತೆ. ಹಲವು ಶೂದ್ರ ಜನಾಂಗದ ಗುಡಿಸಲುಗಳೆಲ್ಲವನ್ನು ಶುಚಿ ಮಾಡುವುದು ಮತ್ತು ಮುಟ್ಟಾದ ಹೆಂಗಸರು ಮನೆಯೊಳಗೆ ಬರುವ ಹಾಗಿಲ್ಲ ಮತ್ತು ಗಂಡ ಹೆಂಡಿರು ಒಂದೆ ಹಾಸಿಗೆಯಲ್ಲಿ ಮಲಗಿದರೂ ಮಗ್ಗಲು ಕೂಡಿಸುವ ಹಾಂಗಿಲ್ಲ. ಈ ಪದ್ಧತಿ ಒಂದು ಜನಾಂಗದ ಸಂಸ್ಕೃತಿಯ ಪ್ರಾದೇಶಿಕ ಆಚರಣೆಗಳ ನಿರೂಪಣೆಯಾಗಿದೆ.

ಮಲ್ಲಪ್ಪ ಜಮಾದಾರನ ಮನೆದೇವತೆಗಳಾದ ಚೊಂಚುರು ಮಾಪುರತಾಯಿ ತುಳಜಾಪುರ ಅಂಬಾಭವಾನಿ, ಗೋಳ್ಯಾದ ಲಕ್ಕವ್ವ, ನಾಗಾಯಿ ಎಲ್ಲವ ಮತ್ತು ಶಿವಳ್ಳಿಯಲ್ಲಿನ ಮನೆ ಒಳಗಿನ ದೇವತೆಗಳಾದ ಕರಿಸೀರೆ ಲಗಸಿಮಿ, ಕೆಂಪು ಸೀರಿ ಲಗಸಮಿ. ಆ ದೇವತೆಗಳ ದೈವಿಶಕ್ತಿಯನ್ನು ವಿವರಣಾತ್ಮಕವಾಗಿ ನಿರೂಪಿಸಿದ್ದಾರೆ.

ಆ ಪ್ರದೇಶದಲ್ಲಿ ದಲಿತರಲ್ಲಿ ಕಂಡು ಬರುವ ಗಂಧದ ಹುಟಗಿಯ ಹೆಸರಿನಲ್ಲಿ ಬರಿ ಬತ್ತಲೆಯಲ್ಲಿ ಗುಡಿ ಸುತ್ತುವುದು, 'ಜೋಗಣಿ' ಎಂದು ಹದಿ ಹರೆಯದ ಹೆಣ್ಣು ಮಕ್ಕಳನ್ನು

ಮದುವೆ ಮಾಡದೆ ದೇವಿಯ ಸೇವೆಗೆಂದು ಸೂಳೆಗಾರಿಕೆಗೆ ಇಳಿಸುವುದು, ಇವೆಲ್ಲವು ಮೂಢನಂಬಿಕೆಯ ಆಚರಣೆಗಳು, ಇವು ಒಂದು ಜನಾಂಗದ ಸಂಸ್ಕೃತಿ ಆದರೂ ಆ ಜನಾಂಗದ ಬದುಕಿನ ಆತಂಕವನ್ನೂ ಕಾಣಬಹುದು. ಆದರೆ ಈ ಪದ್ಧತಿಗಳು ಮೇಲ್ವರ್ಗದವರಲ್ಲಿ ಕಂಡುಬರುವುದಿಲ್ಲ.

ಮಾಪುರ ತಾಯಿಯ ಜಾತ್ರೆಯಲ್ಲಿ ನಡೆಯುವ ಸಾಂಸ್ಕೃತಿಕ ಚಿತ್ರಣಗಳನ್ನು ಮತ್ತು ದೇವಿಗೆ ಕುರಿ ಕೋಳಿಗಳಿಗೆ ಹೋತಕ್ಕೆ ಪೂಜೆ ಮಾಡಿ ಹೂವಿನ ಹಾರ ಹಾಕಿ ಕುಂಕುಮ, ಅರಿಸಿನ ಹಚ್ಚಿ ಆರತಿ ಬೆಳಗುವುದು ಅದರ ಮೈಮೇಲೆ ನೀರನ್ನು ಚುಮುಕಿಸಿ ಅದು ಒದರಿದ ನಂತರ ಅದನ್ನು ಬಲಿಕೊಡುವ ಪದ್ಧತಿ ಮತ್ತು ಆ ಪ್ರದೇಶದಲ್ಲಿ ಆಚರಣೆಗಳನ್ನು ಕಾದಂಬರಿ ಮುಖೇನ ತಿಳಿಯಬಹುದು.

ದಲಿತ ಜನಾಂಗದ ಸಂಸ್ಕೃತಿ ಬದುಕಿನ ವಿವರಣೆಗಳನ್ನು ಅವರು ಪ್ರತಿನಿತ್ಯ ಕುಡಿತ, ಹಾದರ, ಕಳ್ಳತನ ಇವುಗಳ ಜೊತೆಗೆ ಮೊಹರಂ ಹಬ್ಬದ ಅಲಾಯಿ ಕುಣಿತದ ಅನುಭವಗಳನ್ನು ಹಾಗು ಕಲಬುರ್ಗಿಯ ಶರಣ ಬಸಪ್ಪನ ತೇರಿನ ವರ್ಣನೆಯನ್ನು ಮತ್ತು ಗ್ರಾಮೀಣ ಪ್ರದೇಶದ ಬೈಗುಳಗಳನ್ನು, ಸತ್ತಾಗ ಅಳುವ ರೀತಿಯನ್ನು ಸ್ವಾರಸ್ಯಕರವಾಗಿ ವಿವರಿಸಿದ್ದಾರೆ.

ಬದುಕು ಕಾದಂಬರಿಯಲ್ಲಿ ಸತ್ತಾಗ ನಡೆಸುವ ಕ್ರಿಯಾ ವಿಧಾನಗಳನ್ನು ಕೆಳಗೇರಿಯ ಜನರು ಪ್ರಾದೇಶಿಕತೆಯ ಅಡಿಯಲ್ಲಿ ಆಚರಿಸುವುದನ್ನು ಕಾಣಬಹುದು. ಸತ್ತ ಹೆಣಕ್ಕೆ ಸ್ನಾನ ಮಾಡಿಸಿ ಹೊಸ ಬಟ್ಟೆ ತೊಡಿಸಿ. ಹೂವನ್ನು ಹಾಕಿ ಸಿಂಗರಿಸಿ ಹೆಣ್ಣು ಮಕ್ಕಳು ಹೆಣದ ಮುಂದೆ ಕೂತು ಹಾಡಿನ ರೂಪದಲ್ಲಿ ಅಳುತ್ತಾ ನೋವನ್ನು ಹೊರ ಹಾಕುತ್ತಿದ್ದರು. ಊರಿನ ಜನರು, ಬಂಧು ಬಾಂಧವರೆಲ್ಲ ಸೇರಿ ಮೆರವಣಿಗೆಯ ಮೂಲಕ ತಮಟೆ ಬಡಿದು ತೋಟದಲ್ಲೊ ಅಥವಾ ಸ್ಮಶಾನದಲ್ಲೊ ಮಣ್ಣು ಮಾಡುವ ಪದ್ಧತಿಯನ್ನು ಕಾಣಬದುದು. ಈ ಸಂಸ್ಕೃತಿ ಶತಮಾನಗಳಿಂದ ಆಚರಿಸುತ್ತಿರುವುದನ್ನು ಕಾಣಬಹುದು.

ಗಂಡ ಸತ್ತರೆ ಹೆಂಡತಿಗೆ ಅರಿಶಿಣ ಕುಂಕುಮವನ್ನು ಕೆಡಿಸುವುದು, ಕೈಬಳೆಯನ್ನು ಒಡೆಯುವುದು ಕಾಲುಂಗುರವನ್ನು ಬಿಚ್ಚುವುದು ಹಾಗು ಸ್ಮಶಾನದಿಂದ ಕಲ್ಲುಹಳ್ಳು ಹುಲ್ಲುಗರಿಕೆ ಇಟ್ಟು ದೀಪಕ್ಕೆ ನಮಸ್ಕಾರ ಮಾಡುವ, ಮುತ್ತೈದೆತನವನ್ನ ತೆಗೆಯುವ ಸಂಪ್ರದಾಯವನ್ನು ಈ ಜನಾಂಗದವರಲ್ಲಿ ಕಾಣಬಹುದು.

ಸತ್ತವರಿಗೆ ಮೂರನೆಯ ದಿನ ಮನೆಯ ಅಂಗಳದ ಮೂಲೆಯಲ್ಲಿ ಮೂರು ಕಲ್ಲಿಟ್ಟು ಒಲೆ ಹೊಡಿ ಒಡಕು ಜೋಕಿಯಲ್ಲಿ ಉಪ್ಪಿಲ್ಲದೆ ಬಾನ ಕುದಿಸಿಕೊಂಡು 'ಮೂರು ಕೂಳ'ನ್ನು

ತೆಗೆದುಕೊಂಡು ಸಮಾಧಿ ಮೇಲೆ ಹಾಕಿ ಪೂಜೆ ಮಾಡುವುದು ನಂತರ ಕಾಗೆಗಳು ಬಂದು ಕೂಳನ್ನು ಮುಟ್ಟಿದ ಮೇಲೆ ಜನರು ಸಮಾಧಾನ ಪಟ್ಟುಕೊಳ್ಳುವುದು ಅಲ್ಲಿನ ಪ್ರಾದೇಶಿಕ ಆಚರಣೆಯನ್ನು ಕಾಣಬಹುದು.

ಹೋಳಿ ಹುಣ್ಣಿಮೆ 'ಕರಿ' ಸಂಕ್ರಾಂತಿ 'ಕರಿ' ಬಂದರೆ ಬೆಳದಿಂಗಳ ರಾತ್ರಿಯಲ್ಲಿ ಬಂದೂಕು ಹಿಡಿದು ಅಡವಿಗೆ ಹೋಗಿ ಮೊಲ, ಚಿಗರಿ, ನರಿ, ಕಾಡು ಕೋಳಿ, ಅಂತಹ ಪ್ರಾಣಿಗಳನ್ನು ಬೇಟೆಯಾಡಿಕೊಂಡು ಹಾಗು ಊರ ಮುಂದಿನ ಹೊಳೆಯಲ್ಲಿ ಬಲೆ ಹಾಕಿ ಮೀನು ಹಿಡಿಯುವುದು, ಬೇಟೆಗೆ ಬಂದವರಿಗೆ ಪಾಲುಕೊಡುವುದು ಹಾಗೂ ಆ ಜನಾಂಗದವರಲ್ಲಿ ಪ್ರತಿದಿನವೂ ಮಾಂಸದ ಅಡಿಗೆ ಜೊತೆಗೆ ಸೇಂದಿ ಕೊಡುವುದೂ ಮೊದಲಾದ ಚಟುವಟಿಕೆಗಳನ್ನು ಕಾಣಬಹುದು. ಆ ಪ್ರದೇಶದ ಜನರಿಗೆ ಬೇಟೆಯು ಒಂದು ವಿಶಿಷ್ಟವಾದ ಕಲೆಯಾಗಿದ್ದನ್ನು ಕಾಣಬಹುದು.

ಜೋಳದ ರೊಟ್ಟಿ, ಗೋಧಿ ಚಪಾತಿ, ಗಟ್ಟಿ ಬ್ಯಾಳೆ, ತಾಳಿಸಿದ ಕಡ್ಡಿ ಪಲ್ಲೆ, ಸೇಂಗಾದ ಹಿಂಡಿ, ಕುರಿ ಮತ್ತು ಕೋಳಿಗಳ ಖಂಡ, ತತ್ತಿ, ಹೋಳಿಗೆ, ಬಾನ, ಬೇಳೆಯ ಹೂರಣ, ಬಾಳಕ ಮೀನು ಇವೆಲ್ಲವು ಆ ಜನಾಂಗದ ಪ್ರಾದೇಶಿಕ ಆಹಾರ ಪದಾರ್ಥಗಳಾಗಿದ್ದವು. ಹೀಗೆ ಬದುಕು ಕಾದಂಬರಿ ಶುದ್ಧ ಗ್ರಾಮೀಣ ಜನರ ಪ್ರಾದೇಶಿಕ ಆಚಾರಣೆ ಪದ್ಧತಿಗಳನ್ನು ತಿಳಿಯಬಹುದು.

ಮಾಂಸದ ತುಂಡುಗಳನ್ನು ಸುತ್ತಲಿ ಹುರಿಗೆ ಪೋಣಿಸಿ, ಒಣಗಿಸಿ ಬಾಣಕ ಮಾಡಲು ಅಡುಗೆ ಮನೆಯ ಕಿಟಕಿಗೆ ಕಟ್ಟಿದ ಬಿದಿರ ಬಂಬಿಗೆ ಸಿಗಾಕಿರುವುದನ್ನು ಕಾಣಬಹುದು. ಜೊತೆಗೆ ಖಂಡಕ್ಕೆ ಉಪ್ಪು ಅರಿಶಿನ ಹಚ್ಚಿ ಒಲೆ ಮೇಲಿಟ್ಟು ಕುದಿಸಿ ಬಿಸಲಿಗಿಟ್ಟು ಒಣಗಿದ ಮೇಲೆ ಗಡಿಗೆಗೆ ತುಂಬುತ್ತಿದ್ದರು. ಇವರಿಗೆ ಬೇಕಾದಾಗ ಸ್ವಲ್ಪ ತೆಗೆದು ಕುದಿಸಿ ಪಲ್ಯ ಮಾಡುತ್ತಿದ್ದರು. ಹೀಗೆ ಅವರು ಹೆಚ್ಚಾದ ಮಾಂಸವನ್ನು ಈ ರೀತಿ ಮಾಡಿ ಸುರಕ್ಷಿತವಾಗಿ ಇಟ್ಟುಕೊಳ್ಳುವುದನ್ನು ತಿಳಿಯಬಹುದು.

ಶಿವರಾತ್ರಿಯಿಂದ ಯುಗಾದಿಯ ಹಬ್ಬದ ತನಕ ಹಳ್ಳಿಯ ಜನರು ಹೊಲದಿಂದ ಜೋಳದ ದಂಟು ಕೊಯ್ದು ಕತ್ತರಿಸಿ ಕಣದಲ್ಲಿ ಹಾಕಿ ದೊಡ್ಡ ರಾಶಿ ಮಾಡಿ ಊರಿನ ಕೆಳಗೇರಿ ಮಂದಿಯೆಲ್ಲ ಸೇರಿ ದೊಡ್ಡ ಸುಗ್ಗಿಯನ್ನು ಮಾಡುವುದು ಆ ಪ್ರದೇಶದ ಆಚರಣೆ ಪದ್ಧತಿ ಆಗಿರುವುದನ್ನು ಕಾಣಬಹುದು.

ಹೋಳಿ ಹುಣ್ಣಿಮೆಯ ಹಬ್ಬವನ್ನು ಶಿವಳ್ಳಿಯಲ್ಲಿನ ಜನರು ಹಾಗು ಸುತ್ತಮುತ್ತಲಿನ

ಊರಿನವರು ಸೇರಿ ಸಂತೋಷದಿಂದ ಆಚರಿಸುವುದು. ತಮಟೆಯನ್ನು ಬಾರಿಸುವುದು ಒಂದು ವಿಶೇಷವಾಗಿತ್ತು, ಸತ್ತವರಿಗೆ ಹಾಗು ಮದುವೆ, ದಿಬ್ಬಣ ಮೆರವಣಿಗೆಗಳಿಗೂ ತಮಟೆಯನ್ನು ಬಾರಿಸುವುದನ್ನು ಕಾಣಬಹುದು ಹೋಳಿ ಹುಣ್ಣಿಮೆಯಂದು ಕಾಮಣ್ಣನನ್ನು ಸುಡುವುದು. ನಾಟಕವನ್ನು ಆಡುವುದು, ಹೀಗೆ ಅವರು ಪ್ರಾದೇಶಿಕ ನೆಲೆಯಲ್ಲಿ ಆಚರಣೆ ಮಾಡುವುದನ್ನು ಕಾಣಬಹುದು.

ನಾಗರ ಪಂಚಮಿಯಂದು ಶಿವಳ್ಳಿಯ ಹೆಣ್ಣುಮಕ್ಕಳು ನಾಗರಕಲ್ಲುಗಳಿಗೆ ಪೂಜೆ ಮಾಡಿ ಹಾಲನ್ನು ಹಾಗು ಅರಿಶಿಣದಲ್ಲಿ ನೆನದ ಐದೆಳೆ ದಾರದ ಹಂಗುನೂಲು ಹಾಕಿ ಅಳ್ಳುಚೆಲ್ಲಿ, ಕಡಬಿಗ, ನವಣಿಬಾನದ ನೈವೇದ್ಯ ಕೊಟ್ಟು ಹುತ್ತದಲ್ಲಿರುವ ನಾಗಪ್ಪನಿಗೆ ನಮಸ್ಕರಿಸುವುದು ಹಾಗು ಹೆಣ್ಣು ಮಕ್ಕಳೇ ಹೆಚ್ಚಾಗಿ ನಾಗರ ಪಂಚಮಿಯನ್ನು ಆಚರಿಸುವುದು. ಹೊಸ ಬಟ್ಟೆ ತೊಟ್ಟು ಜೋಕಾಲಿ ಆಡುತ್ತಾ ಸಂಭ್ರಮಿಸುವುದನ್ನು ಕಾಣಬಹುದು.

'ಬದುಕು' ಗೀತಾ ನಾಗಭೂಷಣರ ಬೃಹತ್ ಕಾದಂಬರಿ. ಅವರೇ ಹೇಳುವಂತೆ 'ಇದು ನನ್ನ ಜಿಲ್ಲೆಯ ಖರೆ ಖರೇ ಜವಾರಿ ಕಥೆ' ಎಂದಿದ್ದಾರೆ ಅವರ ಭಾಷೆ ಜವಾರಿ ಕಿಲಾರಿ ಅಲ್ಲ, ಬಯಲು ಸೀಮೆಯ ಜನಪದ ಬದುಕಿನ ಕಷ್ಟ ಸುಖಗಳ ಪರಮಾಲೆಯಾಗಿದೆ. ಸ್ತ್ರೀಶೋಷಣೆಯ ವಿರುದ್ಧದ ಗದ್ಯರೂಪದ ಹಾಡಿದು ಬದುಕು. 'ಮಲ್ಲಪ್ಪ'ನ ಇಡೀ ಬದುಕಿನ ಸುತ್ತ ತರಂಗಳನ್ನೆಬಿಸುವ ಈ ಕಾದಂಬರಿ ಶುದ್ಧ ಗ್ರಾಮೀಣ ಬದುಕಿನ ಕೌಟುಂಬಿಕ ಬೆಳವಣಿಗೆಯನ್ನು ಸೂಚಿಸುತ್ತದೆ."[೧]

ಡಾ. ಗೀತಾರವರು 'ಬದುಕು' ಕಾದಂಬರಿಯಲ್ಲಿ ಪ್ರಾದೇಶಿಕ ಭಾಷೆಯನ್ನು ಕೆಳವರ್ಗದ ಜನಾಂಗದವರು ಆಡುವ ಭಾಷೆಯ ಶೈಲಿಯ ನಿರೂಪಣಾ ಶಕ್ತಿಯನ್ನು ತಮ್ಮ ಕೃತಿಗಳಲ್ಲಿ ಬಳಸಿಕೊಂಡಿದ್ದಾರೆ. ಹೈದ್ರಾಬಾದ್ ಕರ್ನಾಟಕದ ತೀರ ಹಿಂದುಳಿದ ಪ್ರದೇಶಗಳಲ್ಲಿ ವಾಸಿಸುವ ಅನಾಗರೀಕ ಜನರು ತಮ್ಮ ನಿಜ ಜೀವನದ ಬದುಕಿನಲ್ಲಿ ಅಶ್ಲೀಲ ಪದಗಳನ್ನು ಬಳಕೆ ಮಾಡುತ್ತಿದ್ದರು. ಮೇಲ್ವರ್ಗದವರು ಇಂಥ ಪದಗಳನ್ನು ಕೇಳಲು ಹಿಂಜರಿದರೂ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ಬಳಸುವ. 'ಛಿನಾಲಿ', 'ಭೋಸುಡಿ' ಎಂಬ ಬೈಗುಳಗಳನ್ನು ಮತ್ತು ಗೀತಾರವರು ಗ್ರಾಮೀಣ ಬದುಕಿನಲ್ಲಿ ಉರ್ದು, ಮರಾಠಿ ಭಾಷೆಯ ಮಿಶ್ರಿತವನ್ನ ಅಳವಡಿಸಿಕೊಂಡು ಒಂದು ಸಮುದಾಯದ ಜೀವನದ ಬದುಕನ್ನು ಅನಾವರಣಗೊಳಿಸಿದ್ದಾರೆ.

❖ ❖ ❖

---

೧. ಪುಟ ೭೫ 'ಕಲ್ಬುರ್ಗಿಯ ಸ್ಪಂದನ', ಲೇ: ಡಾ॥ ಸರಸ್ವತಿ ಚಿಮ್ಮಲಗಿ

ಅಧ್ಯಾಯ-5

ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು

ಡಾ. ಗೀತಾ ನಾಗಭೂಷಣರವರ 'ಬದುಕು' ಕಾದಂಬರಿ ವಿಚಿತ್ರವಾದ ಅನುಭವವನ್ನು ಕಟ್ಟಿಕೊಡುತ್ತದೆ. ಕೆಳಗೇರಿಯ ದಲಿತ ಜನಾಂಗದ ಸಾಮಾಜಿಕ ಸ್ಥಿತಿ ವೇದನೆಯಲ್ಲಿ ಹೊರಳಾಡುವದನ್ನು ಕಾಣಬಹುದು.

ಮನುಷ್ಯ ಸಂಘಜೀವಿ ಸಮಾಜದಲ್ಲಿ ಅವನು ಬದುಕಲು ಪರಿಸ್ಥಿತಿಗೆ ತಕ್ಕಂತೆ ಬದಲಾವಣೆಯನ್ನು ಮಾಡಿಕೊಳ್ಳುತ್ತಾನೆ. ಸಮಾಜದ ಘಟಕದಲ್ಲಿ ಇತರ ವ್ಯಕ್ತಿಗಳ ಜೊತೆ ಸಾಮಾಜಿಕ ಸಂಬಂಧಗಳನ್ನು ಹೊಂದಿರುತ್ತಾನೆ.

ಸಮಾಜದ ಜೊತೆಯಲ್ಲಿ ಸಂಸ್ಕೃತಿಯನ್ನು ಲೇಖಕರು ವಿಭಿನ್ನ ರೀತಿಯಲ್ಲಿ ತಮ್ಮ ಕಾದಂಬರಿಯಲ್ಲಿ ವ್ಯಕ್ತಪಡಿಸಿದ್ದಾರೆ. ಆ ಪರಿಸರದ ಸುತ್ತ ಮುತ್ತ ಇರುವ ಜೀವಂತ ಚಿತ್ರಣವನ್ನು ಹಾಗು ಪ್ರದೇಶದ ಸಾಂಸ್ಕೃತಿಕ ಆಚರಣೆ ನಂಬಿಕೆ, ಶ್ರದ್ಧೆ, ಸಂಪ್ರದಾಯವನ್ನು ಅಭಿವ್ಯಕ್ತ ಪಡಿಸಿದ್ದಾರೆ.

ಸಮಾಜ ಮತ್ತು ಸಂಸ್ಕೃತಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಇವೆರಡರ ಹೊರತಾಗಿ ಮನುಷ್ಯನ ಅಸ್ತಿತ್ವವೇ ಇಲ್ಲ.

ಡಾ. ಗೀತಾರವರು ಕೆಳವರ್ಗದ ಜನಜೀವನವನ್ನು ಅರ್ಥಪೂರ್ಣವಾಗಿ ಅವರ ಬದುಕು ಬವಣೆಗಳನ್ನು ಹತ್ತಿರದಿಂದ ಕಂಡು, ಅಲ್ಲಿನ ಸಾಮಾಜಿಕ ಪರಿಸರದ ಹಾಗು ಸಾಂಸ್ಕೃತಿಕ ಚಿತ್ರಣಗಳನ್ನು ಸ್ಥಳೀಯ ಭಾಷೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಹಿಂದುಳಿದ ಜನರ ನೋವು ದಲಿತ ಸ್ತ್ರೀಯರ ಮೇಲೆ ನಡೆಯುವ ಕ್ರೌರ್ಯ ಮತ್ತು ದುಡಿಮೆಯಲ್ಲಿನ ತಾರತಮ್ಯ, ಜನಾಂಗ ನಿಂದನೆ ಬದುಕಿನಲ್ಲಿ ಅನುಭವಿಸುತ್ತಿರುವ ಯಾತನೆಗಳನ್ನು ಸಾಹಿತ್ಯದ ಮೂಲಕ ನಿರೂಪಿಸಿದ್ದಾರೆ.

ಕಾದಂಬರಿಯ ಕೇಂದ್ರ ವಸ್ತು ದಲಿತ ಸ್ತ್ರೀಯರಾಗಿದ್ದಾರೆ. ಅನಕ್ಷರಸ್ಥ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಜೋಗಿಣಿ ಬಿಡುವ ಪದ್ಧತಿ ಬೆತ್ತಲೆಸೇವೆ ಅನೇಕ ಶತಮಾನಗಳಿಂದ ಬಂದ ಸಾಂಸ್ಕೃತಿಕ ಧಾರ್ಮಿಕ ಆಚರಣೆಗಳು ಹರಕೆಗಳೂ ಹೆಚ್ಚಾಗಿ ದಲಿತರಲ್ಲಿ ಕಂಡುಬರುತ್ತವೆ. ಆದರೆ ಮೇಲ್ವರ್ಗದ ಜನರಲ್ಲಿ ಇಂಥ ಆಚರಣೆಗಳು ಹೆಚ್ಚಾಗಿ ಕಂಡು ಬರುವುದಿಲ್ಲ.

ಡಾ. ಗೀತಾರವರ ಕಥೆ ಕಾದಂಬರಿಗಳು ಬಡವರ ಬದುಕಿಗೆ ಕನ್ನಡಿ ಹಿಡಿದಿವೆ. ಇವರ ಸಾಹಿತ್ಯದಲ್ಲಿ ಜಾತಿಯೊಂದೆ ಮುಖ್ಯವಾಗಿರದೆ, ಜಮೀನ್ದಾರಿ ದರ್ಪ, ವರ್ಣ ಸಂಘರ್ಷ, ಮೂಢನಂಬಿಕೆಗಳೂ ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ.

ಸಮಾಜದಲ್ಲಿ ಹೆಣ್ಣು ಅನೇಕ ಸಂಕೋಲೆಗಳಲ್ಲಿ ಸಿಲುಕಿರುವುದನ್ನು ಕಾಣಬಹುದು ಸ್ತ್ರೀಯನ್ನು ಕರುಣಾಮಯಿ, ವಾತ್ಸಲ್ಯಮಯಿ, ದೈವಸ್ವರೂಪಣಿ ಎಂದೆಲ್ಲಾ ಕರೆಸಿಕೊಂಡಿರುವ ಹೆಣ್ಣು ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ರಾಜಕೀಯವಾಗಿ ಆರ್ಥಿಕವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಬೆಳವಣಿಗೆಯಲ್ಲಿ, ಕುಂಠಿತಗೊಂಡಿರುವುದನ್ನು ಕಾಣಬಹುದು.

ಡಾ. ಗೀತಾನಾಗಭೂಷಣ 'ಬದುಕು' ಕಾದಂಬರಿಯಲ್ಲಿ ಹೈದ್ರಾಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಗ್ರಾಮೀಣ ಜನಾಂಗದ ಸಂಸ್ಕೃತಿ ಮತ್ತು ಸಾಮಾಜಿಕ ಚಿತ್ರಣವನ್ನು ಕಾಣಬಹುದು, ಅಲ್ಲಿನ ಜನಾಂಗದಲ್ಲಿದ್ದ ದ್ವೇಷ, ಅಸೂಯೆ, ಜಮೀನ್ದಾರಿ ಪದ್ಧತಿ, ವರ್ಗ ಸಂಘರ್ಷ, ಜಾತೀಯ ತಾರತಮ್ಯ, ಹಾಗು ಸಾಮಾಜಿಕ ಜೀವನದ ವಿವರಗಳನ್ನು ಅವರ ಬದುಕಿನ ನಾನಾ ಮಜಲುಗಳ ಮೂಲಕ ಸವಿಸ್ತಾರವಾಗಿ ಕಟ್ಟಿಕೊಡುತ್ತಾರೆ.

'ಬದುಕು' ಕಾದಂಬರಿ ಮಲ್ಲಪ್ಪ ಜಮಾದಾರ ಕುಟುಂಬವನ್ನು ಕೇಂದ್ರಿಕರಿಸಿ ಬರೆದರೂ ಇತರ ಕೆಳಗೇರಿ ದಲಿತ ಜನಾಂಗದವರ ಬದುಕಿನ ಅನೇಕ ಮುಖಗಳನ್ನು ಪದ್ಧತಿಗಳು, ನಂಬಿಕೆಗಳು, ಆಚರಣೆಗಳು, ಸಂಪ್ರದಾಯ, ಜಾತ್ರೆಯ ವರ್ಣನೆ, ಹಿಂದು ಮುಸ್ಲಿಂರ ಸಾಮರಸ್ಯ, ಹಬ್ಬದ ಆಚರಣೆಗಳು ಇತ್ಯಾದಿಗಳ ಮೂಲಕ ಪರಿಚಯಿಸಿದ್ದಾರೆ.

ಕಲ್ಬುರ್ಗಿಯ ಜಿಲ್ಲೆಯ ಶಿವಳ್ಳಿಯಲ್ಲಿ ವಾಸಿಸುವ ಗೌಡ. ಕುಕ್ಕಣಿ, ಸಾವ್ಕಾರ, ಸುಬದಾರ, ನಾಯಕ ಇವರ ಮನೆಗಳನ್ನು ಹಾಗೂ ಹೊಲಗೇರಿ, ಕೆಳಗೇರಿಗಳಲ್ಲಿನ ಕುರುಬರು, ಗೊಲ್ಲರು, ಪಿಂಚಾರರು, ಬುಡಬುಡಕೆಯವರು ಮನೆಗಳು ಹಾಗು ಯೋಪಡಿಗಳನ್ನು ಅವರ ಕುಲ ಕಸುಬಿನ ಆಧಾರದ ಮೇಲೆ, ಅವರ ಪಂಗಡಗಳ ವಿಂಗಡಣೆಯನ್ನು ಡಾ. ಗೀತಾರವರು ವಿವರಣಾತ್ಮಕವಾಗಿ ನೀಡಿದ್ದಾರೆ.

ಬದುಕು ಕಾದಂಬರಿಯಲ್ಲಿ ಹೀರೂಡ್ಯಾ ದೇವರ ಕಲ್ಲಿಗೆ ಎಣ್ಣೆ ಕುಂಕುಮ ಇಟ್ಟು ಭಕ್ತಿಯಿಂದ ಪೂಜೆ ಮಾಡುವುದು, ಇದು ಹೆಣ್ಣು ದೇವರು, ಮದುವೆ ಆಗಿ ಗಂಡನ ಮನೆಗೆ ಹೋಗುವ ಹೆಣ್ಣು ಮಕ್ಕಳು ಈ ದೇವರ ಪೂಜೆ ಮಾಡಿ ಹೋಗುವ ಪದ್ಧತಿ ರೂಢಿಯಲ್ಲಿದ್ದು, ಅದನ್ನು ತಿರಸ್ಕಾರ ಮಾಡಿದರೆ ಆ ದೇವರು ಹೆಣ್ಣು ಮಕ್ಕಳ ಕನಸ್ಸಿನಲ್ಲಿ ಬಂದು ಹಾವಾಗಿ ಕಂಡು ಗಂಡಸಾಗಿ ಬಂದು ಮೈಬಿಗಿದುಕೊಂಡು ಹಿಂಡಿ ಹಿಪ್ಪೆಮಾಡಿ ಅವಳಿಗೆ ಮಕ್ಕಳಾಗದಂಗೆ ಅವಳ ಗರ್ಭದ ಬಾಯಿಯನ್ನೆ ಬಂದ್ ಮಾಡುವ ನಂಬಿಕೆ,

ಸಮಾಜದಲ್ಲಿ ಪೂರ್ವಿಕರ ಕಾಲದಿಂದಲೂ ನಡೆದುಬಂದ ಆಚರಣೆಯನ್ನ ಡಾ. ಗೀತಾರವರು ವಿವರಣಾತ್ಮಕವಾಗಿ ತಿಳಿಸಿದ್ದಾರೆ.

'ಸುಬೇದಾರು ಜಮಾದಾರು, ನಾಟಿಕಾರು, ವಾಲಿಕಾರು ತಳವಾರು" ಸರಕಾರದ ಕೆಲಸ ಮಾಡುವ ಕುಟುಂಬದವರನ್ನು ಹೆಸರಿಸುತ್ತಾರೆ. ಜೊತೆಗೆ ಅವರು ವಾಸ ಮಾಡುವ ಮನೆಗಳ ವರ್ಣನೆಗಳನ್ನೂ ನೀಡುತ್ತಾರೆ, ಸಿಂದಿ ಬಚ್ಚು ಮರದ ಜಂತಿಹೇರಿ, ಸಿಂದಿ ಪೊರಕೆ ಹೊದ್ದಿಸಿ ಛಾವಣಿ ಮಾಡಿದ ಗುಡಿಸಲುಗಳು, ಅಡಿಗೆ ಮಾಡಲು ದೇವರ ಮನೆ ಬೀಸಲು ಕಟ್ಟಲು ಮಲಗಲು ಮೈ ತೊಳೆದುಕೊಳ್ಳಲು ಹುಲ್ಲಿನ ಚಪ್ಪರವನ್ನು ಹಾಕುತ್ತಿದ್ದರು. ಹಾಗೆ ಒಕ್ಕಲುತನದ ಸಾಮಾನು ತುಂಬಲಿಕ್ಕೆ ಹಗ್ಗಕುಣ್ಣಿ ನುಲಕಿ ಪೆಂಡಿ, ಮೀನು ಹಿಡಿಯುವ ಬಲೆಗಳು ಹಾಗು ಇತರೆ ಸಾಮಾನನ್ನು ಉದ್ದನೆಯ ಪಡಸಾಲೆಯಲ್ಲಿ ಇಡುತ್ತಿದ್ದರು. ಅಂಗಳದ ಮೂಲೆಯಲ್ಲಿ ನಾಕಂಕಣದ ದನಗಳನ್ನು ಕೊಟ್ಟಿಗೆಯಲ್ಲಿ ಕಟ್ಟುತ್ತಿದ್ದರು ಅವರ ಅಂತಸ್ತಿಗೆ ತಕ್ಕಂತೆ ಗೌಡರು ಸಾವುಕಾರರು ಕಲ್ಲಿನಿಂದ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಳ್ಳುತ್ತಿದ್ದರು. ಇತರ ಕೆಳವರ್ಗದವರು ಝೋಪಡಿಯಲ್ಲಿ ಇರುತ್ತಿದ್ದರು.

ಹೋಳಿ ಹುಣ್ಣಿಮೆ 'ಕರಿ' ಸಂಕ್ರಾಂತಿ ಬಂದರೆ ಬೆಳದಿಂಗಳ ರಾತ್ರಿಯಲ್ಲಿ ಬಂದೂಕು ಹಿಡಿದು ಕಾಡಿಗೆ ಹೋಗಿ ಮೊಲ, ಚಿಗರಿ, ನರಿ, ಕಾಡುಕೋಳಿ ಅಂತ ಪ್ರಾಣಿಗಳನ್ನು ಬೇಟೆ ಆಡುವುದು, ಹೊಳೆಯಲ್ಲಿ ಮೀನು ಹಿಡಿಯುವುದು ಇವರ ಕುಸುಬು ಉಪ್ಪು ಸವರಿ ಬಿಸಲಿಗೆ ಒಣಗಿಸಿ 'ಬಾಳಕಮೀನು' ಮಾಡುತ್ತಿದ್ದರು. ಪ್ರತಿದಿನವು ತತ್ತಿ ಮತ್ತು ಮಾಂಸವನ್ನು ತಿಂದು ಸೇಂದಿ ಕುಡಿಯುತ್ತಿದ್ದರು ಮಾಂಸದ ಖಂಡಗಳನ್ನು ಒಣಗಿಸಿ ಇಟ್ಟು ಬೇಕಾದಾಗ ಕರಿಕಾರ, ಮಸಾಲೆ, ಕೊಬ್ಬರಿಪುಡಿ, ಬೆಳ್ಳುಳ್ಳಿ ಹಾಕಿ ಎಣ್ಣೆಯಲ್ಲಿ ಕರೆದು ಸವಿಯುತ್ತಿದ್ದರು ಇದೆಲ್ಲ ಬದುಕು ಕಾದಂಬರಿಯಲ್ಲಿ ಜನಾಂಗದ ಮಾಂಸಾಹಾರ ಕ್ರಮವನ್ನು ತೊರಿಸುತ್ತದೆ. ಹಾಗೆ ಪ್ರತಿಯೊಂದು ಜಾತಿಯಲ್ಲೂ ತಮ್ಮದೇ ಆದ ಆಚರಣೆ ಸಂಪ್ರದಾಯಗಳನ್ನು ಹೊಂದಿ ಅವರ ನಿತ್ಯ ಬದುಕಿನ ಶೈಲಿ ಭಿನ್ನವಾಗಿ ಅವರ ಸಾಮಾಜಿಕ ಜೀವನ ಕ್ರಮವನ್ನು ಹೀಗೆ ಗುರುತಿಸಬಹುದು.

ಸಾಕುಪ್ರಾಣಿಗಳಾದ ಕೋಳಿ, ದನ, ಎಮ್ಮೆ, ನಾಯಿ, ಕುದುರೆ ಇವು ಅವರ ದೈನಂದಿನ ಬದುಕಿನಲ್ಲಿ ಸಹಕಾರಿಯಾಗಿದ್ದವು, ಹಾಗೆಯೇ ಅವರು ಬೇಸಾಯದಲ್ಲಿ ಹೆಚ್ಚು ಶ್ರದ್ಧೆಯಿಂದ ಬಿತ್ತನೆ ಮಾಡಿ ಹೆಚ್ಚು ಹೆಚ್ಚು ಫಸಲನ್ನು ಬೆಳೆಯುತ್ತಿದ್ದರು. ಅವರು ಕಷ್ಟ ಜೀವಿಗಳಾಗಿದ್ದು ಸುಗ್ಗಿಯ ಆಚರಣೆಯನ್ನು ವಿಶೇಷತೆಯಿಂದ ಆಚರಿಸುತ್ತಿದ್ದರು. ಗೌಡ ಸಾಹುಕಾರ, ಕುಕ್ಕಣಿ ಇತರ ಕೆಳಗೇರಿಯ ಜನಾಂಗದವರೆಲ್ಲಾ ಒಟ್ಟಾಗಿ ಸೇರಿ ಸಂಭ್ರಮಿಸುತ್ತಿದ್ದರು. ಮೇಲ್ವರ್ಗದವರು ಇತರ ಕೆಳವರ್ಗದವರಿಗೆ ಬೆಳೆದ ಪದಾರ್ಥಗಳನ್ನು ದಾನಮಾಡುತ್ತಿದ್ದರು.

ಸಮಾಜದ ಮೇಲ್ವರ್ಗದಲ್ಲಿ ಇರದ ಜೋಗಿಣಿ ಪದ್ಧತಿ, ಕೆಳವರ್ಗದ ದಲಿತರಲ್ಲಿ ಕಂಡುಬರುವುದನ್ನು ಕಾಣಬಹುದು. ಬದುಕಿನಲ್ಲಿ ಅವರು ಎಂದೂ ಸುಖ ಕಾಣದೆ ದೇವಿಯ ಹೆಸರಿನಲ್ಲಿ ಬರುವವರಿಗೆ ದೇಹವನ್ನು ಒಪ್ಪಿಸಿ, ಹುಟ್ಟುವ ಮಕ್ಕಳಿಗೆ ತಂದೆಯ ಹೆಸರಿಲ್ಲದೆ ಅವಳು ಭಿಕ್ಷೆ ಬೇಡುತ್ತ ಜೀವನ ಸಾಗಿಸುವುದು, ಸಮಾಜದಲ್ಲಿ ಅವಳ ಬಾಳು ಮೂಕ ವೇದನೆಯಾಗಿ ಕಾಣುತ್ತದೆ. ಆದರೆ ಈ ಪದ್ಧತಿ ಆ ಜನಾಂಗದ ಸಂಸ್ಕೃತಿಯಲ್ಲಿ ಆಚರಣೆಯ ಪದ್ಧತಿ ಆಗಿರುತ್ತದೆ. ಜೋಗಿಣಿಯರು ಬದುಕಿನಲ್ಲಿ ಅನುಭವಿಸುವ ನೋವುಗಳು ಅವರ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ. ಜೋಗಿಣಿಯಾಗಲು ಕಾರಣ ಆ ಜನಾಂಗದವರ ತಂದೆ ತಾಯಿಗಳು ಮಾಡಿದ ಹರಕೆಯಿಂದ ಒಂದು ಹೆಣ್ಣಿನ ಬಾಳು ಹಾಳಾಗುವುದನ್ನು ಕಾಣಬಹುದು. ನೀಲವ್ವ, ತುಳಜಾರನ್ನು ಸಂಪ್ರದಾಯವಾಗಿ ಜೋಗಿಣಿ ಮಾಡಿ ದೇವಿಯ ಸೇವೆಗೆ ಬಿಟ್ಟರು. ಅವರು ಸಮಾಜದಲ್ಲಿ ಈ ಪದ್ಧತಿಯನ್ನು ಪ್ರತಿಭಟಿಸಿ ನಿಂತರು. ನೀಲವ್ವನ ಬದುಕು ಸಾವಿನಲ್ಲಿ ಅಂತ್ಯವಾದರೆ ತುಳಜಾ ಜೋಗಿಣಿಯ ಪದ್ಧತಿಯನ್ನು ತಿರಸ್ಕರಿಸಿ ಮದುವೆ ಆಗಿ ಊರನ್ನು ಬಿಟ್ಟು ಬಾಳ್ವೆ ಮಾಡುವುದು ಸಮಾಜದ ಇತರ ಕುಟುಂಬದವರಿಗೆ ಮಾದರಿಯಾಗಿರುವುದನ್ನು ತಿಳಿಯಬಹುದು.

ಅಮವಾಸ್ಯೆಯ ದಿನ ಪ್ರಾರಂಭವಾಗುವ ಮಾಪುರ ತಾಯಿಯ ಜಾತ್ರೆ ಬಾದಾಮಿ ಅಮವಾಸ್ಯೆಯ ತನಕ ಒಂದು ತಿಂಗಳು ನಡೆಯುತ್ತದೆ. ಆ ಜಾತ್ರೆಗೆ ಹೊರಡಲು ಮಲ್ಲಪ್ಪ ಜಮಾದರನು ತಯಾರಿ ಮಾಡಿಕೊಳ್ಳಲು ಮನೆಯಲ್ಲಿ ನಾಲ್ಕು ಒಲೆಯನ್ನು ಹಾಕಿಸಿ. ಹಂಚಿನ ಮೇಲೆ ಕುರುಬರ ನಿಂಗವ್ವ, ಮಾಳವ್ವ, ತಳವಾರ ಅಂಬವ್ವ, ಸಾಬವ್ವರು ಸಂಜೆ ತನಕ ರೊಟ್ಟಿಯನ್ನು ತಟ್ಟಿ, ಅವುಗಳು ಆರಿದ ಮೇಲೆ ಗಂಡಸರು ಅವುಗಳನ್ನು ಜೋಡಿಸಿ ಕಟ್ಟುತ್ತಿದ್ದರು ಜೊತೆಗೆ ಹುಳಿ ಬಾನದ ಎರಡು ದೊಡ್ಡ ಹರಿವೆಗಳಲ್ಲಿ ತಯಾರಾಗಿದ್ದು, ಮೆಣಸಿನಕಾಯಿ ಕಾರ, ಮಸಾಲಿಕಾರ, ಬೆಳುಳ್ಳಿಯನ್ನು ಸುಲಿದು ಕುಟ್ಟಿ ಸಿಲಿವಾರ ಡಬ್ಬಿಯಲ್ಲಿ ಹಾಕಿ ಮುಚ್ಚಿದ್ದರು ಹೀಗೆ ಕೇರಿಯ ಹೆಂಗಸರು ಗಂಡಸರು ಸಾಮಾನುಗಳನ್ನು ಗಾಡಿಗೆ ತುಂಬಿದ್ದರು ಇವುಗಳ ಜೊತೆಗೆ ದೇವಿಯ ಹರಕೆಗೆ ಬಂದಿದ್ದ ಕುರಿ ಕೋಳಿಗಳನ್ನು ಬಂಡಿಯಲ್ಲಿ ಹಾಕಿದರು. ಬೀಗರು ನಂಟರು ದೋಸ್ತರು ಹಾಗೂ ಹೆಂಗಸರು ಮಕ್ಕಳನ್ನು ಹತ್ತಿಸಿಕೊಂಡು ರಾತ್ರಿಯಲ್ಲಿ ದೀವಟಗೆ ಹಿಡಿದು ಬಂಡಿಗಳ ಹಿಂದೆ ಮುಂದೆ ಗಂಡಸರು ಹೆಜ್ಜೆ ಹಾಕುತ್ತಾ ಸಾಗಿದರೆ. ಮಲ್ಲಪ್ಪ ಜಮಾದಾರನು ಕುದುರೆ ಸವಾರಿಯಲ್ಲಿ ಮುಂದೆ ನಡೆದರು ಹೀಗೆ ಮಾಪುರ ತಾಯಿ ಜಾತ್ರೆಗೆ ಆ ಪ್ರದೇಶದ ಜನರು ಸಾಂಪ್ರದಾಯಿಕವಾಗಿ ತಯಾರಾಗುವುದನ್ನು ಕಾಣಬಹುದು.

ಚುಂಚೂರು ಮಾಪುರ ತಾಯಿದೇವಿ ಜಾತ್ರೆ ವರ್ಷಕ್ಕೊಮ್ಮೆ ನಡೆಯುವ ಹಬ್ಬ. ಚುಂಚೂರಿಗೆ ಮಾತ್ರವಲ್ಲದೆ ಶಿವಳ್ಳಿ ಹಾಗು ಸುತ್ತಮುತ್ತಲಿನ ಹತ್ತು ಹಳ್ಳಿಗಳಲ್ಲಿರುವ ಕುಟುಂಬಗಳೆಲ್ಲ ಶುದ್ಧವಾಗಿ ಸಾರಿಸಿ, ಗುಡಿಸಿ ಪೂಜಿಸುವುದನ್ನು ಕಾಣಬಹುದು. ದಲಿತ ಜನಾಂಗದವರು ಬರಿ ಬೆತ್ತಲೆಯಾಗಿ ದೇವಿಯ ಗುಡಿ ಸುತ್ತುವುದು. ಜೋಗಿಣಿಗೆ ಬಿಡುವುದು. ಇಂಥ ಅನಾಗರಿಕ ಅಮಾನವೀಯ ಪೂಜಾ ರೀತಿಗಳು ಹಾಗೂ ಕೋಣ, ಕೋಳಿ, ಕುರಿ ಬಲಿಯನ್ನ ಕೊಡುವುದು ಸಮಾಜದ ಸಂಸ್ಕೃತಿಯನ್ನ ಬಿಂಬಿಸುತ್ತದೆ.

ಮಾಪುರ ದೇವಿಗೆ ಕುರಿ, ಕೋಳಿ, ಹೋತಗಳಿಗೆ ದೇವರ ಗುಡಿಯ ಪೂಜಾರಪ್ಪ ಹೂವು ಕುಂಕುಮ ಅರಿಶಿಣ ಹಚ್ಚಿ ಆರತಿ ಬೆಳಗಿ ಮೈಮೇಲೆ ನೀರು ಚುಮುಕಿಸಿ ಪ್ರಾಣಿಗಳು ಮೈ ಒದರಿದಾಗ ದೇವಿಯು ಅಪ್ಪಣೆಕೊಟ್ಟಳು ಎಂದು ಅವುಗಳ ಕತ್ತನ್ನು ಕತ್ತರಿಸಿ ರಕ್ತವನ್ನು ದೇವಿಗೆ ಅರ್ಪಿಸುವುದು ಮತ್ತು ಪ್ರಾಣಿಗಳ ದೇಹದ ಚರ್ಮವನ್ನು ತೆಗೆದು ಖಂಡದ ಅಡುಗೆ ಒಂದುಕಡೆ ಆದರೆ ಮೀಸಲು ಹೋಳಿಗೆ ಅಕ್ಕಿ ಬಾನ ಮಾಡಿ ಮೀಸಲು ನೈವೇದ್ಯವನ್ನು ಮತ್ತು ಹೊಸ ಕೆಂಪು ಸೀರೆ, ಕುಪ್ಪಸ ಉಡಕ್ಕಿ ದಂಡೆ, ಅಕ್ಕಿ, ಕೊಬ್ಬರಿ ಬಟ್ಟಲು, ಅಡಕೆ ಇವೆಲ್ಲವನ್ನು ಮುತ್ತೈದೆಯರ ಜೊತೆ ಹಲಗೆ ಬಾಜಿ ಡೊಳ್ಳುಗಳನ್ನು ಬಾರಿಸುತ್ತ ದೇವಿಗೆ ಒಪ್ಪಿಸುವುದು ಆ ಪ್ರದೇಶದ ಜನಾಂಗದವರಿಗೆ ಇದ್ದ ಭಯ ಭಕ್ತಿಯ ಮತ್ತು ಗಾಡವಾದ ಧಾರ್ಮಿಕ ನಂಬಿಕೆಗಳನ್ನು ಬಿಂಬಿಸುತ್ತದೆ.

ಮಲ್ಲವ್ವ ಪ್ರತಿ ವರ್ಷವೂ ಹರಕೆಯನ್ನು ತಾವು ಉಳಿದುಕೊಂಡಿದ್ದ ಜಾಗದಿಂದ ದೇವಿಯ ಗುಡಿಯವರಗೆ ದಿಂಡನಮಸ್ಕಾರ ಹಾಕಲಾರಂಭಿಸಿದಳು, ಹಾಗು ಉರುಳು ಸೇವೆಯನ್ನು ಸಹ ಗುಡಿಯವರೆಗೆ ಮಾಡಿದಳು ಇವಳ ಜೊತೆಯಲ್ಲಿ ಇತರರು ಹರಕೆ ಹೊತ್ತವರು ಸೇವೆಯನ್ನು ದೇವಿಗೆ ಅರ್ಪಿಸಿದರು. ಗಂಧದ ಹುಟಗಿ ಉಟ್ಟು ಬೆತ್ತಲೆ ಗಂಡು ಹೆಣ್ಣುಗಳು ಬೇವಿನ ತೊಪ್ಪಲು ಮೈಗೆ ಸುತ್ತಿಕೊಂಡು ಹೆಂಗಸರು ಗಂಡಸರು ಹಲಗೆ ಬಾಜಿಗಳ ಹಿಂದೆ ಮೆರವಣಿಗೆ ಬಂದು ಗುಡಿ ಸುತ್ತುವುದು ಹಾಗು ಜೋಗಿಣಿಯರನ್ನು ಪಟ್ಟಕ್ಕೆ ಹಾಕಿ ಅವಳ ನೆತ್ತಿಯ ಮೇಲೆ ಪರಡಿ ಹೊರಿಸುವುದು ನಡೆಯುತ್ತಿತ್ತು. ಹೀಗೆ ಮಾಪುರ ತಾಯಿಯ ಜಾತ್ರೆಯಲ್ಲಿ ಕೇಳಗೇರಿಯ ದಲಿತರು ಅವರ ಸಂಪ್ರದಾಯದ ಪದ್ಧತಿಯಂತೆ ನಡೆದುಕೊಳ್ಳುತ್ತಿದ್ದರು.

[17]"ಸಿಂದಿ ಗೊಬ್ಬಿಗೆ ಹೂವು ವಾರಿಸಿ ಅರಿಶಿಣ ಕುಂಕುಮ ಹಚ್ಚಿ ಊದು ಭತ್ತಿ/ ಬೆಳಗಿ ಊಧೋ ಉಧೋ....... ಈಚಲು ಮರಗವ್ವ ಉಧೋ....."[17] ಅನ್ನುತ್ತಾ ಪೂಜೆ ಮಾಡಿ ಮುತ್ತೈದೆಯರು ಊಟಕ್ಕೆ ಕೂತಾಗ ಐವರಿಗೂ ಐದು ಗ್ಲಾಸ್‌ನಲ್ಲಿ ಸೇಂದಿಯನ್ನು ಕೊಟ್ಟು ಅವರು ಕುಡಿದ ನಂತರ ಉಳಿದವರು ಕುಡಿಯುವುದು ಸಂಪ್ರದಾಯದ ವಾಡಿಕೆ ಆಗಿತ್ತು.

ಮಲ್ಲಪ್ಪ ಜಮಾದಾರ ನೈವೇದ್ಯ ದೇವರಿಗೆ ಮುಟ್ಟಿಸಿದ ಮೇಲೆ ಊಟಕ್ಕೆ ಕೂರಿಸಿ ಎಲ್ಲರಿಗೂ ಖಂಡದ ತುಂಡುಗಳನ್ನು ಹಾಗು ರೊಟ್ಟಿಗಳನ್ನು ಹಾಕಿದರು ಕಡೆಯ ಪಂಕ್ತಿಯಲ್ಲಿ ದೊಡ್ಡಿ ಹೊಲೇರು. ಮಾದರು, ಸಮಗಾರು, ಅಂತ ತೀರ ಕೆಳಜಾತಿಯ ಮಂದಿಯನ್ನು ಕೂರಿಸಿ ಊಟಕ್ಕೆ ಹಾಕಿದರೂ ನಂತರ ಸಮಗಾರರು ಭಕ್ತಿಯಿಂದ ದೇವಿಗೆ ಅಂತ ಮಾಡಿ ತಂದು ರಾಶಿ ಹಾಕಿದ್ದ ಚಪ್ಪಲಿಗಳಿಂದ ತಮ್ಮ ಹಣೆ ತಲೆಗಳಿಗೆ ಬಡಿದುಕೊಳ್ಳುತ್ತ ಮಾಪುರ ತಾಯಿ ನಮ್ಮನ್ನ ಸುಖ ಸಂತೋಷದಿಂದ ಕಾಪಾಡು ಎಂದು ನಮಸ್ಕರಿಸಿ ಬೇಡಿಕೊಳ್ಳುವುದು ಆ ಸಮಾಜದಲ್ಲಿನ ನಂಬಿಕೆ ಭಕ್ತಿಯನ್ನು ಕಾಣಬಹುದು.

ಕಾರಹುಣ್ಣಿಮೆಯ ಜೊತೆ ಮೋಹರಂ ಹಬ್ಬವು ಬಂದಿತ್ತು. ಜಮಾದಾರ ಮಲ್ಲಪ್ಪ ಇಬ್ಬರೂ ಹೆಣ್ಣುಮಕ್ಕಳನ್ನು ಹಾಗು ಅಳಿಯಂದಿರನ್ನು ಹಬ್ಬಕ್ಕೆ ಆಹ್ವಾನಿಸಿದ. ಊರಲ್ಲಿ ಹಿಂದೂ ಮುಸಲ್ಮಾನರಿಬ್ಬರೂ ಪರಸ್ಪರ ಪ್ರೀತಿಯಿಂದ ಹಬ್ಬ ಆಚರಿಸುತ್ತಿದ್ದರು.

ಕಾರಹುಣ್ಣಿಮೆ ಹಬ್ಬ ಉತ್ತರ ಕರ್ನಾಟಕದ ಎಲ್ಲ ಹಳ್ಳಿಗಳಂತೆ ಶಿವಳ್ಳಿಯಲ್ಲಿ ಈ ಹಬ್ಬವನ್ನು ಉತ್ಸಾಹದಿಂದ ಆಚರಿಸುತ್ತಿದ್ದರು. ಯಳ್ಳಾಮಾಸಿ ಬಸವಣ್ಣನ ಜಯಂತಿ, ಸಂಕ್ರಾಂತಿ, ಹೋಳಿಹುಣ್ಣಿಮೆ ಹೀಗೆ ಅನೇಕ ಹಬ್ಬಗಳು ಚಾಲ್ತಿಯಲ್ಲಿವೆ.

ಹಬ್ಬದಲ್ಲಿ ಎತ್ತುಗಳಿಗೆ ಸಿಂಗಾರ ಮಾಡಲು ಬಣ್ಣವನ್ನು ಹಚ್ಚಿ ಬಾಸಿಂಗಗಳನ್ನು ಹೊಸ ಹಗ್ಗ ಮಿಂಚುವ ಹಿತ್ತಾಳೆಯ ಗಂಟೆ ಸರಗಳನ್ನು ಕಟ್ಟಿ ಬಣ್ಣ ಬಣ್ಣದ ಬನಾರಸ್ ಪೀತಾಂಬರಗಳನ್ನು ಹೊದ್ದಿಸಿ ಮೆರವಣಿಗೆಯನ್ನು ಮಾಡುತ್ತಿದ್ದರು. ಕುಲಕರ್ಣಿ, ಮಾಲಿ ಪಾಟೀಲ, ಸಾವ್ಕಾರ, ಗೌಡ ಹಾಗು ಸಾಮಾನ್ಯ ರೈತರ ಎತ್ತುಗಳು 'ಕರಿ' ಹಾಯಲು ಹೊರಟಾಗ ಊರಲ್ಲಿನ ಜನರು ಸಾಲುಗಟ್ಟಿ ನಿಂತು ಸಂಭ್ರಮದಿಂದ ಓಡುತ್ತಿರುವ ಎತ್ತುಗಳ ಓಟವನ್ನು ನೋಡುತ್ತಾ ಅಗಸೆಯ ಬಾಗಿಲಿಗೆ ಎರಡು ಕಡೆ ಬಿಗಿದು ಕಟ್ಟಿದ್ದ ಬೇವಿನ ಗೊಲ್ಲೆಯ ಹಗ್ಗದ ಹುರಿಯನ್ನು ಹರಿದು ಎತ್ತುಗಳು ಹೊರನುಗಿದ್ದುದನ್ನು ಕಂಡ ಜನರ ಚೀರಾಟ, ನಗುವಿನ ಹಬ್ಬದಲ್ಲಿ ತುಂಬಿ ತುಳುಕುತಿದ್ದವು. ಬದುಕಿನಲ್ಲಿ ಆ ಜನಾಂಗದವರ ನೋವುಗಳು ಎಷ್ಟೆ ಇದ್ದರು ಅದನ್ನು ಮರೆತು ಸಂಭ್ರಮದಿಂದ ಆಚರಿಸುತ್ತಿದ್ದರು.

ಕಾರಹುಣ್ಣಿಮೆಯ ಕರಿಯ ಮರುದಿನವೇ ಮೋಹರಂ ಹಬ್ಬವನ್ನು ಶಿವಳ್ಳಿಯಲ್ಲಿ ಹಿಂದು ಮುಸ್ಲಿಂರು ಜೊತೆಗೂಡಿ ಭೇದಭಾವವನ್ನು ಮರೆತು ಸಾಮರಸ್ಯದಿಂದ ಆಚರಿಸುತ್ತಿದ್ದರು. ಖತಲ್‌ಸಾಬ್ ದೇವರ ಸವಾರಿ. ಮಲ್ಲಪ್ಪ ಜಮದಾರನ ಸಂಬಂಧಿಕನಾದ ನಾನಪ್ಪನ ಮೈಯಲ್ಲಿ ಬರುತ್ತಿದ್ದು. ಪ್ರತಿವರ್ಷವು ಖತಲ್‌ಸಾಬ್ ದೇವರಿಗೆ ಮಲ್ಲಪ್ಪನ ಮನೆಯಿಂದ ಬಲಿತ ಹೋತದ 'ಕಂದೂರಿ' ನೈವೇದ್ಯ. ಹರಕೆಯಾಗಿತ್ತು. ಫತರೂನೇ 'ಅಳ್ಳಿಬಿಶಾ' ಆಗಿ

ಹುಲಿವೇಷತೊಟ್ಟು ಸೊಂಟಕ್ಕೆ ಗೆಜ್ಜೆಸರ ಬಿಗಿದು ಕುಣಿಯುತ್ತಿದ್ದ ಹಾಗೂ ದೇವರ ಪಂಜಿಗಳ ಮೆರವಣಿಗೆ ಆ ಜನಾಂಗದಲ್ಲಿದ್ದ ಆಚರಣೆಯಾಗಿತ್ತು.

ಜಮಾದಾರ ಮಲ್ಲಪ್ಪನ ಮನೆಯಿಂದ 'ಮಸೀದಿಗೆ ಬೆಲ್ಲದ ಶರಭತ್ತು ಹಾಗೂ ಬಿರ್ಯಾನಿ, ಚಪಾತಿ, ಮಾಂಸದ ತುಂಡುಗಳು, ಹೂವ್ವಿನ ಹಾರ, ಕಾಯಿ ಮುಂತಾದವುಗಳನ್ನು ಹಲಗೆ ಬಾಜಿಗಳೊಂದಿಗೆ ಮೆರವಣಿಗೆಯಲ್ಲಿ ಹೋಗುತಿತ್ತು. ಮುಲ್ಲಾಗಳು ನೈವೇದ್ಯ ಸ್ವೀಕರಿಸಿದ ನಂತರ ರಾತ್ರಿಯೆಲ್ಲ ಅಲಾಯಿ ಕುಣಿಯುವುದನ್ನು ಒಕ್ಕಲಿಗರ ಹಾಡುಗಾರಿಕೆಯನ್ನು ಊರಿನ ಗೌಡ ಕುಲಕರ್ಣಿ ಸಾವುಕಾರ, ಮಟದಯ್ಯ ಮೊದಲಾದವರು ಬಂದು ಮಸಿದೀಯಲ್ಲಿ ಕುಳಿತು ನೋಡಿ ಸಂಭ್ರಮಿಸುತ್ತ ಹಿಂದೂ ಮುಸಲ್ಮಾನ ಎಂಬ ಜಾತಿಯನ್ನು ಮರೆತು ಉತ್ಸಾಹದಿಂದ ಆಚರಿಸುತ್ತಿದ್ದರು. ಊರಲ್ಲಿ ಮೆರವಣಿಗೆ ಹೀಗೆ ಪೀರರ ಸವಾರಿಗಳೂ ಹೋದಾಗ 'ಖತಲ್ ಸಾಹೇಬಾ' ಜಮಾದಾರ ಮಲ್ಲಪ್ಪನ ಮನೆ ಮುಂದೆ ನಿಂತು ಬಿಡುತ್ತದೆ. ಮಲ್ಲಪ್ಪ "ಏನು ಕಮ್ಮಿಯಾಗ್ಯಾದ ನಿನಗೆ ಹೇಳಪ್ಪ ಸಾಹೇಬಾ....."

[೨]"ನನಗೇನೂ ಕಮ್ಮಿಯಾಗಿಲ್ಲೋ ಬೇಟಾ..... ನಿನ್ನಲಿಂದೇನೂ ಗಲ್ತಿ ಆಗಿಲ್ಲಾ...... ಆದರ ಯಾಕೋ ನಿನ್ನ ಮನಿ ತುಂಬಾ ಕತ್ತಲೆ ತುಂಬ್ಕೊಂಡಾದಲ್ಲೋ ಮಲ್ಲಪ್ಪಾ...... ಅಂಧೇರಾ ಹಿ ಅಂಧೇರಾಹೈ....."[೨] ಅಂತ ಖತಲ್ ಸಾಹೇಬ್ ದೇವರು ಹೇಳಿದಾಗ ಮಲ್ಲಪ್ಪನ ಮನಸ್ಸಿನಲ್ಲಿ ನಾನ ಆಲೋಚನೆಗಳು ಹೊಳೆಯುತ್ತ ಮತ್ತೇನು ಕಂಟಕ ಕಾದಿದೆಯೋ ಎಂದು ಆತಂಕ ಪಡುತ್ತಾನೆ. ಮುಂದೆ ಅವನ ಜೀವನ ಹಾದಿಯ ಖತಲ್ ಸಾಹೇಬ್ ನುಡಿದಂತೆ ಆಗುವುದನ್ನು ಕಾಣಬಹುದಾಗಿದೆ.

ಹೋಳಿ ಹುಣ್ಣಿಮೆಯಾದ ಐದನೆ ದಿನದ ಸಂಜೆ ತೇರು ಎಳೆದು ಮುಕ್ತಾಯವಾದರೆ ಜಾತ್ರೆಯು ಯುಗಾದಿ ಹಬ್ಬದವರೆಗೂ ನಡೆಯುತ್ತದೆ. ಗುಲ್ಬರ್ಗಾದ ಅಕ್ಕಪಕ್ಕದ ಹಳ್ಳಿಗಳ ಜನರು ತಮ್ಮ ಹೊಲಗಳ ಸುಗ್ಗಿ ಕೆಲಸವನ್ನು ಮುಗಿಸಿ ಜಾತ್ರೆಗೆ ಬರುತ್ತಾರೆ, ಮದುವೆ ಆದ ಹೆಣ್ಣು ಮಕ್ಕಳು ಹಾಗು ನಂಟರು, ಬೀಗರು ಬಂಧುಗಳನ್ನು ಕಲ್ಬುರ್ಗಿಯ ಜನತೆ ಹಬ್ಬಕ್ಕೆ ಆಹ್ವಾನಿಸಿ, ಬಂದವರಿಗೆ ಸಿಹಿ ಊಟವನ್ನು ಮಾಡಿ ಬಡಿಸುತ್ತಾರೆ. ಶರಣ ಬಸಪ್ಪನ ಜಾತ್ರೆಯಲ್ಲಿ ಗಂಡಸರು ಕೆಂಪು, ಹಳದಿ, ಗುಲಾಬಿ ರುಮಾಲುಗಳನ್ನು ತಲೆಗೆ ಸುತ್ತಿಕೊಂಡಿರುತ್ತಾರೆ. ಹೆಂಗಸರು ಜರದಂಚಿನ ಬಣ್ಣ ಬಣ್ಣದ ಇಳಕಲ ಸೀರೆಗಳನ್ನು ತೊಟ್ಟಿಕೊಂಡು ಸಂಭ್ರಮದಿಂದ ಆಚರಿಸುತ್ತಾರೆ.

ಹೀಗೆ ಕಲ್ಬುರ್ಗಿಯ ಶಾಣಬಸಪ್ಪನ ತೇರಿನ ವೈಭವವನ್ನು ಹಾಗು ಜಾತ್ರೆಯಲ್ಲಿನ ವಿಶೇಷತೆಯನ್ನು ವಿವರವಾಗಿ ವರ್ಣಿಸಿದ್ದಾರೆ. ಹೈದ್ರಾಬಾದ್ ಕರ್ನಾಟಕದಲ್ಲಿಯೇ ಬಹಳ

ಪ್ರಸಿದ್ಧವಾದ ಜಾತ್ರೆಯನ್ನು ನೋಡಲು ಸುತ್ತಮುತ್ತಲಹಳ್ಳಿಯಿಂದ ಜನಸಾಗರವೇ ಬಂದು ಸೇರುತ್ತದೆ. ಕಲ್ಯಾಣ ಬಸವಣ್ಣನ ಅವತಾರ ಎಂದು ನಂಬಿದ ಅಲ್ಲಿಯ ಜನರು ಭಕ್ತಿ ಭಾವದಿಂದ ಪೂಜಿಸುತ್ತಿದ್ದರು. ಜಾತ್ರೆಯಲ್ಲಿ ದೊಡ್ಡ ದೊಡ್ಡ ಅಂಗಡಿ ಹೋಟಲ್‌ಗಳಲ್ಲಿನ ಜಿಲೇಬಿ, ರಸಗುಲ್ಲಾ, ಜಾಂಗಿರು, ಪಾಲಕ ಭಜಿ, ಮಿರಚಿ, ಭಜ್ಜಿ, ಮಿಕ್ಸಡ್ ಭಜಿ, ಪೂರಿ, ಫಲ್ಯ, ಚಿರೋಟಿ, ಮಸಾಲಾರೋಟಿ, ಪಲಾವು ಅಂತ ವಿಧವಿಧವಾದ ತಿಂಡಿಗಳು ಕಾಣಿಸುತ್ತಿದ್ದವು. ಜೊತೆಗೆ ದನಗಳ ಜಾತ್ರೆಗಳಲ್ಲಿ ಎತ್ತುಗಳನ್ನು ಮಾರಲು ಖರೀದಿಸಲು ಬಂದಿರುವ ಹಳ್ಳಿ ಜನರು ಸೇರುತ್ತಿದ್ದರು. ಜಾತ್ರೆಯಲ್ಲಿ ಭಜನೆ ಮಾಡುತ್ತ ಶಂಖ ಊದಿ ಚಿಲುಮೆಗೆ ಗಾಂಜಾ ತುಂಬಿ ಸೇದುವ ಸಾಧು ಸಂತರ ಗುಂಪು, ಭಿಕ್ಷುಕರು ಕಾಣಿಸುತ್ತಿದ್ದರು.

ಶಿವಳ್ಳಿಯ ಹೋಳಿ ಹುಣ್ಣಿಮೆಯಲ್ಲಿ ಮಾದರ ಕೇರಿಯಲ್ಲಿ ಹಲಗೆಗಳನ್ನ ಬಾರಿಸುತ್ತ ಆ ಜನಾಂಗದವರು ಹೋಳಿ ಹಬ್ಬದೊಂದು ಸೊಂಟದ ಕೆಳಗಿನ ಹಾಡುಗಳನ್ನು ಹಾಡುತ್ತ ಹುಣ್ಣಿಮೆ ದಿನದ ರಾತ್ರಿಯಲ್ಲಿ 'ದುರಪತಿ ವಸ್ತ್ರಾಪರಣ' ನಾಟಕವನ್ನು ಆಡುತ್ತಾ ಕುಣಿಯುತ್ತಾ, ಕಾಮಣ್ಣನ ಸುತ್ತ ತಮಟೆಯನ್ನು ಬಾರಿಸಿ ಕಾಮಣ್ಣನನ್ನು ಸುಟ್ಟು ಬಾಯಿಯನ್ನು ಬಡಿದುಕೊಳ್ಳುತ್ತಿದ್ದರು ಮತ್ತು ಅವರ ನಂಬಿಕೆಯಂತೆ ಕಾಮಣ್ಣನ ಸುಟ್ಟ ಕೆಂಡವನ್ನು ತಂದು ಮನೆಯಲ್ಲಿ ಒಲೆ ಉರಿಸುತ್ತಿದ್ದರು. ಹಾಗೆ ಕಾಮನ ಹಬ್ಬದ ಮಾರನೆ ದಿನ ಜೋಡು ಹೋತವನ್ನು ಬಲಿಕೊಟ್ಟು, ಕೆಳ ಜಾತಿಯವರು ಖಂಡದ ಅಡಿಗೆ ಮಾಡಿ ತಿಂದರೆ, ಲಿಂಗಾಯಿತರು ಹಾರುವರು. ಎಣ್ಣೆ ಹೋಳಿಗೆ, ಅಡಿಗೆಯನ್ನು ಮಾಡಿ ತಿನ್ನುವ ಸಂಪ್ರದಾಯವಾಗಿತ್ತು. ಶಕ್ತಿವಂತವರು ಅಡವಿಗೆ ಹೋಗಿ ಮೊಲ, ಕಾಡುಕೋಳಿ ಪಾರಿವಾಳ ಬೇಟೆ ಮಾಡಿ 'ಕರಿ' ಮಾಡುತ್ತಿದ್ದರು. ಹೀಗೆ ಹೋಳಿ ಹಬ್ಬದಲ್ಲಿ ಹಳ್ಳಿ ಮಂದಿ ವಿಧವಿಧವಾದ ವೇಷ ಹಾಕುವುದು, ಜೊತೆಗೆ ಬಣ್ಣವನ್ನು ಹಾಕುತ್ತ ಸತ್ತ ಹೆಣದ ಅಣಕು ಪ್ರದರ್ಶನವನ್ನು ಮಾಡಿಕೊಂಡು ತಮಾಟೆಯ ದನಿಗೆ ಕುಣಿಯುತ್ತ. ಹೋಳಿ ಹಬ್ಬವನ್ನು ಸಾಂಸ್ಕೃತಿಕ ವಿಧಿವಿಧಾನಗಳಲ್ಲಿ ಆಚರಿಸುತ್ತಿದ್ದರು.

ರಾತ್ರಿ ಕಾಮಣ್ಣನನ್ನು ಸುಡುವಾಗ ಮಾದರ ಹಲಗಿ ಬಡಿತದ ಸಪ್ಪಳ ಜೋರಾದಾಗ [೩]"ಊರ ಮುಂದಿನ ಕಾಮಣ್ಣನ ಸುಡ್ಲಕತ್ತಾರ. ಬರ್ರೇ ನೋಡ್ಲಕ್ಕ... ಬರ್ರೇ ಯಕ್ಕಾ... ಬರ್ರಿ ಬರ್ರಿ..."[೩] ಎಂದು ಊರಿನ ಜನರನ್ನು ಕೂಗುವುದು, ಉರಿಯುತ್ತಿದ್ದ ಕಾಮಣ್ಣನ ಸುತ್ತ ಬಾರಿಸುತ್ತ, ಬಾಯಿಯನ್ನು ಬಡೆದುಕೊಂಡು, ಹಾಡುಗಳನ್ನು ಹಾಡುತ್ತ ಕುಣಿಯುತ್ತಿದ್ದರು.

ಬಸವಣ್ಣನ ಗುಡಿಯ ಮುಂದಿನ ಬಯಲಲ್ಲಿ ನಡೆಯುವ ನಾಟಕವನ್ನು ನೋಡಿ ಸಂಭ್ರಮವನ್ನು ಪಡುತ್ತಿದ್ದರು. ಹಿಂದೂಗಳು, ಮುಸಲ್ಮಾನರು, ಕ್ರಿಶ್ಚಿಯನ್ನರು ಎಲ್ಲಾ ಜಾತಿಯ

ಧರ್ಮದವರು ಬಡವ, ಶ್ರೀಮಂತ ಎಂಬ ಭೇದವಿಲ್ಲದೆ ಬಣ್ಣವನ್ನು ಹಾಕಿ ಸಂತೋಷಪಡುತ್ತಿದ್ದರು.

ಶಿವಳ್ಳಿಯಲ್ಲಿನ ನಾಗರ ಪಂಚಮಿಯ ಹಬ್ಬವನ್ನು ಸಾಂಸ್ಕೃತಿಕವಾಗಿ ಆಚರಿಸುವುದನ್ನು ಕಾಣಬಹುದು ಅಲ್ಲಿನ ಹೆಣ್ಣುಮಕ್ಕಳು ಹೊಸ ಬಟ್ಟೆಯನ್ನು ಹಾಕಿಕೊಂಡು ತಂಬಿಟ್ಟಿನ ಉಂಡೆ ಕಡುಬುಕೊಬ್ಬರಿ ಹಾಲು ತೆಗೆದುಕೊಂಡು ಹುತ್ತಗಳಿಗೆ ಹಾಗು ನಾಗರಕಲ್ಲುಗಳಿಗೆ ಹಾಲನ್ನು ಎರೆಯುವ ಪದ್ಧತಿಯು ಶತಮಾನಗಳಿಂದ ನಡೆದು ಬಂದ ಆಚರಣೆಗಳನ್ನು ಅಲ್ಲಿನ ಜನಾಂಗ ಭಕ್ತಿಯಿಂದ ಪೂಜಿಸುವುದನ್ನು ಕಾಣಬಹುದು.

ದಲಿತ ಜನಾಂಗದ ಆಹಾರ ಪದ್ಧತಿಯ ಒಂದು ನಿಚ್ಚಳವಾದ ಚಿತ್ರ ಇಲ್ಲಿ ನಮಗೆ ಕಂಡುಬರುತ್ತದೆ. ಮಾಂಸದ ಸಾರು, ಖಂಡ ತುಂಡುಗಳ ಪಲ್ಲೆ, ಖೀಮಾದ ಉಂಡೆ, ಬೀಜಾದ ತಾಳು ಪಲ್ಯ, ಕೋಳಿ ಬಿರ್‍ಯಾನಿ, ಮೊಲದ ಮಾಂಸದ ಸಾರು, ಇದರ ಜೊತೆಗೆ ಸೇಂದಿ ಕುಡಿಯುವುದು ಅವರ ನಿತ್ಯ ಬದುಕಿನ ಆಹಾರವಾಗಿರುವುದನ್ನು ತಿಳಿಯಬಹುದು.

ಶಿವರಾತ್ರಿಯಿಂದ ಯುಗಾದಿ ಹಬ್ಬದ ತನಕ ಹಳ್ಳಿಗಳ ಹೊಲಗಳಲ್ಲಿ ಬೆಳೆದ ಜೋಳವನ್ನು ಕಟಾವು ಮಾಡಿ. ಹೊರಿ ಮಾಡಿ ಲಗಸಿಮಿಯ ಗುಡಿಯ ಹೊಲದಾಗ ತಂದು ಹಾಕುತ್ತಿದ್ದರು. ಹೊಲದಿಂದ ಬಂದ ಜೋಳದ ಹೊರಿಗಳನ್ನು ಹೆಣ್ಣಾಲುಗಳು ಜೋಳದ ತೆನೆಯನ್ನು ಕತ್ತರಿಸಿ 'ಕಣ'ದ ಸುತ್ತ ಹಾಕುತ್ತಿದ್ದರು. ಜಮಾದಾರ ಮಲ್ಲಪ್ಪನ ಹೊಲದ ರಾಶಿ ಎಂದರೆ ಕೆಳಗೇರಿ ಮಂದಿಗೆ ದೊಡ್ಡ ಸುಗ್ಗಿಯ ಸಂಭ್ರಮವೇ ಆಗಿತ್ತು. ದೊಡ್ಡಿ ಹೊಲ್ಯಾರು, ಸಮಗಾರ್‍ರು, ಹಜಾಮರು, ಅಗಸರು, ಫಕೀರರು, ಮುಲ್ಲಾಗೋಳು, ಜೋಗಣೀಯರು ಎಲ್ಲಾ ಮಂದಿ ಬಂದು ಹಂತಿ ಕಟ್ಟುತ್ತಿದ್ದರು. ರಾತ್ರಿಯಿಂದ ಬೆಳಗ್ಗಿನವರೆಗೂ ಹಂತಿಹಾಡುಗಳು ನಡೆಯುತ್ತಿದ್ದವು ಹಗಲಿನಲ್ಲಿ ಗುಡಿಯಲ್ಲಿರುವ ಲಗಸಿಮಿಗೆ ಮತ್ತು ಕಣಕ್ಕೆ ಜೋಡಿ ಕುರಿಗಳ ಬಲಿಕೊಡುತ್ತಿದ್ದರು. ಅಲ್ಲಿ ನೆರೆದಿದ್ದ ಮಂದಿಗೆ ಜೋಳದ ರೊಟ್ಟಿ, ಹುಳಿಬಾನದ ಊಟ ಹಾಕಿಸಿ, ಕುರಿ ಖಂಡದ ಪಲ್ಲ್ಯಾ, ಜೊತೆಗೆ ತಾಜಾ ಸೇಂದಿಯನ್ನು ತರಿಸಿ ಕೊಟ್ಟು. ಮಲ್ಲಪ್ಪ ತನ್ನ ಹೊಲದಲ್ಲಿ ಸುಗ್ಗಿಯ ಜಾತ್ರೆಯನ್ನು ಉತ್ಸಾಹದಿಂದ ಆಚರಿಸುತ್ತಿದ್ದನು. ಖಣದ ಪೂಜೆಗೆ ಸೀರಿ, ಕುಪ್ಪಸ, ಮೊದಲಾದವುಗಳನ್ನು ತಂದು ಖಣದ ರಾಶಿಗೆ ಹಾಗು ಗುಡಿಯ ಲಗಸಿಮಿಗೆ ಪೂಜೆಯನ್ನು ಮಾಡುತ್ತಿದ್ದರು.

'ಕಣ'ದಲ್ಲಿ ಕೆಲಸ ಮಾಡುವರು ಕೆಲಸದಲ್ಲಿ ತಲ್ಲಿನರಾದರೆ. ಅಡಿಗೆ ಮಾಡುವವರು ಕುರಿ ಖಂಡದ ಅಡಿಗೆ, ಎಣ್ಣೆ ಹೋಳಿಗೆಯ ಮೀಸಲು ಅಡಿಗೆ, ಹೊರಣ ಅರೆಯುವವರು,

ಹಿಟ್ಟು ನಾದುವವರು, ಮಾಂಸ ಬೇಯಿಸುವವರು ಹೀಗೆ ನಾನಾ ಕೆಲಸಗಳಲ್ಲಿ ಅಲ್ಲಿನ ಜನರು ನಿರತರಾದರೆ.

ಹಿಜಡಾಗಳು ಚಪ್ಪಾಳೆ ಹಾಕುತ್ತ ಕುಣಿಯುತ್ತ ನಾಗವ್ವಾಯಿ ಮುಂದೆ ಬಂದು "“ನಾಗವ್ವಾಯಿ ಪ್ಯಾರಕಾ ದುಶಮನ್ ಹಾಯ್ ಹಾಯೇ..... ಪ್ಯಾರ ದುಶಮನ್ ಯಾರ್ ಕಾ ದುಶಮನ್ ಹಾಯ್ ಹಾಯೇ......”" ಅಂತ ಹಾಡುತ್ತ ನೆರೆದಿದ್ದ ಮಂದಿಯನ್ನು ನಗಿಸುತ್ತಿದ್ದರು ಹೀಗೆ ಜಮಾದಾರ ಮಲ್ಲಪ್ಪ 'ಸುಗ್ಗಿ'ಯನ್ನು ಬಹಳ ಸಂಭ್ರಮದಿಂದ ಆಚರಿಸಿ ಅಲ್ಲಿ ನೆರೆದಿದ್ದವರಿಗೆ ಜೋಳವನ್ನು ದಾನವಾಗಿ ನೀಡುತ್ತಿದ್ದನು. ಮೊದಲು ಐನೋರ ಮಾಂತಯ್ಯ ಸ್ವಾಮಿಗೆ ಜೋಳಿಗೆಗೆ ಹಾಕಿ, ನಂತರ ಮಾಪುರ ತಾಯಿಯ ಜೋಗಣೆಯರ ಪರಡಿಗೆ ನೀಡಿದ ಮೇಲೆ ಉಳಿದ ಮಂದಿಗೆ ದಾನಕೊಡುತ್ತಿದ್ದನು. ಪಡೆದವರು ಹರಕೆಯನ್ನು ಕೊಟ್ಟ ಮೇಲೆ ತಮ್ಮ ಮನೆಗಳಿಗೆ ಹೋಗುತ್ತಿದ್ದರು. 'ಸುಗ್ಗಿ' ಆಚರಣೆಯಲ್ಲಿ ಅವರ ಸಂಸ್ಕೃತಿಯನ್ನು ಅವರ ನಂಬಿಕೆಯನ್ನು ಪೂರ್ವಿಕರಿಂದ ನಡೆದುಬಂದ ಪದ್ಧತಿಯನ್ನು ತಿಳಿಯಬಹುದು ಜೋಳದ ರಾಶಿಯನ್ನು ದೇವರು ಎಂದು ನಂಬಿ ಭಕ್ತಿಯಿಂದ ನಮಿಸುತ್ತಿದ್ದರು.

ಕಾದಂಬರಿಯಲ್ಲಿ ಕಾಣಿಸುವ ಇತರ ಜಾತಿಗಳನ್ನು ಹೆಸರಿಸಿದ್ದಾರೆ. ಅವರಲ್ಲಿ ಅಗಸರು, ಸಮಗಾರ, ಹಜಾಮರು, ಮುಸ್ಲಿಂರು, ದೊಡ್ಡಿ ಹೊಲೇರು, ಬೇಲಗಸಲ್ಯಾರು, ಕುಂಬಾರರು, ಬುಡ ಬುಡಕೆಯವರು, ಹೂಗಾರು, ಪಿಂಜಾರು ಎಂಬ ಪಂಗಡದವರನ್ನು, ಅವರ ಸಾಮಾಜಿಕ ಜೀವನ ಕ್ರಮವನ್ನು, ಅವರ ನಂಬಿಕೆ ಆಚರಣೆಗಳನ್ನು ಹಾಗೂ ಸಾಮಾಜಿಕ ಸ್ಥಾನಮಾನವನ್ನು ಗುರುತಿಸಿದ್ದಾರೆ.

ಕಾದಂಬರಿಯಲ್ಲಿ ಬೇಸಾಯದ ಬೆಳೆಗಳಾದ ಬದನೆಕಾಯಿ, ಬೆಂಡಿಕಾಯಿ, ಚಳಕಾಯಿ, ಟಮಾಟೋ, ಕೊತ್ತಂಬರಿ, ಕರಿಬೇವು, ಮುಂತಾದ ಬೆಳೆಗಳನ್ನು ಬೆಳೆದು ತಮಗೆ ಉಪಯೋಗಿಸಿಕೊಂಡು ಉಳಿದ ಪದಾರ್ಥಗಳನ್ನು ನರೋಣಾದ ಸಂತೆಗೆ ಮಾರಾಟ ಮಾಡುವದು ಆ ಸಮಾಜದ ಕುಲ ಕಸುಬಾಗಿದೆ.

ಶಿವಳ್ಳಿಯ ಊರ ಮುಂದಿನ ಹುಣಸೆಮರದ ಕೆಳಗೆ ನಾಕಾರು ಡೇರಗಳನ್ನು ಹಾಕಿಕೊಂಡು ವರ್ಷಕ್ಕೊಮ್ಮೆ ಬರುವ ಮಂದಿಯನ್ನು ಕಾಣಬಹುದು. ಅವರಲ್ಲಿ ಕಬ್ಬಿಣಕೊಡ, ಬುಟ್ಟಿಗಳನ್ನು ರಿಪೇರಿ ಮಾಡುವ ಗಿಚಾಡೇರು, ಬೆಳ್ಳಿಯ, ಕಂಚಿನ, ಕಡಗ, ಕುಳಿ ಪಿಲ್ಲೆ ಕಾಲುಂಗುರಗಳನ್ನು ಮಾಡುವ ಬೇಲಸಲ್ಲೇರು, ಹಣಚಿ ಒಟ್ಟು ಹಾಕುವ ಕಟಬರ ಮುದುಕಿಯರು, ಬೀಸುಕಲ್ಲು, ಬಗೇಕಲ್ಲು, ರುಬ್ಬುಗುಂಡು ಕಲಿಗಲ್ಲುಗಳನ್ನು ಮುಳ್ಳಾಡಿಸುವ ಒಡ್ಡರು. ಕರಡಿ ಕೋತಿ ಆಡಿಸುವವರು ವೇಶೆಗಾರರು, ದುರುಗ ಮುರುಗಿಯರು ಡೊಂಬರು ಮೊದಲಾದವರು

ಬಂದು ಊರಿನಲ್ಲಿ ಬೀಡುಬಿಟ್ಟು ದಿನ ನಿತ್ಯ ಅವರ ಕುಲಕಸುಬಿನ ಕೆಲಸವನ್ನು ಊರಿನ ಜನರಿಗೆ ಮಾಡಿ ಅವರಿಂದ ದವಸಧಾನ್ಯ ಹಣವನ್ನು ಪಡೆದುಕೊಂಡು ಹೊಗುತ್ತಿದ್ದುದನ್ನು ಕಾಣಬಹುದು. ಕಬ್ಬಿಣದ ಕೆಲಸ ಮಾಡುವರು ಮುರಿದ ಹರಿದಕೊಡ, ಬುಟ್ಟಿಗೆ ತಳಹಾಕುವುದು ತೂತು ಬೆಸೆಯುವುದು, ಹಾಗೆ ಹಣಚಿ ಹಾಕುವವರು ಊರಿನ ಹೆಣ್ಣು ಮಕ್ಕಳಿಗೆ ಗಂಡಸರಿಗೆ ನಗಿಸುತ್ತ ಹಾಡುತ್ತಾ ಹೇಳುತ್ತ [೫]"ಯವ್ವೋ ಮಗಳೇ.... ಹಡದವ್ರು ಬರಂಗಿಲ್ಲ ಕೈ ಹಿಡಿದ ಗಂಡ ಬರಂಗಿಲ್ಲ, ನೀ ಹೊಟ್ಟಿ ಬಿಚ್ಚಿ ಹಡದ ಮಕ್ಕಳು ಮರಿ ಬರಂಗಿಲ್ಲ..... ನೀ ಸಾಯ ಮುಂದ ನಿನ್ ಜತಿ ಬರಾದು ಅಂದ್ರ ಈ ಹಣಚಿ ಬಿಟ್ಟು ಒಂದೇ ಮಗಳೇ.... ಇದಕ್ಕೆ ನೀ ಬ್ಯಾಡಂತನ ಬ್ಯಾಡವ್ವ....."[೫] ಈ ರೀತಿಯ ಜಾನಪದ ನಂಬಿಕೆಗಳು ಹೆಣ್ಣುಮಕ್ಕಳನ್ನು ಆಕರ್ಷಿಸುತ್ತಿದ್ದವು. ಹೀಗೆ ಹೆಣ್ಣು ಮಕ್ಕಳ ಕೈಯ ಮೇಲೆ ಚಿತ್ತಾರಗಳನ್ನು ಹಾಕುತ್ತ ಅವರು ಕೊಟ್ಟ ಹಣವನ್ನು ಹಾಗೂ ಕಾಳುಕಡ್ಡಿಯನ್ನು ತೆಗೆದುಕೊಂಡು ಬಿಡಾರ ಬಿಟ್ಟ ಪ್ರದೇಶಕ್ಕೆ ಬಂದು ಜೀವನ ಸಾಗಿಸುವುದನ್ನು ಕಾಣಬಹುದು. ಹೀಗೆ ವರ್ಷಕ್ಕೊಮ್ಮೆ ವಲಸೆ ಬಂದು, ಗಂಡಸರು ಹೆಂಗಸರಿಬ್ಬರೂ ಒಟ್ಟಾಗಿ ಕೆಲಸಗಳನ್ನು ಮಾಡುತ್ತಿದ್ದರು. ಇವರು ಕಷ್ಟ ಜೀವಿಗಳು ಇವರಿಗೆ ಸ್ವಂತ ಮನೆಯಿಲ್ಲದೆ ಬದುಕು ಸಾಗಿಸುತ್ತಿದ್ದರು. ಸಂಪಾದಿಸಿದ ಹಣದಲ್ಲಿ ಸೇಂದಿ ಕುಡಿಯುತ್ತಾ, ತಿನ್ನುತ್ತಾ, ಹಾಡುತ್ತಾ, ಹರಟೆ ಹೊಡೆಯುತ್ತಾ ಇವರು ನಾಳಿನ ಬಗ್ಗೆ ಚಿಂತೆಯಿಲ್ಲದೆ ಬದುಕನ್ನು ಸಾಗಿಸುತ್ತಿದ್ದರು.

ಶಿವಳ್ಳಿಯ ಅಕ್ಕಪಕ್ಕದ ಊರುಗಳಾದ ಚುಂಚೂರು, ಸಾವಳಗಿ, ನರೋಣಾ ಹಳ್ಳಿಗಳ ಸೀಮೆಗಳ ಪರಿಸರ ಚಿತ್ರಣವನ್ನು ಸೆಂದಿ ಕಲಪ್ಪನು ಸೇಂದಿ ಅಂಗಡಿಯ ನಾಲ್ಕು ಊರಿನ ಜನರು ಸೇರುವ ಮಧ್ಯೆ ಮಾರಟ ಮಾಡುತ್ತಿದ್ದನು ಕಂಡ ಪಂಚರು ಸೇಂದಿ ಅಂಗಡಿಯನ್ನು ನೀಷೆದ ಮಾಡಲು ಪ್ರಯತ್ನ ಪಟ್ಟರು. ಅದು ಫಲಿಸದೆ ಹೋಗಿ ಅಲ್ಲಿನ ಜನಾಂಗಕ್ಕೆ ಸೇಂದಿ ಅಂದ್ರೆ ಅವರಿಗೆ ಪ್ರಿಯವಾದದ್ದು. ಗಂಡು ಹೆಣ್ಣು ಬೇದವಿಲ್ಲದ್ದೆ ಕುಡಿಯುತ್ತಿದ್ದರು, ಗೌಡ, ಕುಕ್ಕಣಿ, ಸಾವ್ಕಾರ ಕೆಳಗೇರಿಮಂದಿ, ಸಾವಳಗಿಯ ಕಾಟಣರು, ಚುಂಚೂರಿನ ಕಪ್ಪು ಮಂದಿಯ ಜೊತೆ ಕದ್ದು ಮುಚ್ಚಿ ಲಿಂಗಾಯಿತರು, ಹಾರವರು ಕುಡಿಯುತ್ತಿದ್ದನ್ನು ಕಾಣಬಹುದು.

ಹೀಗೆ ಸೇಂದಿ ಅಂಗಡಿಯಲ್ಲಿ ಜನ ಸಂದಣಿ ಹೆಚ್ಚಾಗುತ್ತಿದ್ದಂತೆ ಅಲ್ಲಿ ಹರಟಿ ಗಲಭೆಯು ಹೆಚ್ಚಾಗುತ್ತಿತ್ತು. ಇದರ ಜೊತೆಯಲ್ಲಿ ಜೋಗಿಣಿಯರ ಹಾಡು, ಕುಣಿತಗಳು, ಖೋಜಾಗಳ ಮತ್ತು ಜೋಗಿಣಿಯರು ಬಯಲಿನಲ್ಲಿ ಕುಳಿತು ಕುಡಿದು ನಿಶೆಯಲ್ಲಿ ಜಗಳ ಮಾಡುತ್ತಾ, ಸೊಂಟದ ಕೆಳಗಿನ ಬೈಗುಳಗಳನ್ನು ಆಡುತ್ತಾ, ಉಲ್ಲಾಸದಿಂದ ಕುಣಿಯುತ್ತಿದ್ದರು. ಹೀಗೆ ಆ ಜನಾಂಗದವರು ಸೇಂದಿಯಂದರೆ ಅವರಿಗೆ ಪಂಚಪ್ರಾಣವಾಗಿತ್ತು. ಹೆಣ್ಣು ಗಂಡು ಎಂಬ ಭೇದ ಭಾವವಿಲ್ಲದೆ ಎಲ್ಲರೂ ಒಟ್ಟಾಗಿ ಕುಳಿತು ಕುಡಿಯುತ್ತಿದ್ದರು.

ಚೂಂಚೂರಿನ ಮಾದರಕೇರಿಯ ಮಾನಿಂಗಪ್ಪನ ಮತ್ತು ಮಾಳವ್ವರಿಗೆ ಮದುವೆ ಆಗಿ ಬಹಳ ವರ್ಷದವರೆಗೆ ಮಕ್ಕಳಾಗಿರಲಿಲ್ಲ, ಈ ದಂಪತಿಗಳು ಮಾಪುರ ತಾಯಿಗೆ ಚೊಚ್ಚಲ ಹೆರಿಗೆ ಆದ ಹೆಣ್ಣು ಮಗಳನ್ನು ನಿನ್ನ ಸೇವೆಗೆ ಬಿಡುತ್ತೇನೆ ಎಂದು ಬೇಡಿಕೊಂಡಾಗ, ದೇವಿಯ ಅನುಗ್ರಹದಿಂದ ಅವಳಿ ಜವಳಿ ಹೆಣ್ಣು ಮಕ್ಕಳು ಹುಟ್ಟಿದಾಗ, ದುರ್ಗಿ ಮರ್ಗಿ ಎಂಬ ಹೆಸರಿಟ್ಟರು. ಮುಂದೆ ಅವರು ಬೆಳೆದು ದೊಡ್ಡವರಾದ ಮೇಲೆ ಯಾರಿಗೆ ಜೋಗಿಣಿಗೆ ಬಿಡಬೇಕು ಎಂಬ ಗೊಂದಲ ಸುರುವಾದಾಗ, ಊರಿನ ಹಿರಿಯರ ತೀರ್ಮಾನದಂತೆ ಅವಳಿ ಜವಳಿ ಎರಡು ಹೆಣ್ಣು ಮಕ್ಕಳಾದ್ದರಿಂದ, ಇಬ್ಬರನ್ನೂ ಜೋಗಿಣಿಗೆ ಬಿಡಬೇಕು ಎಂಬ ನ್ಯಾಯದಂತೆ, ಮಾಪುರ ತಾಯಿಯ ಜಾತ್ರೆಯಲ್ಲಿ ರೀತಿ ರಿವಾಜಿನಂತೆ ದೇವರಿಗೆ ಜೋಗಿಣಿ ಬಿಡುತ್ತಾರೆ. ಚೂಂಚೂರಿನ ಹೊಲಗೇರಿ, ಮಾದರಕೇರಿಯಲ್ಲಿ ಬಹಳ ತಲೆಮಾರಿನಿಂದ ಬೆಳೆದು ಬಂದ ಈ ಪದ್ಧತಿಗೆ, ತಮ್ಮ ಮಕ್ಕಳನ್ನು ದೇವಿಯ ಸೇವೆಗೆ ತಂದೆ ತಾಯಿಯರೆ ನಿಂತು ಸೂಳೆಗಾರಿಕೆ ದಂಧೆಗೆ ಇಳಿಸುತ್ತಾರೆ. ಒಮ್ಮೆ ಜೋಗಿಣಿ ಆದರೆ ಸಾಯುವವರೆಗೂ ಜೋಗಿಣಿ ಆಗಿಯೇ ಉಳಿಯಬೇಕಾಗುತ್ತದೆ.

ಜೋಗಿಣಿಯರು ಸೇಂದಿ ಅಂಗಡಿಯಲ್ಲಿ ಚಾಡಕಿ ಬಾರಿಸುತ್ತ ಹಾಡುತ್ತಿರುವಾಗ ಅಲ್ಲಿ ಕುಡಿಯುವ ಮಂದಿಯಲ್ಲಿ ಅವರ ಹಾಡಿಗೆ ತಲೆದೂಗುತ್ತಿದ್ದರು. ಸೇಂದಿ ಕುಡಿಯುವುದನ್ನು ಮರೆತರು, ಭಜಿ, ತತ್ತಿ ತಿನ್ನುವುದನ್ನು ನಿಲ್ಲಿಸಿದರು, ಅವರ ಹಾಡಿಗೆ ಕಿವಿಯನ್ನು ಕೊಟ್ಟು ಹಾಡಿನ ಗುಂಗಿನಲ್ಲಿ ನಿರತರಾಗಿದ್ದರು ಜೋಗಿಣಿಯರು. ಅರ್ಧ ಗಂಟೆಯವರೆಗೆ ಹಾಡಿ ಮಂಗಳಾರತಿಯನ್ನು ಈ ರೀತಿ ಹೇಳುತ್ತಾರೆ "ಉಧೋ... ಉಧೋ... ಉಧೋ... ತಾಯೀ ಸದಾನಂದೀ ಚುಂಚೂರ ಮಾಪುರೀ ಮಾಯಕಾರತೀ ದೇವಿ ಉಧೋ ಉಧೋ...." ಅಂತ ಹಾಡಿ ಅಲ್ಲಿ ನೆರೆದಿದ್ದ ಜನರಿಂದ ಸೇಂದಿಯನ್ನು ಕುಡಿದು, ತಿಂದು ಕುಣಿದು ಕುಪ್ಪಳಿಸುತ್ತಿದ್ದರು. ಅಲ್ಲಿನ ಜನರು ಇವರನ್ನು ರೇಗಿಸುತ್ತಿದ್ದರು. ಆದರೆ ದುರ್ಗಿ, ಮರ್ಗಿಯರು ತಮ್ಮ ಸೇವೆಗೆ ಎಂದು ವಿರುದ್ಧವಾಗಿ ನಡೆಯದೆ, ತಮ್ಮ 'ಜೋಗಿಣಿ' ವೃತ್ತಿಯನ್ನು ಸಂತೋಷದಿಂದ ಮುಂದುವರಿಸಿಕೊಂಡು ಹೋಗುತ್ತಿದ್ದರು. ಅವರು ಇದ್ದ ನಂಬಿಕೆ, ಆಚರಣೆ, ಸಂಸ್ಕೃತಿಯನ್ನು ಯಥಾವತ್ತಾಗಿ ನಡೆಸಿಕೊಂಡು ಬರುತ್ತಿದ್ದರು.

ಕಾದಂಬರಿಯಲ್ಲಿ ಶಿವಳ್ಳಿಯ ಜೊತೆಗೆ ಗುಲ್ಬರ್ಗಾದ ಪರಿಸರ ಚಿತ್ರಣ ಹಾಗು ಕೆಲವು ಕುಟುಂಬಗಳ ಜೀವನ ಕ್ರಮವನ್ನು ಪರಿಚಯಿಸುವುದನ್ನು ಕಾಣಬಹುದು. ಅದರಲ್ಲಿ ಹಾಲಪ್ಪ ಶಾಣಮ್ಮರ ಬದುಕಿನ ಚಿತ್ರಣ ಮತ್ತು ಅವರ ಅಕ್ಕ ಪಕ್ಕ ವಾಸಿಸುವ ಜನಾಂಗದ ವಾಸ್ತವಿಕ ಚಿತ್ರಣವನ್ನು ವಿಸ್ತಾರವಾಗಿ ನೀಡಿದ್ದಾರೆ.

ಕಲ್ಬುರ್ಗಿಯಲ್ಲಿ ಹಾಲಪ್ಪನ ಮಗಳು ಬೆಳ್ಳಿ ಮೈನೆರೆದಾಗ ಶಾಣಮ್ಮ ಸಂಪ್ರದಾಯದ ಪದ್ಧತಿಯಲ್ಲಿ ಆಚರಿಸುವುದನ್ನು ಕಾಣಬಹುದು. ಜಮಾದಾರ ಮಲ್ಲಪ್ಪನ ಮನೆಯಿಂದ ಬನ್ನಿ ಗೋಧಿ, ಕಡ್ಲೆಬೇಳೆ ಕರಿಕವಳಿ, ಅಕ್ಕಿ, ಕೊಬ್ಬರಿ ಬೆಲ್ಲ, ತುಪ್ಪ ಇವುಗಳನ್ನೆಲ್ಲ ಬೆಳ್ಳಿಗೆ ಕೊಟ್ಟಿ ಹದಿನೈದು ದಿನ ಮಂಟಪದಲ್ಲಿ ಕೂರಿಸಿ ನೆಂಟರು ಹಾಗೂ ಕೇರಿ ಮಂದಿಯನ್ನು ಕರೆದು ಹಾಡುಗಳನ್ನು ಹಾಡಿಸಿ ಅವರಿಗೆ ಊಟದ ವ್ಯವಸ್ಥೆ ಮಾಡಿ ಅವರನ್ನ ಸತ್ಕರಿಸುವುದು ಈ ಕೆಳವರ್ಗದ ಜನಾಂಗದಲ್ಲಿ ರೂಢಿಯಲ್ಲಿರುವುದನ್ನು ಕಾಣಬಹುದು. ಹೈದ್ರಾಬಾದ್ ಕರ್ನಾಟಕದ ಗ್ರಾಮೀಣ ಜನರು ಯಾವುದೇ ಸಂಪ್ರದಾಯದ ವಿರುದ್ಧವಾಗಿ ಜೀವಿಸದೆ ಭಯ ಭಕ್ತಿಯಿಂದ ಪೂಜಾ ಮನೋಭಾವನೆಯಿಂದ ಕಾರ್ಯ ರೂಪಕ್ಕೆ ತರುತ್ತಿದ್ದರು ಎಂಬುದನ್ನು ತಿಳಿಯಬಹುದು.

ಗುಲ್ಬರ್ಗಾದಲ್ಲಿ ಸೂಪರ್ ಮಾರ್ಕೆಟ್ ಬಸ್‌ಸ್ಟಾಂಡಿನಲ್ಲಿ ಪ್ರಯಾಣಿಕರ ಜೇಬಿಗೆ ಕತ್ತರಿ ಹಾಕಿಕೊಂಡು ಬದುಕುವ ನಾಗ್ಯಾ ಹಾಗು ಖಂಡೋಬಾರ ಕಳ್ಳತನದ ವೃತ್ತಿಯನ್ನು ಕಾಣಬಹುದು. ನಾಗ್ಯಾನನ್ನು ಪೋಲಿಸರು ಗುಡಿಸಲಲ್ಲಿ ಅಡಗಿರಬಹುದೆಂದು ಪೊಲೀಸರು ಎಲ್ಲಾ ಗುಡಿಸಲುಗಳಿಗೆ ನುಗ್ಗಿ ಹೆಂಗಸರಿಗೆ ಹಿಂಸಿಸುತ್ತ ಲಾಠಿಯಿಂದ ಹೊಡೆಯುತ್ತಾ ಅಶ್ಲೀಲ ಪದಗಳಿಂದ ಬೈಯುತ್ತಾ ನಾಗ್ಯಾನ ಜೋಪಡಿಗೆ ಬಂದಾಗ ಅವನ ಹೆಂಡತಿ ಗುಜ್ಜವ್ವ ಆರೋಗ್ಯ ಸರಿ ಇಲ್ಲದೆ ಅಳುತ್ತ ಕುಳಿತ ಗಜ್ಜವ್ವನಿಗೆ ಪೋಲಿಸರು ಬೆನ್ನಿಗೆ ಬೂಟು ಕಾಲಿನಿಂದ ಒದ್ದು ಎಳೆದುಕೊಂಡು ಹೋಗುವಾಗ ಅಲ್ಲಿನ ಜನರು ಈ ಕೇರಿಯಲ್ಲಿರುವ ಗಂಡಸರನ್ನು ಎಳೆದುಕೊಂಡುಹೋಗಿ. ನಮಗೂ ನ್ಯಾಯಗೊತ್ತಿದೆ. ಕಳ್ಳತನ ಮಾಡಿದ ನಾಗ್ಯಾನ ಬಿಟ್ಟು ಅವನ ಹೆಂಡತಿಯನ್ನು ಎಳೆದು ಬಾ ಅಂಥ ಯಾವ ಕಾನೂನು ಹೇಳುತ್ತೆ ಅಂತ ಧೈರ್ಯದಿಂದ ಹೇಳಿದಾಗ ಪೋಲಿಸರು ಹೊರಟುಹೋಗುತ್ತಾರೆ. ಹೀಗೆ ದಲಿತರು ಹಸಿವು ಬಡತನದಿಂದ ಕಳ್ಳತನದ ಹಾದಿ ಹಿಡಿದಿರುವುದನ್ನು ಕಾಣಬಹುದು ಬದುಕಲು ಸರಿಯಾದ ಮಾರ್ಗ ಸಿಗದಿದ್ದರೆ ಕೆಳಗೇರಿಯ ಜನರು ಅಡ್ಡದಾರಿಯನ್ನು ಹಿಡಿದು ಜೀವನ ಸಾಗಿಸುವ ಅನಿವಾರ್ಯ ಸ್ಥಿತಿ ಉಂಟಾಗುತ್ತದೆ.

“ಕಥೆ ಆಗಾಗ ಕಲ್ಬುರ್ಗಿ ನಗರಕ್ಕೂ ಎಡತಾಕುವುದರಿಂದ ನಗರದ ದಲಿತ ಬದುಕಿನ ಚಿತ್ರಣವೂ ಸೇರಿಕೊಳ್ಳುತ್ತದೆ. ಮಲ್ಲಪ್ಪನ ಹಿರಿಯ ಮಗಳು ಶಾಣಮ್ಮ ಮತ್ತು ಹಾಲಪ್ಪ ಬದುಕುತ್ತಿದ್ದ ಮಾರುತಿ ಝೋಪಡ ಪಟ್ಟಿಯ ಇತಿ ವೃತ್ತವೂ ಇದರಲ್ಲಿ ಸೇರುತ್ತದೆ. ಈ ಝೋಪಡ ಪಟ್ಟಿ ಬೆಳೆದು ಬಂದ ಬಗೆ, ಇಲ್ಲಿನ ಜನರ ಬದುಕು, ನೀರಿಗಾಗಿ ಬಡಿದಾಟ, ಪರಸ್ಪರ ಒಗ್ಗಟ್ಟಿನಿಂದ ಬಾಳುವುದು, ಇದಕ್ಕೆ ಸಂಬಂಧಿಸಿದಂತೆ ಕಿಸೆಗಳ್ಳ ನಾಗ್ಯಾನನ್ನು

ಹುಡುಕುತ್ತ ನುಗ್ಗಿದ ಪೋಲಿಸರು ಎಬ್ಬಿಸುವ ದಾಂಧಲೆ, ಅವರ ಅತ್ಯಾಚಾರ, ದೌರ್ಜನ್ಯಗಳು ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ."[೭]

ಕಲ್ಯಾಣಿ ಮತ್ತು ಬೆಳ್ಳಿ ಮದುವೆಗೆ ಗುಲ್ಬರ್ಗಾದ ಸಂತೆಯಲ್ಲಿ ಕಲ್ಯಾಣಿಗೆ ಪ್ಯಾಂಟು, ಕೋಟು, ಕಮೀಜು ಬಿದರ ಕ್ವಾಟಿಲಿ ಕೆಂಪಂಚಿನ ಧೋತರ, ಕೇಸರಿ ಬಣ್ಣದ ಜರತಾರಿ, ಚೌಕಳಿಯ ರುಮಾಲು ಹಾಗು ಒಂದು ತೊಲೆ ಬಂಗಾರದ ಸುತ್ತುಂಗರವನ್ನು ತೆಗೆದುಕೊಂಡರೆ ಬೆಳ್ಳಿಗೆ ಐದು ತೊಲಿ ಗಟ್ಟಿ ಬಂಗಾರದಿಂದ ಚಂದ್ರಹಾರವನ್ನು ಮಾಡಿಸಿದರು ಮತ್ತು ರುಳಿ, ಕಡಗಾ, ಚೈನನ್ನು ಮಾಡಿಸಿದರು. ಜೊತೆಗೆ ಮದುಮಗಳಿಗೆ ಎಣ್ಣೆ ಹಚ್ಚೊ ಸೀರಿ, ಉಡಿತುಂಬೋಸೀರಿ, ಸ್ಯಾಸಿಸೀರಿ, ಮೆರವಣಿಗೆ ಸೀರಿ ಅಂತ ಒಂಭತ್ತು ಸೀರೆಗಳನ್ನು ಖರೀದಿಸಿದರು. ಹೀಗೆ ಕಲ್ಯಾಣಿಯ ಮದುವೆಗೆ ಸಿದ್ಧತೆಗಳು ಭರದಿಂದ ಸಾಗುತ್ತವೆ.

ಜಮಾದಾರ ಮಲ್ಲಪ್ಪ ಮಗನ ಮದುವೆಗೆ ಸುತ್ತಮುತ್ತಲಿನ ಹಳ್ಳಿಯ ನೆಂಟರು ಬೀಗರು ಹಾಗು ಶಿವಳ್ಳಿಯ ಊರಿನ ಎಲ್ಲಾ ಜನರಿಗೂ ಊಟವನ್ನು ಹಾಕಿಸಿದರು. ಮದುವೆಗೆ ಬಂದ ಬಂಧು–ಮಿತ್ರರು ಊಟವನ್ನು ಮಾಡಿ ಮದುಮಕ್ಕಳಿಗೆ ಊಡುಗೊರೆಯನ್ನು ಕೊಟ್ಟು ಹೋದರು.

ಜಮಾದಾರ ಮಲ್ಲಪ್ಪನ ಮಗ ಕಲ್ಯಾಣಿ ಮತ್ತು ಹಾಲಪ್ಪನ ಮಗಳು ಬೆಳ್ಳಿಯ ಮದುವೆಯ ಸಂದರ್ಭದಲ್ಲಿ ಶಿವಳ್ಳಿಯ ಜನರು ಮಲ್ಲಪ್ಪನ ಮನೆಯಲ್ಲಿ ಸೇರಿ ಹಪ್ಪಳ, ಶಾವಿಗೆ ಕುರುಡಿಗೆ ಮಾಡಲು ಕೆಲಸದವರಾದ ಹೊಲೇರ ಕಾಳಿ, ದುರ್ಗಿ ಬ್ಯಾಡರ ಸಾಬವ್ವ, ಕುರುಬರ ನಿಂಗವ್ವ, ಬಡಿಗೇರ ನೀತವ್ವ, ನಾಗವ್ವಾಯಿ, ಗುರುಪ್ಪನ ಹೆಂಡತಿ ಕಳಸವ್ವ ಇವರೆಲ್ಲರೂ ಮನೆಯ ಹೊರಗೆ ಒಳಗೆ ಕೆಲಸವನ್ನು ಮಾಡಿದರು. ಮದುವೆ ದಿನದಲ್ಲಿ ಮಲ್ಲಪ್ಪ ಊರಿಗೆ ಊಟ ಹಾಕಿಸಿ ಸುತ್ತಮುತ್ತಲ ಹಳ್ಳಿಯ ಬೀಗರು ನೆಂಟರೆಲ್ಲರನ್ನು ಆಹ್ವಾನಿಸಿ ಮೇಲ್ವರ್ಗದವರಿಗೆ ಬೇರೆ ಅಡಿಗೆ, ಕೇಳವರ್ಗದವರಿಗೆ ಬೇರೆ ಅಡಿಗೆ ಮಾಡಿಸಿ ಕಲ್ಯಾಣಿ ಬೆಳ್ಳಿಯರ ಮದುವೆ ಐದು ದಿನಗಳವರೆಗೆ ಸಂಪ್ರದಾಯದಂತೆ ನೆರವೇರಿಸಿದರು. ಬದುಕು ಕಾದಂಬರಿಯಲ್ಲಿ ಮದುವೆ, ಹಬ್ಬ ಹರಿದಿನಗಳು ಎಂದರೆ ಅಲ್ಲಿಯ ಜನಾಂಗದ ನೀತಿ ನಿಯಮದ ಅನುಸಾರವಾಗಿ ನಡೆಯುತ್ತದೆ.

ಬದುಕಿನಲ್ಲಿ ಕಷ್ಟ ಸುಖಗಳ ನಡುವೆ ಮನಸ್ಸಿನಲ್ಲಿ ಆಂತರಿಕ ನೋವುಗಳನ್ನು ಅನುಭವಿಸು ಕೆಳಗೇರಿಯ ದಲಿತ ಜನರು ಸಾಮಾಜಿಕ ಬದುಕಿನಲ್ಲಿ ನಿತ್ಯ ಹೋರಾಟದ ಜೀವನವೆ ಆಗಿರುತಿತ್ತು. ಕಾದಂಬರಿಯಲ್ಲಿ ದಲಿತ ಸ್ತ್ರೀ ಕಲ್ಲವ್ವನ ಪ್ರಸಂಗವನ್ನು ನೋಡಿದಾಗ ಅವನ ಗಂಡ ಮುಕ್ಯಾನ ಅತಿಕಾಮುಕತನಕ್ಕೆ ಬಲಿಯಾಗುವ ಕಲ್ಲವ್ವನ ಬದುಕು ರಕ್ತದ ಮಡುವಿನಲ್ಲಿ

ಅಂತ್ಯಗೊಳ್ಳುವುದನ್ನು ಕಾಣಬಹುದು. ದಲಿತ ಜನರಲ್ಲಿ ಹೆಚ್ಚಾಗಿ ಕುಡಿತ, ಹಾದರ, ಮೋಸ, ಕಳ್ಳತನ ಇವುಗಳಿಂದ ಸಾಮಾಜಿಕ ಜೀವನದ ಮೇಲೆ ಕೆಟ್ಟ ಪರಿಣಾಮ ಬೀರುವುದನ್ನು ತಿಳಿಯಬಹುದು.

ಕಾದಂಬರಿಯಲ್ಲಿ ಜಾನಪದ ನಂಬಿಕೆಗಳನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ ಪ್ರತಿಯೊಂದು ಜಾತಿಯಲ್ಲಿ ತಮ್ಮದೇ ಆದ ಸಂಸ್ಕಾರದ ವಿಧಾನಗಳನ್ನು ಕಾಣಬಹುದು ಸತ್ತ ಹೆಣಕ್ಕೆ ಹೊಟ್ಟೆಯ ಮೇಲೆ ಕಡುಗೋಲು ಇಡದಿದ್ದರೆ ಮಧ್ಯ ರಾತ್ರಿ ದೆವ್ವಗಳು ಬಂದು ಹೆಣವನ್ನು ಎಬ್ಬಿಸಿಕೊಂಡು ಹೋಗುವ, ಪ್ರಾದೇಶಿಕ ಸಂಪ್ರದಾಯವನ್ನು ಕಾಣಬಹುದು. ಹೆಣ್ಣು ಸತ್ತರೆ ತವರು ಮನೆಯಿಂದ ಸೀರೆ ಅರಿಸಿನ ಕುಂಕುಮ ಬಳೆ ಹೂವು ತಂದು ಸಿಂಗರಿಸಿ ಶವಸಂಸ್ಕಾರ ಮಾಡುತ್ತಾರೆ. ಜಾತಿಯ ವಿಧಿವಿಧಾನಗಳ ಮೂಲಕ ಸಂಸ್ಕಾರ ಮಾಡುತ್ತಾರೆ ಹಾಗೂ ಸತ್ತವರಿಗೆ ಮುಕ್ತಿ ಸಿಗಲು ಕೂಳನ್ನು ಬೇಯಿಸಿ ಎಡೆಹಾಕಿ ಭಕ್ತಿಯಿಂದ ಪೂಜೆಯನ್ನು ಮಾಡುತ್ತಿದ್ದರು.

ಕಲ್ಯಾಣಿಯು ಹದಿನಾಲ್ಕು ವರ್ಷ ಸಜೆ ಅನುಭವಿಸಿ ಬಂದವನಿಗೆ ಅವನ ಕುಲದವರು ಅವನಿಗೆ ಶುದ್ಧ ಮಾಡಿಸಿ (ವಾಮಚಾರ) ಕುಲಬಾಂಧವರಿಗೆ ಊಟ ಹಾಕಿಸಿ ಮತ್ತೆ ಕುಲಕ್ಕೆ ಸೇರಿಸುವ ಪದ್ಧತಿ ಅವರ ಮೂಢನಂಬಿಕೆಯನ್ನ ಎತ್ತಿ ತೋರಿಸುತ್ತದೆ. ದಲಿತರು ಹುಟ್ಟಿನಿಂದಲೂ ಮೂಢನಂಬಿಕೆಯಲ್ಲಿ ಜೀವನವನ್ನು ಸಾಗಿಸುವುದನ್ನು ಕಾಣಬಹುದು. ದಲಿತರಲ್ಲಿ ಹಸಿವು ಬಡತನ ಶೋಷಣೆ ಹೆಚ್ಚಾದರೂ ಅವರು ಸಾಂಸ್ಕೃತಿಕ ಆಚರಣೆಗಳಿಗೆ ಹೆಚ್ಚು ಮಹತ್ವವನ್ನು ಕೊಡುತ್ತಿದ್ದರು ಎಂಬುದನ್ನು ಕಾದಂಬರಿಯ ಅಧ್ಯಯನದಿಂದ ತಿಳಿಯಬಹುದು.

ಬದುಕು ಕಾದಂಬರಿಯಲ್ಲಿ ಬೆಳ್ಳಿಯು ಸಮಾಜದಲ್ಲಿ ಮಾದರಿಯ ಹೆಣ್ಣಾಗಿ ನಿಲ್ಲುತ್ತಾಳೆ. ಅವಳು ಬದುಕಿನಲ್ಲಿ ಅನುಭವಿಸುವ ಕಷ್ಟಗಳು ಭಯಂಕರವಾಗಿವೆ. ತೋಟದಲ್ಲಿ ಕೆಲಸ ಮಾಡುವುದು, ಕೊರವರ ಈರವ್ವನ ಜೊತೆ ಕಾಡಿಗೆ ಹೋಗಿ ಸೇಂದಿ ಪೊರಕೆ ತಂದು ಬುಟ್ಟಿ ಚಾಪೆಯನ್ನು ಹೆಣೆದು ಜೀವನವನ್ನು ಸಾಗಿಸುವಾಗ ಅವರ ಕುಲದವರು ಕೊರವರ ಕೆಲಸವನ್ನು ಮಾಡಬಾರದು ಅದು ನಮ್ಮ ಜಾತಿಯ ಕಸುಬಲ್ಲ ಎಂದು ಹೇಳಿದರು. ಅದನ್ನು ಲೆಕ್ಕಿಸದೆ ಹಗಲು-ರಾತ್ರಿ ದುಡಿಯುತ್ತಾಳೆ. ಪಟ್ಟಣದಲ್ಲಿ ಓದಿ ವಿದ್ಯಾವಂತಳಾದ ಬೆಳ್ಳಿ ಹಾಲಪ್ಪನ ಮನೆಯಲ್ಲಿ ಸುಖದಿಂದ ಬೆಳೆದ ಬೆಳ್ಳಿ, ಜಮಾದಾರ ಮಲ್ಲಪ್ಪನ ಕುಟುಂಬದಲ್ಲಿ ಆರಂಭದಲ್ಲಿ ಸುಖ ಕಂಡು ಕಾಶಿಯ ದುರ್ನಡತೆಯಿಂದ ಇಡೀ ಸಂಸಾರವೇ ಕಷ್ಟದ ಸುಳಿಯಲ್ಲಿ ಸಿಲುಕಿರುವುದನ್ನು ಕಾಣಬಹುದು.

ಕಾದಂಬರಿಯಲ್ಲಿ ಹೆಂಗಸರು ಬೆಳಗಿನ ಜಾವ ಬೇಗ ಎದ್ದು ಜೋಳವನ್ನು ಕಲ್ಲಿನಿಂದ ಬೀಸುವುದು. ಬೀಸುವಾಗ ಜಾನಪದ ಹಾಡನ್ನು ಆಡುವುದು ಮತ್ತು ಇತರ ಮನೆ ಕಲೆಸವನ್ನು ಮುಗಿಸಿ ಕೂಲಿಗೆ ಹೋಗುವುದು ಅವರ ವಾಡಿಕೆ.

ಊರಿನ ಗೌಡ, ಸಾವುಕಾರ, ಕುಕ್ಕಣಿ ಅಂತಹ ಮೇಲ್ವರ್ಗದವರ ಆಳು ಮಕ್ಕಳಾಗಿ ಅವರ ಮನೆಯಲ್ಲಿ ಜೀತವನ್ನು ಮಾಡುತ್ತಿದ್ದರು. ಈ ಪದ್ಧತಿ ಅವರ ಪೂರ್ವಿಕರ ಕಾಲದಿಂದ ನಡೆದು ಬಂದಂತಹದು. ಫತರೂನು ಜಮಾದಾರ ಮಲ್ಲಪ್ಪನ ಆಳುಮಗನಾಗಿ ಕೆಲಸ ಮಾಡಿದರೂ ಅವನು ತನ್ನ ಸ್ವಂತ ಮಗನಾಗಿ ನೋಡಿಕೊಳ್ಳುತ್ತಿದ್ದನು, ಆಳುಗಳು ಕುರಿ, ದನ, ಸಾಕುವುದು, ಹಾಲು ಕರೆಯುವುದು ಕೃಷಿಯಲ್ಲಿ ಬೆಂಡೆ, ಜೋಳ, ಬದನೆ ಇವುಗಳನ್ನು ಬೆಳೆಯುವುದು ಅವರ ಕಸುಬಾಗಿತ್ತು. ಆದರೆ ಮೇಲ್ವರ್ಗದ ಹೆಣ್ಣು ಮಕ್ಕಳು ಹಾಗು ಗಂಡಸರು ಹೆಚ್ಚಾಗಿ ಕೃಷಿಯಲ್ಲಿ ತೊಡಗಿಸಿಕೊಳ್ಳುತ್ತಿರಲಿಲ್ಲ. ಅವರು ದಲಿತರಿಂದ ದುಡಿಸಿಕೊಳ್ಳುತ್ತಿದ್ದರು. ಕೆಳಗೇರಿಯ ದಲಿತ ಜನಾಂಗದವರು ಮೇಲ್ವರ್ಗದವರ ಹೊಲಗಳನ್ನು ಪಾಲಿಗೆ ಮಾಡಿ ಬಂದಂತಹ ಬೆಳೆಯಲ್ಲಿ ಸರಿಸಮಾನವಾಗಿ ಹಂಚಿಕೊಳ್ಳುತ್ತಿದ್ದನ್ನು ಕಾಣಬಹುದು. ದಲಿತರನ್ನು ಮೇಲ್ವರ್ಗದ ಜನರು ಜೀತದ ಆಳಾಗಿ ಅವರ ಮನೆಯ ಕೆಲಸ ಹಾಗು ಕೃಷಿ ಕೆಲಸಗಳನ್ನು ಮಾಡಿಸಿಕೊಳ್ಳುವುದರ ಜೊತೆಗೆ ದಲಿತ ಹೆಣ್ಣಿನ ಮೇಲೆ ದೇಹ ಸಂಪರ್ಕವನ್ನು ಇಟ್ಟುಕೊಳ್ಳುತ್ತಿದ್ದರು. ದಲಿತ ಹೆಣ್ಣುಗಳು ಸಮಾಜದಲ್ಲಿ ಮೇಲ್ವರ್ಗದವರ ಎದುರು ಪ್ರತಿಭಟಿಸಿ ನಿಲ್ಲದೆ ಅವರಲ್ಲಿರುವ ಬಡತನ ಹಸಿವು ತಾಳ್ಮೆಯಿಂದ ಇರುವಂತೆ ಮಾಡಿಸುತ್ತಿತ್ತು.

ಕಾದಂಬರಿಯಲ್ಲಿ ಸಾಂಸ್ಕೃತಿಕ ಆಚರಣೆಗಳ ಜೊತೆಯಲ್ಲಿ ಮೂಢನಂಬಿಕೆಗಳು ಹೆಚ್ಚಾಗಿ ಕಂಡುಬರುತ್ತದೆ ಮಲ್ಲವ್ವನಿಗೆ ಮಾದಗ ಕಳಸ ಹಾಗು ಮುಕಡಪ್ಪ ದೆವ್ವವಾಗಿ ಕಾಡಿದಾಗ ಜಿವಣಗಿ ಅಂಬಾಭವಾನಿ ದೇವರಿಗೆ ಕರೆದುಕೊಂಡು ಹೋಗಿ ಪೂಜೆಯನ್ನು ಮಾಡಿಸಿ ಅಲ್ಲಿ ಮನುಷ್ಯನ ಮೇಲೆ ದೇವತೆ ಮೈದುಂಬಿ ಬಂದು ಭಕ್ತರು ಕೇಳುವ ಪ್ರಶ್ನೆಗಳಿಗೆ. ದೇವರು ಉತ್ತರವನ್ನು ಕೊಟ್ಟು ಅವರ ಕಷ್ಟಗಳನ್ನು ಬಗೆಹರಿಸುವುದು ಆ ಜನಾಂಗದ ನಂಬಿಕೆಯಾಗಿತ್ತು, ಮಲ್ಲವ್ವನಿಗೂ ದೇವಿ ಹೇಳಿಕೆಗಳನ್ನು ಕೊಟ್ಟು ನಿಂಬೆಹಣ್ಣನ್ನೂ ಹಾಸಿಗೆ ತಳಭಾಗದಲ್ಲಿ ಇಡುವ ಪದ್ಧತಿ ಇತ್ತು. ಆ ಜನಾಂಗದಲ್ಲಿ ಮೂಢನಂಬಿಕೆಯ ಆಚರಣೆಗಳು ಕೆಳಗೇರಿಯ ದಲಿತ ಜನಾಂಗದಲ್ಲಿ ಹೆಚ್ಚಾಗಿ ಕಂಡು ಬರುವುದನ್ನು ಕಾಣಬಹುದು.

ದಲಿತರು ಸಾಮಾಜಿಕ ಜೀವನದಲ್ಲಿ ಕಷ್ಟಗಳಿಗೆ ಗುರಿಯಾದಾಗ ಅವರು ದೇವಸ್ಥಾನಕ್ಕೆ ಹೋಗಿ ಭಕ್ತಿಯಿಂದ ಪೂಜೆ ಪುರಸ್ಕಾರ ಮಾಡಿಸಿ, ಮನಸ್ಸಿನಲ್ಲಿರುವ ಆತಂಕವನ್ನು ದೇವರ

ಮುಂದೆ ನಿಂತು ಹೇಳಿ ಬಗೆ ಹರಿಸಿಕೊಂಡು ದೇವಿಗೆ ಹರಕೆಯನ್ನು ಕೊಡುವುದು ಸಂಪ್ರದಾಯವಾಗಿತ್ತು. ಮೂಢನಂಬಿಕೆಗೆ ಕೆಲವು ಪ್ರಸಂಗಗಳನ್ನ ಗಮನಿಸಬಹುದು.

ಮಲ್ಲವ್ವನಿಗೆ ದೆವ್ವ ಹಿಡಿದಾಗ ಘತರೂ ಒಂದು ಬಿದುರು ಬುಟ್ಟಿಯಲ್ಲಿ ಕುಂಬಳ ಎಲೆ ಹಾಸಿ ಅದರ ಮೇಲೆ ಕೋಳಿ ಪಲ್ಯ, ಬಾಡು ಅರಿಶಿನ ಕಲಸಿದ ಬಾನ, ಐದು ಚಪಾತಿ, ಐದು ಎಣ್ಣೆ ಹೋಳಿಗೆ ಲಿಂಬಿ ಹಣ್ಣು, ಕರಿಯೆಳ್ಳು, ಕರಿಮಸಿ ಇಟ್ಟು ಅರಿಸಿನ ಕುಂಕುಮ ಚೆಲ್ಲಿ ಮಲ್ಲವ್ವನಿಗೆ ಮುಖದಿಂದ ಇಳಿ ತೆಗೆದು ಮೂರು ದಾರಿ ಕೊಡುವ ಭಾಗದಲ್ಲಿ ಇಟ್ಟು ಕಾಲಿನಲ್ಲಿ ಒದ್ದು ಥೂ ಎಂದು ತಿರುಗಿ ನೋಡದೆ ಬಂದು ಕೈಕಾಲು ತೊಳೆದು ಕೊಳ್ಳುವುದು ಅವರ ಸಂಪ್ರದಾಯದ ಆಚರಣೆಯಾಗಿತ್ತು.

ನಾಗರ ಪಂಚಮಿಯಂದು ಮ್ಯಾಗೇರಿಯ ಶಾಣಪ್ಪ ಮತ್ತು ಸುಗಲವ್ವರ ಮನೆಯ ಮಧ್ಯದಲ್ಲಿ ಹುತ್ತ ಬೆಳೆದು ನಿಂತಿದ್ದು ಅಲ್ಲಿ ಜನರಿಗೆ ಅಚ್ಚರಿ ಮೂಡಿಸುತ್ತಿತ್ತು. ಶಾಣಪ್ಪ ಸುಗಲವ್ವರಿಗೆ ನೀವಿಬ್ಬರು ಗಾಭರಿ ಆಗಬೇಡಿ ನಾನು ಶಿವನ ಕೊರಳಿನ ನಾಗಪ್ಪ ಇದ್ದೀನಿ. ಈ ಹುತ್ತವನ್ನು ಕೀಳಬೇಡಿ ನಿಮಗೆ ಒಳ್ಳೆದನ್ನು ಮಾಡುತ್ತೇನೆ ಎಂದು ಹೇಳಿದಾಗ ಅದೇ ಪ್ರಕಾರ ಸುಗಲವ್ವ ಭಯ ಭಕ್ತಿಯಿಂದ ಮೀಸಲು ನೀರು ತಂದು ಹೊರಣ ಗಡುಬು ನವಣಕ್ಕಿಬಾನ ಮಾಡಿ ಹುವ್ವ ಹಾಕಿ ಪೂಜೆ ಮಾಡಿ ಕೈಮುಗಿದು ನಮ್ಮನ್ನು ಕಾಪಾಡು ನಾಗರಾಜ ಎಂದಾಗ ಅದು ಹೆಡೆ ಎತ್ತಿಕೊಂಡು ನಿಂತು ನೋಡುತ್ತಾ ಹೋಗುವುದನ್ನು ನೋಡಿದ ಸಗಲ್ಲನ್ನು ಶಾಣಪ್ಪ ಭಯ ಭೀತರಾಗುವುದನ್ನು ಕಾಣಬಹುದು. ಹೀಗೆ ಅಲ್ಲಿನ ಜನರೆಲ್ಲ ಬಂದು ಹುತ್ತಕ್ಕೆ ಭಯ ಭಕ್ತಿ ನಂಬಿಕೆಯಿಂದ ಪೂಜಿಸುತ್ತಿದ್ದರು.

ಡಾ. ಗೀತಾನಾಗಭೂಷಣ ಅವರ ಕಾದಂಬರಿಗಳಲ್ಲಿ ಗ್ರಾಮೀಣ ಪ್ರದೇಶದ ಆಚರಣೆಯ ರೀತಿ ನೀತಿಗಳನ್ನು ಜಮಾದಾರ ಮಲ್ಲಪ್ಪನ ಬದುಕಿನ ಸುತ್ತ ಹೆಣೆದಿರುವ ಕಥೆ ಮತ್ತು ಸ್ತ್ರೀಶೋಷಣೆಯ ವಿರುದ್ಧ ದನಿ ಎತ್ತಿ ಬರೆದಿರುವ ಹಾಗೂ ಗ್ರಾಮೀಣ ಕುಟುಂಬಗಳ ಜೀವನದ ಸಾಕ್ಷ್ಯ ಚಿತ್ರವನ್ನು 'ಬದುಕು' ಕಾದಂಬರಿಯಲ್ಲಿ ದಾಖಲಿಸಿದ್ದಾರೆ.

ಕಾದಂಬರಿಯಲ್ಲಿ ಗುಲ್ಬರ್ಗಾದ ಗ್ರಾಮೀಣ ಭಾಷೆಯ ಸೊಗಡು ಹಾಗು ದಲಿತರ ದುರಂತ ಬದುಕಿನ ಚಿತ್ರಣವನ್ನು, ಪ್ರಾದೇಶಿಕ ಭಾಷೆಯಲ್ಲಿ ಅದ್ಭುತವಾದ ರೀತಿಯಲ್ಲಿ ವ್ಯಾಖ್ಯಾನಗಳನ್ನು ನೀಡಿದ್ದಾರೆ.

ಬದುಕು ಕಾದಂಬರಿಯಲ್ಲಿ ಮಲ್ಲಪ್ಪನ ಮಗಳು ಕಾಶಮ್ಮನು. ಗಂಡನನ್ನು ಬಿಟ್ಟು ಲಿಂಗರಾಜನ ಜೊತೆ ಪ್ರೀತಿಮಾಡಿ ರಂಡೆಯಾಗಿ ಬದುಕಿದರೆ. ಕಲ್ಯಾಣಿಯು ಜೈಲಿಗೆ ಹೋದ

ಮೇಲೆ ಬೆಳ್ಳಿಯ ಹೋರಾಟದ ಬದುಕಿನಲ್ಲಿ ದಿಟ್ಟತನದಿಂದ ಜೀವನವನ್ನು ಸಾಗಿಸುವುದು ಒಂದಾದರೆ, ಕಾಶಮ್ಮನು ಲಿಂಗರಾಜನನ್ನ ಸೇರಿದ ಮೇಲೆ ಜಮಾದಾರ ಮಲ್ಲಪ್ಪನ ಕುಟುಂಬ ದುಃಖದಲ್ಲಿ ಮುಳುಗುವುದನ್ನು ಕಂಡು ಮನಸ್ಸಿನಲ್ಲಿ ದುಃಖಿಸುತ್ತ. ಮಲ್ಲಪ್ಪನ ಕುಟುಂಬಕ್ಕೆ ಸಹಕಾರಿಯಾಗುತ್ತಾಳೆ. ಬೆಳ್ಳಿಯ ಹರೆಯ ಬದುಕಿನಲ್ಲಿ ಕಳೆದುಹೋದರೂ ಕಲ್ಯಾಣಿಯು ಬರುವವರೆಗೂ ಗರತಿಯಾಗಿ ಬದುಕುತ್ತಾಳೆ. ಹಾಗೆಯೇ ಆದರೆ ಕಾಶಮ್ಮ ಮಾರ್ತಾಂಡನನ್ನು ಮದುವೆ ಆಗಿದ್ದರೂ, ಅವನನ್ನು ಬಿಟ್ಟು ಲಿಂಗರಾಜನ ಜೊತೆ ಪ್ರಣಯದಲ್ಲಿ ತೊಡಗಿಕೊಳ್ಳುತ್ತಾಳೆ.

ಬದುಕು ಕಾದಂಬರಿ ದಲಿತ ಜನಾಂಗದ ಶ್ರದ್ಧೆ, ನಂಬಿಕೆ, ಹಾದರ, ಕುಡಿತ, ಕಳ್ಳತನ, ಹಸಿವು, ವ್ಯಯಕ್ತಿಕ ಸಂಘರ್ಷ, ಜಾತಿ ತಾರತಮ್ಯ, ಹಾಗು ದಲಿತ ಸ್ತ್ರೀಯರ ಬದುಕಿನ ಕಥೆಯನ್ನು ಮತ್ತು ದಲಿತ ಕೇರಿಯ ಸಾಂಸ್ಕೃತಿಕ ಆಚರಣಾ ಪದ್ಧತಿಗಳನ್ನು ಹಾಗು ಅನಕ್ಷರಸ್ಥ ಮುಗ್ಧ ಅಮಾಯಕ ದಲಿತ ಹೆಣ್ಣುಗಳ ಮೇಲೆ ನಡೆಯುವ ಕ್ರೌರ್ಯ, ಬೆತ್ತಲೆ ಮೆರವಣಿಗೆ, ಶೋಷಿತರ ಬದುಕಿನ ನೋವಿನ ಚಿತ್ರಣವನ್ನು ಮೇಲ್ವರ್ಗದವರ ದೌರ್ಜನ್ಯವನ್ನು ಹಾಗು ದಲಿತರಿಂದಲೇ ದಲಿತ ಸ್ತ್ರೀಯರು ತುಳಿತಕ್ಕೆ ಒಳಗಾಗುವ ಸಂದರ್ಭವನ್ನು ಹಾಗು ಜೋಗಿಣಿ ಪದ್ಧತಿಗೆ ಬಲಿಯಾದ ಹೆಣ್ಣುಗಳ ಜೀವನ ಚಿತ್ರಣವನ್ನು ಹಾಗೂ ದಲಿತರ ದುರಂತ ಬದುಕನ್ನು ಸಾಮಾಜಿಕ ಜೀವನದ ಮೇಲೆ ಪರಿಣಾಮ ಬೀರುವುದನ್ನು ಅಧ್ಯಯನದ ಮೂಲಕ ತಿಳಿಯಬಹುದಾಗಿದೆ.

❖ ❖ ❖

ಅಡಿ ಟಿಪ್ಪಣಿಗಳು

೧. ಪುಟ ೧೪ ' ಬದುಕು', ಲೇ: ಡಾ॥ ಗೀತಾ ನಾಗಭೂಷಣ

೨. ಪುಟ ೧೦೫ ' ಬದುಕು', ಲೇ: ಡಾ॥ ಗೀತಾ ನಾಗಭೂಷಣ

೩. ಪುಟ ೨೬೪ ' ಬದುಕು', ಲೇ: ಡಾ॥ ಗೀತಾ ನಾಗಭೂಷಣ

೪. ಪುಟ ೮೦ ' ಬದುಕು', ಲೇ: ಡಾ॥ ಗೀತಾ ನಾಗಭೂಷಣ

೫. ಪುಟ ೨೫೦-೨೫೧ ' ಬದುಕು', ಲೇ: ಡಾ॥ ಗೀತಾ ನಾಗಭೂಷಣ

೬. ಪುಟ ೨೦೩ ' ಬದುಕು', ಲೇ: ಡಾ॥ ಗೀತಾ ನಾಗಭೂಷಣ

೭. ಪುಟ ೬೭ ' ಕಲಬುರ್ಗಿಯ ಸ್ಪಂದನ', ಡಾ॥ ಸರಸ್ವತಿ ಚಿಮ್ಮಲಗಿ

❖ ❖ ❖

ಅಧ್ಯಾಯ-6

ವಸ್ತು ಮತ್ತು ಪಾತ್ರಗಳು

ಡಾ. ಗೀತಾನಾಗಭೂಷಣರವರ ಬದುಕು ಕಾದಂಬರಿಯು ಮಂದಗತಿಯಲ್ಲಿ ಸಾಗುತ್ತ ಮುಂದೆ ಬೃಹದಾಕರವಾಗಿ ಉಕ್ಕಿ ಹರಿಯುವ ಸಮುದ್ರದಂತೆ ಗೋಚರಿಸುತ್ತದೆ. ಈ ಕಾದಂಬರಿಯಲ್ಲಿ ಮುಖ್ಯಪಾತ್ರಗಳ ಜೊತೆ ಸಣ್ಣ ಸಣ್ಣ ಪಾತ್ರಗಳು ಪ್ರಕಾಶಮಾನವಾಗಿ ಹೊಳೆಯುತ್ತವೆ. ಪ್ರಧಾನ ಕುಟುಂಬದ ಜೊತೆ ಚಿಕ್ಕ ಚಿಕ್ಕ ಕುಟುಂಬಗಳ ವಿಶೇಷತೆಯನ್ನು ಕಾಣಬಹುದು.

ಕಾದಂಬರಿಯ ವಸ್ತು ಜಮಾದಾರ ಮಲ್ಲಪ್ಪನ ಕುಟುಂಬದ ಸುತ್ತ ಹೆಣೆದ ಕಥೆ. ಶಿವಳ್ಳಿ ಊರಿನ ಕೆಳಗೇರಿಯ ಕೇಳವರ್ಗದ ದಲಿತ ಜನಾಂಗದ ಆಚರಣೆಗಳು ಮೂಢನಂಬಿಕೆಗಳು, ರೀತಿ ನೀತಿಗಳು, ಕಳವು ಹಾದರ ಕಾಮ, ಸಾಂಸ್ಕೃತಿಕ ಸಾಮಾಜಿಕ ಚಿತ್ರಣಗಳನ್ನು ಕಾಣಬಹುದು.

ಹೈದ್ರಾಬಾದ್ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ 'ಶಿವಳ್ಳಿ' ಎಂಬ ಗ್ರಾಮದ ಪರಿಸರ ಚಿತ್ರಣವನ್ನು ಸೂರ್ಯೋದಯದ ವರ್ಣನೆಯನ್ನು ಮರಗಿಡಗಳು ಹಕ್ಕಿ ಪಕ್ಷಿಗಳು, ಸೇಂದಿ ಬನಗಳು, ಊರಿನ ಮುಂದೆ ಹರಿಯುವ ನದಿ, ಗುಡ್ಡಕ್ಕೆ ಅಂಟಿಕೊಂಡ ಗುಡಿಸಲುಗಳು ಮತ್ತು ಮನೆಗಳ ಚಿತ್ರಣವನ್ನು ನಿರೂಪಿಸಿದ್ದಾರೆ.

'ಬದುಕು' ಕಾದಂಬರಿಯಲ್ಲಿ ಕಲ್ಬುರ್ಗಿ ಜಿಲ್ಲೆಯ ಗ್ರಾಮೀಣ ಜನರ ಬದುಕಿನ ವಾಸ್ತವಿಕ ಚಿತ್ರಣವನ್ನು ಮತ್ತು ಕೆಳಗೇರಿಯ ದಲಿತ ಜನಾಂಗದ ಇತರ ಆಯಾಮಗಳನ್ನು ಡಾ. ಗೀತಾರವರು ಅನಾವರಣಗೊಳಿಸಿದ್ದಾರೆ.

ಜಮಾದಾರ ಮಲ್ಲಪ್ಪ 'ಬದುಕು' ಕಾದಂಬರಿಯ ಪ್ರಧಾನ ಪಾತ್ರವಾಗಿದೆ ಹಾಗೂ ಅವನ ಕುಟುಂಬದಲ್ಲಿನ ಸಂಕಟ ನೋವು, ನಲಿವುಗಳನ್ನು ಮತ್ತು ಇತರ ಅನಕ್ಷರಸ್ಥ ಮುಗ್ಧ ಜೀವಿಗಳ ಬದುಕಿನ ಹೋರಾಟಗಳನ್ನು ಹಾಗು ಆರ್ಥಿಕ ಸಾಮಾಜಿಕ ಜೀವನವನ್ನು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

'ಬದುಕು' ಜಮಾದಾರ ಮಲ್ಲಪ್ಪನ ಜೀವನದಲ್ಲಿ ಅನೇಕ ತಿರುವುಗಳಲ್ಲಿ ಕಾಣಿಸುತ್ತದೆ. ಜಮಾದಾರ ಮಲ್ಲಪ್ಪ ಗುಲ್ಬರ್ಗಾ ಜಿಲ್ಲೆಯ ಶಿವಳ್ಳಿ ಎಂಬ ಗ್ರಾಮದಲ್ಲಿ ಜಮಾದಾರಿ ಎಂಬ

ಸರಕಾರಿ ಕೆಲಸ ಮಾಡುತ್ತಾ ಊರಿನಲ್ಲಿ ಗೌರವವುಳ್ಳ ವ್ಯಕ್ತಿ ಆಗಿದ್ದ. ಅವನು ಸಾವಳಗಿಯ ಬಸಣ್ಣನ ಮಗಳಾದ ಮಲ್ಲಮ್ಮನನ್ನು ಮದುವೆ ಆಗಿ ಅವನ ಎರಡು ಹೆಣ್ಣು ಮತ್ತು ಒಂದು ಗಂಡು ಮಕ್ಕಳನ್ನು ಮಲ್ಲಪ್ಪನ ದೊಡ್ಡಮಗಳಾದ ಶಾಣಮ್ಮನನ್ನು ತನ್ನ ಸೋದರಳಿಯ ಹಾಲಪ್ಪನಿಗೆ ಕೊಟ್ಟು ಮದುವೆ ಮಾಡಿದ್ದನು. ಎರಡನೆ ಮಗಳಾದ ಕಾಶಮ್ಮನ ನಡತೆಯಿಂದ ಜಮಾದಾರ ಮಲ್ಲಪ್ಪನ ಸಂಸಾರಕ್ಕೆ ಬರಸಿಡಿಲಿನಂತ ಕಷ್ಟಗಳು ಎದುರಾದರೂ ಅವುಗಳನ್ನು ಧೈರ್ಯದಿಂದ ಎದುರಿಸಿ ಮಲ್ಲಪ್ಪ ಪಾರಾದರೂ ಮುಂದೆ ಅವನ ಬದುಕಿನ ಕೊನೆಯ ಕ್ಷಣದಲ್ಲಿ ಅವನ ಕುಟುಂಬವೇ ವಿನಾಶದ ಹಾದಿಯನ್ನು ಹಿಡಿಯುತ್ತದೆ.

ಜಮಾದಾರನ ವಂಶಕ್ಕೆ ಒಂದೇ ಗಂಡುಮಗುವಾಗಲಿ ಎಂದು ಭಿಕ್ಷೆಬೇಡಲು ಬಂದ ಮಟದಯ್ಯ ಶಾಪಕೊಟ್ಟಿರುವುದನ್ನು ಕಾಣಬಹುದು. ಜಮಾದಾರನ ವಂಶದ ಹೆಣ್ಣು ಮಗಳು ಮಟದಯ್ಯನಿಗೆ ಬಿಕ್ಷೆ ಹಾಕಿ ಅವನ ಪಾದಕ್ಕೆ ನಮಸ್ಕರಿಸುವಾಗ ಅವನು ಅವಳ ಮೈ ಕೈಯನ್ನು ಮುಟ್ಟಿ ಎಳೆದಾಡಿದಾಗ ಅದನ್ನು ಕಂಡ ಅವನ ತಂದೆ ಅವನಿಗೆ ಹೊಡೆದ ನಂತರ ಮಟದಯ್ಯ: ''"ಏ ಜಮಾದಾರಾ.... ನಿನ್ನ ಮಗಳು ನನ್ನ ಮಟಕ್ಕೆ ಸೇವಾಕ್ಕೆ ಬೇಕು ಕಳಿಸಿಕೊಡು. ನಿನಗೆ ಸಾವಿರುಸ ಕುಂತು ತಿಂದರನೂ ಸಂವಿಲಾರ್‍ದೊಟು ಸಂಪತ್ತು ಸಿಗತಾದ. ಆ ಶಿವನಿನ್ನ ಮನ್ಯಾಗ ಹಾಲುಕ್ಕಿ ಹಳ್ಳಾ ಹರಸ್ತಾನ... ನಿಂದೆಲ್ಲಾ ಛಲೊ ಆಗ್ತದ..."'' ಅಂತ ಹೇಳಿದಾಗ ಮಟದಯ್ಯನಿಗೆ ಕಾಲಿನಲ್ಲಿ ಒದ್ದಾಗ ಅವನು ನಿಮ್ಮ ವಂಶಕ್ಕೆ ಒಂದೇ ಗಂಡು ಮಗುವಾಗಲಿ ಎಂದು ಶಾಪವನ್ನು ಕೊಟ್ಟು ಹೋದನೆಂಬುದರ ಬಗ್ಗೆ ಮಲ್ಲವ್ವ ಮನನೊಂದು ಅಳುವುದನ್ನು ಹಾಗೂ ಜಮಾದಾರ ಮಲ್ಲಪ್ಪ ಈ ಶಾಪದಿಂದ ಮುಕ್ತನಾಗಲು ಸಾಧು ಸಂತರಿಗೆ, ಮುಲ್ಲಾ ಫಕೀರಗಳಿಗೆ, ಮುಗಳಕೋಡಯಲ್ಲಾ ಲಿಂಗರಾಜ ಹೊಸ ಗುಂಟಿ ಬೆಂಕಿ ಮುತ್ತ್ಯಾ, ಕಂವಟಗಿ ಮರಗಮ್ಯಾಯಿ, ಕಲುಬುರ್ಗಿ ಕಾಣಜಪೀರ, ಸಾವಳಗಿ ಶಿವಲಿಂಗೇ ಸೂರನ ಮಟದ ಸ್ವಾಮಿ, ಕಲಬುರ್ಗಿ ದೊಡ್ಡಪ್ಪ ಮುತ್ತ್ಯಾ, ಹೀಗೆ ದೇವರು ದಿಂಡರನ್ನು ಕೇಳಿದರೂ ಅವನ ವಂಶಕ್ಕೆ ಹೆಚ್ಚಿನ ಶಾಪ ವಿಮೋಚನೆಯಾಗದ್ದನ್ನು ಕಾಣಬಹುದು. ಹೀಗೆ ಆ ವಂಶದವರೂ ಪುರಾತನ ಕಾಲದಿಂದ ನಡೆದುಬಂದ ಶಾಸ್ತ್ರ ಸಂಪ್ರದಾಯವನ್ನು ನಂಬುವುದನ್ನು ತಿಳಿಯಬಹುದು.

ಜಮಾದಾರ ಮಲ್ಲಪ್ಪ ಶಿವಳ್ಳಿಯ ಕೆಳಗೇರಿ ಜನರಿಗೆ ತುಂಬಾ ಬೇಕಾದವನಾಗಿದ್ದವನು. ಮಲ್ಲಪ್ಪ ಜಮಾದಾರ ಊರಿನಲ್ಲಿರುವ ಎಲ್ಲಾ ಮಂದಿಗೆ ಬೇಕಾದವನಾಗಿದ್ದ. ಸಿರಿವಂತರು ಬಡವರು ಅನ್ನದೆ ಎಲ್ಲ ಜಾತಿಯವರಿಗೂ ಸಹಾಯವನ್ನು ಮಾಡುತ್ತಿದ್ದ. ಬರಗಾಲ ಹಾಗು ಸುಗ್ಗಿಯಲ್ಲಿ ಅಂಗಳದಲ್ಲಿದ್ದ ಹಗೆ ತಗಸಿ ಹೊಲೆ ಮಾದಿಗರೆನ್ನದೆ ಊರ ಬಡ ಮಂದಿಗೆಲ್ಲ ಜೋಳವನ್ನು ಹಂಚಿದ್ದ. ಊರಿನಲ್ಲಿ ಯಾರೇ ಸತ್ತರೂ ಮೊದಲು ಮಲ್ಲಪ್ಪ ಹಾಜರಾಗುತ್ತಿದ್ದ.

ಇವನ ವ್ಯಕ್ತಿತ್ವವನ್ನು ಕಂಡು ಕೆಳಗೇರಿ ಮಂದಿಯ ಜನ ಬಹಳ ಗೌರವ ಪ್ರೀತಿಯಿಂದ ಕಾಣುತ್ತಿದ್ದರು. ಅವನು ಬೇಸಾಯದಲ್ಲಿ ಹೆಚ್ಚು ಹೆಚ್ಚು ಬೆಳೆಗಳನ್ನು ಬೆಳೆಯುತ್ತಿದ್ದು ಬಡವರಿಗೆ ನಿರ್ಗತಿಕರಿಗೆ ದವಸ ಧಾನ್ಯಗಳನ್ನು ಸುಗ್ಗಿ ಸಂದರ್ಭದಲ್ಲಿ ಹಾಗೂ ಬರಗಾಲ ಬಂದಾಗ ಹಂಚುತ್ತಿದ್ದನು. 'ಬದುಕು' ಕಾದಂಬರಿಯಲ್ಲಿ ಜಮಾದಾರ ಮಲ್ಲಪ್ಪನಿಗೆ ಸರಿಸಾಟಿ ನಿಲ್ಲುವ ವ್ಯಕ್ತಿಗಳು ಯಾರೂ ಇರಲಿಲ್ಲ ಬೇಸಾಯ ಮಾಡುವುದರಲ್ಲಿ ಸಾಹುಕಾರ ಕುಕ್ಕಿಣಿರವರ ಸರಿ ಸಮಾನವಾಗಿ ನಿಲ್ಲ ಬಲ್ಲ ವ್ಯಕ್ತಿ ಆಗಿದ್ದನು. ಆದರೆ ಜಮಾದರ ಮಲ್ಲಪ್ಪನ ಬದುಕಿನಲ್ಲಿ ಅನೇಕ ಕ್ಲಿಷ್ಟಕರ ಪರಿಸ್ಥಿತಿ ಎದುರಾದರೂ ಅವುಗಳನ್ನು ಧೈರ್ಯದಿಂದ ಎದುರಿಸಿ ಬಾಳ್ವೆ ಮಾಡುತ್ತಿರುತ್ತಾನೆ. ತನ್ನ ಎರಡನೇ ಮಗಳಾದ ಕಾಶಮ್ಮನಿಂದ ಅವನ ಜೀವನದಲ್ಲಿ ಏರುಪೇರುಗಳು ಕಾಣುತ್ತವೆ. ಕಾಶಮ್ಮ ಸಾವುಕಾರನ ಮಗ ಲಿಂಗರಾಜನ ಪ್ರೀತಿಯ ಬಲೆಯಲ್ಲಿ ಸಿಲುಕಿರುವ ವಿಷಯ ಜಮಾದರ ಮಲ್ಲಪ್ಪನಿಗೆ ಬರಸಿಡಿಲು ಬಡಿದಂತಾಗುತ್ತದೆ. ಮೇಲ್ವರ್ಗ ಮತ್ತು ಕೆಳವರ್ಗಗಳ ಜಾತಿಯ ಸಾಮರಸ್ಯ ಉಂಟಾಗಿ, ಕಾಶಮ್ಮ ಮತ್ತು ಲಿಂಗರಾಜರ ಪ್ರೀತಿ ಜಾತಿಯ ಕಾರಣದಿಂದ ದೂರ ಸರಿಯುತ್ತದೆ.

ಜಮಾದಾರ ಮಲ್ಲಪ್ಪ ಕಾಶಮ್ಮನನ್ನು ಗುಲ್ಬರ್ಗಾದಲ್ಲಿರುವ ಶಾಣಮ್ಮನ ಮನೆಗೆ ಫತರೂನ ಸಹಾಯದಿಂದ ತಂದು ಬಿಡುತ್ತಾನೆ. ಹಾಲಪ್ಪ ಕಾಶಮ್ಮನಿಗೆ ಸೊಲ್ಲಾಪುರದ ಮಾರ್ತಾಂಡನಿಗೆ ಮದುವೆ ಮಾಡುತ್ತಾರೆ. ಶಿವಳ್ಳಿಯಲ್ಲಿ ಲಿಂಗರಾಜನಿಗೆ ನೀಲಮ್ಮನ ಜೊತೆ ಮದುವೆ ಮಾಡಿ ಕಾಶಮ್ಮ ಮತ್ತು ಲಿಂಗರಾಜುರನ್ನ ಬೇರೆ ಮಾಡಿದರೂ ಮುಂದೆ ಮನಸ್ಸುಗಳು ಒಂದಾಗಿ ಲಿಂಗರಾಜು ಸೊಲ್ಲಾಪುರಕ್ಕೆ ಹೋಗಿ ಕಾಶಮ್ಮನನ್ನು ಕರೆದುಕೊಂಡು ರಂಡೆಯಾಗಿ ತನ್ನ ತೋಟದ ಮನೆಯಲ್ಲಿ ಇಟ್ಟುಕೊಳ್ಳುತ್ತಾನೆ, ಹೀಗೆ ಬದುಕು ಕಾದಂಬರಿಯಲ್ಲಿ ಮೇಲ್ವರ್ಗದವರನ್ನು ಕೆಳವರ್ಗದವರು ಪ್ರತಿಭಟಿಸಲಾರದ ಪರಿಸ್ಥಿತಿ ಉಂಟಾಗುತ್ತದೆ. ಲಿಂಗರಾಜ ನೀಲವ್ವನನ್ನು ಮದುವೆ ಆಗಿ ಒಂದು ಗಂಡು ಮಗು ಇದ್ದರೂ ಇದನ್ನ ಪರಿಗಣಿಸದೆ ಕಾಶಮ್ಮನ ಜೊತೆ ಬದುಕುವುದು ಜಾತೀಯತೆ ಉಂಟಾದರು ಮಾನಸಿಕವಾಗಿ ನೋವು, ಸಂಕಟದ ಸುಳಿಯಲ್ಲಿ ಸಿಕ್ಕಿ ನರಳುವಂತಾಗುತ್ತದೆ.

ಕಾಶಮ್ಮ ತನ್ನ ಹರೆಯದ ದಿನಗಳಲ್ಲಿ ಅವಳು ಅಂದ ಚೆಂದದ ಕನಸುಗಳನ್ನು ಕಾಣುತ್ತ ತಾನು ಮದುವೆ ಆಗುವ ಗಂಡ ಪಟ್ಟಣದವನಾಗಿರಬೇಕು ಎಂದು ದಿನನಿತ್ಯ ಅವಳು ಬಣ್ಣ ಬಣ್ಣದ ಕನಸಿನಲ್ಲಿ ರಾತ್ರಿ ಮಲಗುವಾಗ ಚಲುವನೊಬ್ಬ, ಕನಸಿನಲ್ಲಿ ಬಂದು ರಮಿಸಿ ಹೋಗುವುದನ್ನು ತಿಳಿಯಬಹುದು. ಹಾಗೆ ಕಾಶಮ್ಮ ಜಗನ್ಮೋಹಿನಿ ಸಿನಿಮಾ ನೋಡಿದ ನೆನಪನ್ನು ಮಾಡಿಕೊಳ್ಳುತ್ತಾ ಅದರ ಹಾಡನ್ನು ಮನಸ್ಸಿನಲ್ಲಿ ಹಾಡುತ್ತಾ ಕುಣಿಯುತ್ತಾಳೆ.

ಕಾಶಮ್ಮನಿಗೆ ನಿಸರ್ಗವೆಂದರೆ ಬಹಳ ಪ್ರೀತಿ. ಮೆಣಸಿನಕಾಯಿ, ಬದನೆಕಾಯಿ, ಬೆಂಡೆಕಾಯಿ, ಮೆಂತಿ ಪಲ್ಲ್ಯ, ಪಾಲಕ ಪಲ್ಲ್ಯ, ಟಮಾಟೋ ಇವುಗಳನ್ನು ತೋಟದಿಂದ ಕಿತ್ತು ತಂದು ಮಲ್ಲವ್ವನಿಗೆ. ಸಹಾಯ ಮಾಡುತ್ತಿದ್ದಳು. ಹೀಗೆ ಸಾಗುತ್ತಿದ್ದ ಬದುಕು ಲಿಂಗರಾಜ ಎಂಬ ಯುವಕ ಕಾಶಿಯ ಹೃದಯಕ್ಕೆ ಹತ್ತಿರವಾಗುತ್ತಿದ್ದಾಗ ಅವಳು ಮೊದಲು ತಿರಸ್ಕರಿಸಿದರೂ ನಂತರ ಅವನ ಪ್ರೀತಿಗೆ ಸೋತು ಅವನ ಜೊತೆ ಹೊಲ, ತೋಟ, ಗವಿಸಿದ್ದನ ಗುಡ್ಡ ಪ್ರದೇಶಗಳಲ್ಲಿ ಪ್ರೀತಿ ಮಾಡುತ್ತ ತಿರುಗಾಡುತ್ತ ಕಾಲ ಕಳೆಯುವ ವಿಷಯ ಊರಿನಲ್ಲಿ ಜನತೆಗೆ ತಿಳಿದಾಗ ಅವಳ ಜೀವನದ ಸ್ಥಿತಿ ಬಹಳ ಗಂಭೀರವಾಗುತ್ತದೆ.

[೨]"ಅದ್ಯಾಂಗಾಗ್ತದ್ರೀ ಲಿಂಗರಾಜಾ ಸಾವ್ಕಾರಾ.... ನೀವು ಸಾವ್ಕಾರ್‍ರು ನಾನು ಬಡೂರು... ನೀವು ಮ್ಯಾಗಿನಕೇರಿ ಮ್ಯಾಲಿನ ಜಾತಿ ಮಂದಿ... ನಾನು ಕೆಳಗೇರ್‍ಯಾಗಿರಾ ಕೆಳ ಜಾತಿ ಪೊರಿ, ನನಗಾ ನಿಮಗಾ ಸರಿ ಸಮಾನೇನ್ರೀ ಸಾವ್ಕಾರಾ?"[೨]

ಈ ರೀತಿ ಕಾಶಮ್ಮ ಪ್ರೀತಿಯ ಬಗ್ಗೆ ತಿರಸ್ಕಾರ ಒಡ್ಡಿದರೂ ಲಿಂಗರಾಜ ಅವಳನ್ನು ಬಿಡದೆ ಪ್ರೀತಿಯ ಬಲೆಯಲ್ಲಿ ಸಿಲುಕಿಸಿ ಕೊಳ್ಳುತ್ತಾನೆ. ಕಾಶಿಯನ್ನು ನಾನು ಮದುವೆ ಆಗುತ್ತೇನೆ ಎಂದು ಹೇಳಿ ಅವಳ ಮನಸ್ಸಿನಲ್ಲಿ ಆಸೆಯನ್ನು ತುಂಬಿ ಅವಳು ಊಟ ನಿದ್ರೆಯನ್ನು ಬಿಟ್ಟು ಅವನನ್ನ ಪರಿತಪಿಸುವಂತೆ ಮಾಡುತ್ತದೆ. ಮುಂದೆ ಈ ಸುದ್ದಿ ಸಾವ್ಕಾರ ಗುರು ಲಿಂಗಪ್ಪನಿಗೆ ತಿಳಿದು ಅವನು ಜಮಾದಾರ ಮಲ್ಲಪ್ಪನನ್ನ ಕರೆಸಿ ಅಸಭ್ಯವಾಗಿ ಬೈದು ದ್ವೇಷ ಅಸೂಯೆ ಜಾತೀಯತೆ ಎದುರಾಗಿ ಕಾಶಮ್ಮ ಮತ್ತು ಲಿಂಗರಾಜನನ್ನ ಅವರ ಕುಟುಂಬದವರು ಬೇರ್ಪಡಿಸಿ. ಇಬ್ಬರ ಪ್ರೀತಿಗೂ ಅಂತ್ಯ ಹೇಳಿ. ಅವರ ಮನಸ್ಸಿಗೆ ಆಂತರಿಕ ನೋವನ್ನು ಉಂಟುಮಾಡುತ್ತಾರೆ.

ಕಾಶಮ್ಮ ಬದುಕಿನಲ್ಲಿ ಪ್ರೀತಿಸಿದ ಲಿಂಗರಾಜನನ್ನು ಮರೆತು ಬದುಕುವುದು ಕಷ್ಟವೆನಿಸುತ್ತದೆ. ಲಿಂಗರಾಜನೂ ಸಹ ಕಾಶಮ್ಮನ ಪ್ರೀತಿಯಲ್ಲಿ ಕೊರಗುತ್ತಾನೆ.

ಲಿಂಗರಾಜ ಸಾವಳಗಿ, ಕಲಬುರ್ಗಿ, ಅಕ್ಕಪಕ್ಕದ ಊರುಗಳಲ್ಲಿ ಕಾಶಮ್ಮನನ್ನು ಹುಡುಕುತ್ತ ಬಂದಾಗ, ಅವನ ಸ್ನೇಹಿತರು ಸಹ ಕಾಶಮ್ಮನನ್ನು ಹುಡುಕಿದರು ಸಿಗದೆ ಹೋದ ಸಮಯುದಲ್ಲಿ, ಲಿಂಗರಾಜನು ಮನಸ್ಸಿನಲ್ಲಿ ನೊಂದು ಬದುಕುವಾಗ. ಕೆಲವು ತಿಂಗಳೂಗಳ ನಂತರ ಕಾಶಮ್ಮ ಮದುವೆ ಆಗಿ ಸುಖದಿಂದ ಇದ್ದಾಳೆ ಎಂಬುದನ್ನು ತಿಳಿದ ಕ್ಷಣ ಲಿಂಗರಾಜನಿಗೆ ಆಘಾತಕಾರಿ ಉಂಟಾಗುತ್ತದೆ. ಕಾಶಮ್ಮ ನನಗೆ ದ್ರೋಹ ಮಾಡಿದಳು ಎಂದು ಅವನು ಮನಸ್ಸನ್ನು ಗಟ್ಟಿ ಮಾಡಿ ತನ್ನ ತಂದೆ ಸಾವಿನ ದಿನಗಳನ್ನು ಎಣಿಸುತ್ತಿದ್ದನ್ನು ಕಂಡು ಸಾಹುಕಾರ ಗುರುಲಿಂಗಪ್ಪನ ಆಸೆಯನ್ನು ನೇರವೇರಿಸಲು ಭಾಸಗಿ ಹಳ್ಳಿಯ

ಸಾವುಕಾರನ ಮಗಳಾದ ನೀಲಮ್ಮನನ್ನು ಮದುವೆ ಆಗಿ ಕಾಶಮ್ಮನನ್ನು ತನ್ನ ಮನದಿಂದ ದೂರ ಸರಿಸಿ, ನೀಲಮ್ಮನ ಜೊತೆ ಸುಖದಿಂದ ಸಂಸಾರ ಮಾಡುತ್ತಾನೆ. ಕಾಶಮ್ಮನು ಸಹ ಮಾರ್ತಾಂಡನ ಜೊತೆ ಮದುವೆ ಆಗಿ, ಸಂಕಟದ ಯಾತನೆಯಲ್ಲಿ ಬದುಕನ್ನು ಸಾಗಿಸುತ್ತಾಳೆ.

ಲಿಂಗರಾಜ ಕಾಶಮ್ಮನಿಗೆ ಮನಸೋತು ಅವಳನ್ನು ಹೊಳೆಯ ದಂಡೆಯ ಕಳ್ಳಿಸಾಲು ಹೊಲ, ತೋಟ, ಅಡವಿ ಕಾಡಸಿದ್ದನ ಹಾಳುಗುಡಿ, ಗವಿಸಿದ್ದನಗುಡ್ಡದ ಸಾಲು, ಸಿಂದಿ ಬನದ ಹಸುರಿನಲ್ಲಿ ಜೋಡಿಯ ಪ್ರಣಯ ಅರಳ ತೊಡಗಿತು. ಯಾರಿಗೂ ತಿಳಿಯದೆ ಪ್ರೀತಿ ಮಾಡಿದ ಗುಟ್ಟು ಜಾಸ್ತಿ ದಿನ ಉಳಿಯಲಿಲ್ಲ.

ಕಾಶಮ್ಮನು ತನ್ನ ಬದುಕಿನಲ್ಲಿ ತೆಗೆದುಕೊಂಡ ನಿರ್ಧಾರದಿಂದ ಸಮಾಜದ ಜನರಿಗೊ ಅವಳ ಬಗ್ಗೆ ಕೆಟ್ಟಾ ಅಭಿಪ್ರಾಯ ಬಂದರೂ ಅವಳು ಲಿಂಗರಾಜನ ಜೊತೆ ಬದುಕುವುದು ಅವನ ಮೇಲೆ ಇದ್ದ ಗಾಢವಾದ ಪ್ರೀತಿಯನ್ನು ತೋರಿಸುತ್ತ. ಯಾದರೂ ಜಮಾದಾರ ಮಲ್ಲಪ್ಪನ ಇಡೀ ಕುಟುಂಬವೇ ಕಾಶಿಯಿಂದ ಸಂಕಟದಲ್ಲಿನೊಂದು ನಾಶವಾಗುತ್ತದೆ. ಕಾಶಿ ಮಾನಸಿಕವಾಗಿ ನೊಂದಳೆ ಹೊರತು ದೈಹಿಕವಾಗಿ ಲಿಂಗರಾಜನನ್ನು ಬಿಟ್ಟು ಬರಲು ಸಾಧ್ಯವಾಗಲಿಲ್ಲ. ಹೀಗೆ ಕಾಶಿ ಮತ್ತು ಲಿಂಗರಾಜನ ನಡುವೆ ಅನೈತಿಕ ಸಂಬಂಧವಿದ್ದರೂ. ಅದು ಇಬ್ಬರಲ್ಲೂ ಗಟ್ಟಿಯಾಗಿ ಬೇರು ಬಿಟ್ಟಿರುತ್ತದೆ.

ಲಿಂಗರಾಜ ಮತ್ತು ಕಾಶಮ್ಮ ಇಬ್ಬರೂ ತೋಟದ ಮನೆಯಲ್ಲಿ ಇರುವುದನ್ನು ತಿಳಿದ ಮೇಲೆ ನೀಲಮ್ಮನ ಮನಸ್ಸಿಗೆ ಸಿಡಿಲು ಬಡಿದ ಹಾಗೆ ಆಗಿ ಅವಳೂ ಊಟ ಮತ್ತು ನಿದ್ರೆಯನ್ನು ಬಿಟ್ಟು ತನ್ನ ಮಗ ಬಸವನ ಜೊತೆ ನೋವಿನಲ್ಲಿ ಬದುಕುತ್ತಾಳೆ. ಹೀಗೆ ಸಾಮಾಜಿಕ ಬದುಕಿನಲ್ಲಿ ಹೆಣ್ಣು ಮಾನಸಿಕವಾಗಿ ತೊಳಲಾಟಕ್ಕೆ ಒಳಗಾಗುವುದನ್ನು ತಿಳಿಯಬಹುದು.

ಜಮಾದಾರ ಮಲ್ಲಪ್ಪ ದಲಿತ ಕುಟುಂಬದಲ್ಲಿ ಹುಟ್ಟಿ, ಕೇಳಗೇರಿಯ ದಲಿತರ ನಾಯಕನಾಗಿ ಬೆಳೆದು. ಹಣಕಾಸು, ಹೊಲ, ಮನೆ ಇವುಗಳಲ್ಲಿ ಗೌಡ, ಸಾಹುಕಾರರಿಗೆ ಸಮಾನವಾಗಿ ನಿಲ್ಲುವಂತ ವ್ಯಕ್ತಿಯಾಗಿ, ಊರಿನ ಜನರಿಗೆ ಕಷ್ಟಕಾಲದಲ್ಲಿ ಸಹಾಯ ಮಾಡುವ ಗುಣಗಳನ್ನು ಹೊಂದಿದ್ದ ಮಲ್ಲಪ್ಪನ ಘನತೆ ಗೌರವಕ್ಕೆ ಕಾಶಮ್ಮ ಕಪ್ಪು ಮಸಿಯನ್ನು ಬಳೆಯುತ್ತಾಳೆ. ಸಾಹುಕಾರ ಗುರುಲಿಂಗಪ್ಪನ ಮಗ ಲಿಂಗರಾಜ, ಕಲ್ಬುರ್ಗಿ ಶಾಲೆಯಲ್ಲಿ ವಿದ್ಯೆ ಕಲಿತು ಬಂದವನು ಶಿವಳ್ಳಿಯ ಕೆಳಗೇರಿಯ ದಲಿತ ಕುಟುಂಬದ ಕಾಶಮ್ಮನನ್ನು ಪ್ರೀತಿಸಿ ಮದುವೆ ಆಗುವ ಮಟ್ಟಕ್ಕೆ ಬಂದಾಗ, ಗುರುಲಿಂಗಪ್ಪ ಜಮಾದಾರ ಮಲ್ಲಪ್ಪನನ್ನು ಮನೆಗೆ ಕರೆಸಿ ಅವನಿಗೆ ಅವಮಾನವಾಗವಂತೆ ನಡೆದುಕೊಳ್ಳುವುದನ್ನು ಈ ರೀತಿ ಕಾಣಬಹುದು

[೩]"ನಿನಗೇನೂ ಗೊತ್ತಿಲ್ಲಂತಿಯೇನೋ ಕಾಟಗಾ.... ಹ್ಯಾಂಗ ಗೊತ್ತಾಗ್ತದೋ ನಿನಗ? ನಿನ್ ಮಗಳಿಗಿ ಚುಂಚೂರು ಮಾಪುರ ತಾಯಿಗಿ ಜೋಗಿಣಿ ಬಿಟ್ಟದ್ದೇನೋಮಲ್ಲ್ಯಾ? ಬಸವಿ ಬಿಟ್ಟಯೇನು?"[೩] ಅಂಥ ಸಾವುಕಾರ, ಜಮಾದಾರ ಮಲ್ಲಪ್ಪನನ್ನು ಕಟುವಾಗಿ ಟೀಕಿಸಿದಾಗ ಅವನ ಮನಸ್ಸು ನೊಂದುಕೊಂಡರು ಸಿಟ್ಟಿನಿಂದ ಅವನು ಸಾಹುಕಾರನನ್ನು [೩]"ಏನಂದ್ಯೋ ಸೂಳ್ಯಾ ಮಗನೇ ಸಾವ್ಕಾರಾ.... ನಿನ್ನ ನಾಲಿಗಿ ಬಿಗಿ ಹಿಡ್ದು ಮಾತಾಡು... ನನ್ ಮಗಳ ಹೆಸರಿಗಿ ಬಂದೆಂದ್ರ ನಿನ್ನ ನಾಲಿಗಿ ಸೀಳಿ ಹಾಕ್ತೀನಿ ಭೋಸಡೀಕೇ..... ಸಾವ್ಕಾರಂತ ಮಾರ್ವಾದಿ ಕೊಟ್ಟಾರ ನನ್ ಕುಂಡ್ಯಾಂಗೇ ಬಿಸಿನೀರ ಬಿಡ್ಲಕ್ಕ ಹೊಂಟಿದ್ಲ್ಯಾ...."[೩] ಎಂದು ಜಮಾದಾರ ಮಲ್ಲಪ್ಪ ಕೋಪದಿಂದ ಸಾಹುಕಾರ ಎಂಬ ಗೌರವವನ್ನು ಕೊಡದೆ ಮಾತನಾಡುವುದನ್ನು ಕಾಣಬಹುದು.

ಜಮಾದಾರ ಮಲ್ಲಪ್ಪನಿಗೆ ಕಾಶಮ್ಮನ ನಡೆತೆಯಿಂದ ಮನಸ್ಸಿಗೆ ಆಘಾತ ಉಂಟಾಗಿ, ಅವನು ಸಿಟ್ಟಿನಿಂದ, ಸಾಹುಕಾರ ಆಡುವ ಮಾತಿನಿಂದ ನೊಂದರು, ಲಿಂಗರಾಜ, ಕಾಶಿ ಇಬ್ಬರು ಪ್ರೀತಿ ಮಾಡುತ್ತಿದ್ದೇವೆ, ಮದುವೆ ಆಗಿ ಸಂಸಾರ ಮಾಡುತ್ತೆವೆ, ಎಂದು ಲಿಂಗರಾಜ ಹೇಳುವುದು ಅವರಲ್ಲಿ ಇದ್ದ ಪ್ರೀತಿಯನ್ನು ಎತ್ತಿತೋರಿಸುತ್ತದೆ. ಅವರಲ್ಲಿ ಜಾತಿಯತೆ ಉಂಟಾದರು, ಕಾಶಿ ಮತ್ತು ಲಿಂಗರಾಜರ, ಪ್ರೀತಿಯಲ್ಲಿ ಯಾವ ಭೇದ ಭಾವವಿಲ್ಲದಿರುವುದನ್ನು ಕಾಣಬಹುದು. ಆದರೆ ಅವರ ಮನೆತನದ ವಿರೋಧ ಹಾಗೂ ಊರಿನ ಜನಗಳಿಂದ ಆಗುವ ಅಪಮಾನದಿಂದ ಅವರನ್ನು ದೂರ ಮಾಡಿ ಬೇರೆ ಬೇರೆ ಮದುವೆ ಮಾಡಿದರು ಮತ್ತೆ ಒಂದಾಗುವುದನ್ನು ಕಾಣಬಹುದು.

ಕಾಶಮ್ಮ ಲಿಂಗರಾಜನ ಜೊತೆ ಬಂದು ತೋಟವನ್ನು ಸೇರಿದಾಗ ಊರಿನ ಹಿರಿಯರಾದ ಲಿಂಗಾಯಿತರು, ಸಾವುಕಾರರು ನಾಲ್ಕೂರಿನ ಮಂದಿ ಪಂಚಾಯಿತಿ ಮಾಡಲು ಮಠದಲ್ಲಿ ಸೇರಿದ್ದರು ಮಠದ ಮಾದೇವಯ್ಯಸ್ವಾಮಿ ಜಮಾದಾರ ಮಲ್ಲಪ್ಪ ಬುದ್ದಿವಾದವನ್ನು ಹೇಳುತ್ತಾರೆ. ಆದರೆ ಮಲ್ಲಪ್ಪ ಕೋಪದಿಂದ [೪]"ಅಕಿ ನನ್ ಕೈಯಾಗ ಸಿಕ್ಕರ ಕಡು ಬುಟ್ಟಿ ತುಂಬಿ ಹೊಳಿ ಕಾಣಿಸಲಕ್ಕು ಹಿಂದಾ ಮುಂದಾ ನೋಡಾಂವಲ್ಲ ಈ ನಿನ್ನಾ ಮಗಾ ಕಬ್ಬಲಿಗಾ......"[೪]. ಈ ವಿಷಯದಲ್ಲಿ ನಂದು ಏನೂ ತಪ್ಪಿಲ್ಲ ಸ್ವಾಮಿ ಎಂದು ಮನನೊಂದು ನೀವೇಲ್ಲರು ನನ್ನ ಮೇಲೆ ತಪ್ಪುನ್ನು ಹೊರಸಿ ಕೋರ್ಟುನಲ್ಲಿ ವಕೀಲರು ಕೇಳಿದಗೆ ಕೆಳಿತ್ತಿರಿ ನಾನು ಏನನ್ನು ಹೇಳಲ್ಲಿ ಎಂದು ಕಣ್ಣೀರು ಹಾಕುತ್ತಾನೆ. [೪]"ನಿಮ್ಮವ್ವನ ಸೂಳ್ಳು ಮಗನೇ ನೀವು ಕಮ ಜಾತಿ ಮಂದೀ ಬಾಲ ನನಗ್ಗೊತ್ತಿಲ್ಲೇನು? ಮಗಳಿಗೆ ಊರ ಸಾವ್ಕಾರನ ತೆಳಗೆ ಹಾಕಿ ಅಂವಗೆ ಬುಟ್ಟ್ಯಾಗ ಹಾಯ್ಕೊಂಡು ಅವನ ಸಂಪತ್ತೆಲ್ಲಾ ಹಡಪ ಮಾಡ್ಕೊಳ್ಳೋ ಹುನ್ನಾರು ಮಾಡ್ತೀರಿ"[೪] ಅಂತ ನೀಲಮ್ಮನ ಅಪ್ಪ ಭಾಸಗಿ ಊರಿನ ಸಾವುಕಾರ ಮಲ್ಲಪ್ಪನಿಗೆ ಕಟುವಾಗಿ ಬೈಯುತ್ತಾನೆ.

ಇದರಿಂದ ಮಲ್ಲಪ್ಪನು ಅಳುತ್ತಾ. ಮೂರು ದಿನದಿಂದ ಊಟ ನಿದ್ರೆ ಇಲ್ಲದೆ ಕಾಶಮ್ಮನಿಂದ ಮಾನಸಿಕವಾಗಿ ನೊಂದು ಬದುಕಿನ ಆಸೆಯನ್ನು ತೊರೆದು ಸೇಂದಿಯನ್ನು ಕುಡಿಯತ್ತು ಮನಸ್ಸಿನಲ್ಲಿ ನಾನಾ ಆಲೋಚನೆಗಳನ್ನು ಮಾಡುತ್ತಾ ಮಠದಲ್ಲಿ ಮೇಲ್ವರ್ಗದವರು ಆಡಿದ ಮಾತುಗಳು ಹಾಗು ಕಾಶಮ್ಮನಿಂದ ಆದ ಅಪಮಾನ ತಾಳಲಾರದೆ ಮಾನ ಮಾರ್ಯದೆ ಮಣ್ಣುಪಾಲಾಗಿ ತಲೆ ಎತ್ತಿ ಬಾಳಲಾಗದ ಸ್ಥಿತಿ ಉಂಟಾದಾಗ ಹೊಳೆಗೆ ಬಿದ್ದು ಪ್ರಾಣವನ್ನು ಕಳೆದುಕೊಳುವುದು. ಮಲ್ಲಪ್ಪನ ಕುಟುಂಬಕ್ಕೆ ಆಘಾತವನ್ನುಂಟು ಮಾಡುತ್ತದೆ.

ಜಮಾದಾರ ಮಲ್ಲಪ್ಪ ತನ್ನ ಮಗಳಿನಿಂದ ಆದಾ ಅಪಮಾನ ಹಾಗೂ ಮಟದಲ್ಲಿ ನಡೆದ ಪಂಚಾಯಿತಿಯಲ್ಲಿ ನೀಲಮ್ಮನ ತಂದೆ ಆಡಿದ ನೋವಿನ ಮಾತನ್ನು, ಸಹಿಸಿಕೊಳ್ಳದ ಮಲ್ಲಪ್ಪ ನೊಂದು ದಣಿವಿನ ಹೆಜ್ಜೆಗಳನ್ನು ಹಾಕುತ್ತಾ, ಉಸಿರು ಬಿಡುತ್ತ, ಸೇಂದಿಯನ್ನು ಕಡಿಯುತ್ತ. ಮನಸ್ಸಿನಲ್ಲಿ ಸಿಟ್ಟು, ತಳಮಳ, ಸಂಕಟಗಳೆಲ್ಲವನ್ನು ಸಹಿಸಿಕೊಂಡು ಈರವ್ವನ ಮನೆಯಲ್ಲಿ ಆಡಿದ ಮಾತುಗಳನ್ನು ನೆನಪಿಸಿ ಕೊಳ್ಳುತ್ತಾ, ಹೊಳೆಯ ದಂಡೆಯ ಮೇಲೆ ನಿಂತು ತತ್ರಾಣಿಗೆ ಮುತ್ತಿಟ್ಟು ಅದರಲ್ಲಿದ್ದ ಸೇಂದಿಯನ್ನು ಕುಡಿದು ರಭಸದಿಂದ ಹುಕ್ಕಿ ಹರಿಯುತ್ತಿದ್ದ ಹೊಳೆಯಲ್ಲಿ ಹುಚ್ಚನಂತೆ ವೇಗವಾಗಿ ನೀರಿಗೆ ಹಾರಿ ಪ್ರಾಣವನ್ನು ಕಳೆದುಕೊಳ್ಳುತ್ತಾನೆ. ಜಮಾದಾರನ ಬದುಕು ಅಂತ್ಯವಾಗಿ ಅವನ ಕುಟುಂಬದವರು ಅನೇಕ ಕಷ್ಟಗಳಿಗೆ ಸಿಲುಕಿಕೊಂಡು ನರಳುವುದನ್ನು ಕಾಣಬಹುದು, ಹುಲಿಯಂತೆ ಬಾಳಿದ ಮಲ್ಲಪ್ಪ, ಯಾರಿಗೂ ತಲೆ ಭಾಗದ ವ್ಯಕ್ತಿಯಾಗಿ, ಜೀವನವನ್ನು ಸಾಗಿಸುತ್ತಿದ್ದವನು, ತನ್ನ ಮಗಳು ಮಾಡಿದ ಅಪಮಾನದ ಕೆಲಸದಿಂದ ಮನನೊಂದು ಅವನು ಊರಿನಲ್ಲಿ ಬದುಕಲಾಗದ ಪರಿಸ್ಥಿತಿ ಉಂಟಾಗಿ ಅವನು ಸಾವಿನ ದವಡೆಗೆ ಸಿಲುಕಿ ಅವನ ಬದುಕು ನಾಶವಾಗುತ್ತದೆ.

ಜಮಾದಾರ ಮಲ್ಲಪ್ಪನ ಮಗಳು ಕಾಶಮ್ಮ ಸಾಹುಕಾರ ಗುರುಲಿಂಗಪ್ಪನ ಮಗ ಲಿಂಗರಾಜನ ಜೊತೆ ರಂಡೆಯಾಗಿ ತೋಟದಲ್ಲಿ ಇರುವುದು ಕೆಳಗೇರಿಯ ಜನಾಂಗದವರಿಗೆ ಮುಜುಗರವನ್ನುಂಟು ಮಾಡುತ್ತದೆ. ಸೊಲ್ಲಾಪುರದ ಮಾರ್ತಾಂಡ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿದ ಕಾಶಮ್ಮ ಲಿಂಗರಾಜನ ಪ್ರೇಮ ದಾಹಕ್ಕೆ ಸಿಲುಕಿ, ಜಾತಿಯಲ್ಲಿ ಮೇಲು ಕೀಳು ಆದರೂ ಪ್ರೀತಿಯಲ್ಲಿ ಸಮಾನರು ಎಂಬುದನ್ನೂ ತೊರಿಸುತ್ತದೆ. ಆದರೆ ತಾಳಿಕಟ್ಟಿದ ಮಾರ್ತಂಡನ ಬದುಕು ನರಕಯಾತನೆಯಾಗಿ ಕಾಡುತ್ತದೆ. ಕಾಶಮ್ಮ ಮಾರ್ತಾಂಡನನ್ನು ಸ್ನೇಹಿತನಾಗಿ ಕಾಣುವುದು ಅವನಿಗೆ ಬೇರೆ ಮದುವೆ ಆಗು ಎಂದು ಅವನ ಮನಸ್ಸನ್ನು ಸಂತೈಯಿಸುವುದು (ಮಮಕಾರ ಪ್ರೀತಿ ವಾತ್ಸಲ್ಯ) ಆದರೆ ಅವನಿಗೆ ಮಾನಸಿಕವಾಗಿ ದ್ರೋಹ ಮಾಡುತ್ತಾಳೆ. ಮಾರ್ತಾಂಡ ಮಾನಸಿಕವಾಗಿ ಆಘಾತಕ್ಕೆ ಒಳಗಾಗಿ ಸನ್ಯಾಸಿ ಆಗಿ ಅರೆ ಹುಚ್ಚಾನಾಗಿ ಕಾಶಮ್ಮನ ಪ್ರೀತಿಗೆ ಬಲಿಯಾಗುತ್ತಾನೆ. ಹೀಗೆ 'ಬದುಕು' ಕಾದಂಬರಿಯಲ್ಲಿ

ಕಾಶಮ್ಮ ಮಾರ್ತಾಂಡ ಹಾಗೂ ಲಿಂಗರಾಜನ ನಡುವಿನ ಆಂತರಿಕ ಜೀವನ ಪ್ರೀತಿ ಸಂಕಟ ತೋಳಲಾಟಕ್ಕೆ ಸಿಕ್ಕಿ ಬದುಕನ್ನು ಅಂಧಕಾರವಾಗಿ ಮಾಡಿಕೊಳ್ಳುವ ಸ್ಥಿತಿಯನ್ನು ಕಾಣಬಹುದು.

ಮಾರ್ತಾಂಡ ಮಿಲ್ಲಿನ ಕೆಲಸವನ್ನು ಬಿಟ್ಟು ಮನೆಯನ್ನು ತೊರೆದು ಊರೂರು ತಿರುಗುತ್ತಾ ಪುಣೆ, ಮುಂಬಯಿ, ನಾಸಿಕ್ ಊರುಗಳಲ್ಲಿ ತಿರುಗಿ ಸಾಕಾಗಿ ಸನ್ಯಾಸಿಗಳ ಜೊತೆ ಸೇರಿಕೊಂಡು ಕಾಶಿ, ರಾಮೇಶ್ವರ, ದಿಲ್ಲಿ, ಮಥುರಾ ಅಂತೆಲ್ಲಾ ತಿರುಗುತ್ತಾ ಭಜನಿ ಮಾಡುತ್ತಾ ಹಿಮಾಲಯಕ್ಕೆ ಹೋಗುವಾಗ ಒಬ್ಬ ಸಾಧು ಮಾರ್ತಾಂಡನಿಗೆ ನಿನ್ನ ಆಯಸ್ಸು ಮುಗಿಯುತ್ತಿದೆ ನೀನು ಕೊನೆಯ ಕ್ಷಣದಲ್ಲಿ ನಿನ್ನ ಹೆಂಡತಿಯನ್ನು ಬೇಟಿ ಮಾಡಿದರೆ ನಿನಗೆ ಶಾಂತಿ ಸಿಗುತ್ತದೆ, ಎಂದು ಹೇಳಿದಾಗ ಅವನು ಶಿವಳ್ಳಿಗೆ ಬಂದು ಘತರೂನ ಸಹಾಯವನ್ನು ಪಡೆದು, ಕಾಶಮ್ಮನ ಮುಖವನ್ನು ನೋಡಲು ಬಯಸುತ್ತಾನೆ. ಕಾಶಮ್ಮ ಅವನ ಮುಖವನ್ನು ನೋಡುತ್ತಾ ಬಿಕ್ಕಿ ಬಿಕ್ಕಿ ಅಳುತ್ತ ಕಾಶಮ್ಮ [೫]"ನನಲಿಂದ ಅಗಲಿ ನೀ ಈಟು ಖರಾಬಾಗ್ತೆಂತ, ಬರ್ಬಾದಾಗ್ತೆಂತ ಗೊತ್ತಿದ್ದರೆ ನಾ ನಿನಗೆ ಬಿಟ್ಟು ಬಲಕಲ್ ಬರ್ತಿರಲಿಲ್ಲೋ ಮಾರ್ತಾಂಡಾ......... ನನಗ ಮಾಫ್ ಮಾಡಿ ಬಿಡೊ.........",[೫] ಈ ರೀತಿ ಮಾನಸಿಕವಾಗಿ ನೊಂದು ಕಾಶಮ್ಮ ದುಃಖಿಸುತ್ತ ಮಾರ್ತಾಂಡನ ಕೈಯನ್ನು ಹಿಡಿದುಕೊಂಡು ತಾನು ಮಾಡಿದ ತಪ್ಪನ್ನು ಮನ್ನಿಸು, ಎಂದು ಕಳೆಕಳೆಯಿಂದ ಕೇಳಿಕೊಳ್ಳುವುದನ್ನು ಕಾಣಬಹುದು. ಹೀಗೆ ಕಾಶಮ್ಮ ಲಿಂಗರಾಜನ ಜೊತೆ ಇದ್ದು ಅನುಭವಿಸಿದ್ದ ಸುಖಕ್ಕಿಂತ ಅವಳ ಮನಸ್ಸಿನ ಆಂತರಿಕ ನೋವು, ಸಂಕಟವೇ ಹೆಚ್ಚಾಯಿತು.

ಕಲಬುರ್ಗಿಯಿಂದ ಬಸ್ಸಿನಲ್ಲಿ ಬಂದು ನಾಕೂರು ಸೀಮೆಯ ನಡುವಿನಲ್ಲಿ ಇಳಿದ ಮಾರ್ತಾಂಡನ ಮುಖ ಪರಿಚಯವೇ ಬದಲಾವಣೆಗೊಂಡಿತ್ತು, ಎಣ್ಣೆ ನೀರು ಕಾಣದೆ ಕೂದಲು ಭುಜದ ತನಕ ಬೆಳೆದುಕೊಂಡು ಜಡೆಗಟ್ಟಿದಂಗಾಗಿತ್ತು, ಎದೆವರಗೆ ಜೋತು ಬಿದ್ದಿರುವ ಕರಿಬಿಳಿ ಬೆರೆತ ಕೂದಲಿನ ಗಡ್ಡ ಮೀಸೆ, ಕಾವಿ ಬಣ್ಣದ ಉದ್ದ ತೋಳಿನ ಅಂಗಿ, ಕಾವಿ ಬಣ್ಣದ ಲುಂಗಿ ಸುತ್ತಿಕೊಂಡಿದ್ದ. ಅಲ್ಲಿಯ ಜನರು ಅವನನ್ನು ಗುರುತಿಸಲಾಗದೆ ಸಾಧು ಸನ್ಯಾಸಿಯಿರಬೇಕೆಂದು ತಿಳಿದಿದ್ದರು. ಅವನು ಕಲ್ಲಪ್ಪನ ಅಂಗಡಿಯಿಂದ ಆಳು ಮಗನ ಕೈಯಲ್ಲಿ ಸೇಂದಿ ತರಿಸಿಕೊಂಡು ಕುಡಿದು ನಿಶೆಯಲ್ಲಿ ಮೆಲ್ಲಗೆ ಎದ್ದು ಹೆಜ್ಜೆಗಳನ್ನು ಹಾಕುತ್ತ ಮಲ್ಲಪ್ಪನ ತೋಟದ ಮೂಲೆಯಲ್ಲಿ ಬಂದು ನಿಂತು ಘತರೂ ಎಂದು ಕೂಗುತ್ತಾನೆ. ಘತರೂಗೆ ಅವನ ಗುರುತು ಸಿಗಲಿಲ್ಲ. ಯಾರದು ಎಂದಾಗ ನಾನು ಸೋಲ್ಲಾಮರದ ಮಾರ್ತಾಂಡ ಎಂದು ಹೇಳಿದಾಗ ಘತರೂ ಸಂಕಟ ಪಟ್ಟಿಕೊಂಡು ಅವನನ್ನು ಮನೆಯ ಒಳಗೆ ಕರೆದುಕೊಂಡು ಹೋಗಿ ಅವನ ಬಗ್ಗೆ ವಿಚಾರಿಸಿ ಕೊಳ್ಳುತ್ತಾನೆ. ಘತರೂನು ಮಾರ್ತಾಂಡ

ಇದ್ದ ಸ್ಥಿತಿಯನ್ನು ಕಂಡು ಅವನ ಅಂತರಾಳದ ನೋವಿನ ಸಂಗತಿಯನ್ನು ತಿಳಿದು ದುಃಖ ಪಟ್ಟುಕೊಳ್ಳುತ್ತಾನೆ.

ಮಾರ್ತಾಂಡ ಕಾಶಮ್ಮನ ಪ್ರೀತಿಯ ಸಂಕೋಲೆಯಿಂದ ಹೊರಬರಲಾಗದ ಪರಿಸ್ಥಿತಿ ಉಂಟಾಗಿ ಅವನ ಬದುಕಿನ ಕೊನೆಯ ಕ್ಷಣಗಳು ದುಃಖಮಯದಿಂದ ಕೂಡಿದ್ದು ಸಾಯುವ ಮೊದಲು ಶಿವಳ್ಳಿಗೆ ಬಂದು ಕಾಶಮ್ಮನನ್ನು ನೋಡಿ ಊರ ಮುಂದೆ ಸಾಯುವುದು ಈ ಸಾವು ಕಾಶಮ್ಮನಿಗೆ ಮಾನಸಿಕವಾಗಿ ವೇದನೆಯನ್ನು ಉಂಟುಮಾಡುವುದನ್ನು ಕಾಣಬಹುದು.

[೬]"ಏ, ನಿಮ್ ಶಿವಳ್ಳಿ ಸಾವ್ಕಾರನೂ ಜಮಾದಾರ ಮಲ್ಲಪ್ಪನ ಮಗಳಿಗೆ, ಅಕ್ಕಿನ ಒಗತಾನ ಹರ್ಸಿ, ಗಂಡಗ ಬಿಡ್ಸಿ ತ್ವಾಟದ ಮನ್ಯಾಗ ತಂದಿಟ್ಗೊಂಡಾನಂತಲ್ಲ...."

"ಹೂಂ.... ತ್ವಾಟದ ಮನ್ಯಾಗಿಉಲ್ಲದರೇನು ಊರಾಗಿನ ತನ್ನ ಮನ್ಯಾಗಿಟ್ಕೋತಾನೇನು ಅಂವ? ಮನೀಗಿ ಕರ್ಕೊಂಡು ಬಂದ್ರ ಅವನ ಹೆಣ್ತಿ ಮೆಟ್ಟ ತಗೋತಾಳ ಕೈಯಾಗ.... ಇಲ್ಲಂದ್ರ ಬಿಟ್ಟು ತವರ ಮನೀಗಿ ಹೋಗ್ತಾಳ...."[೬] ಹೀಗೆ ಸಮಾಜದಲ್ಲಿ ಒಬ್ಬನ ಜೊತೆ ಮದುವೆಯಾಗಿ ಬಾಳ್ವೆ ಮಾಡಲು ಹೋದ ಹೆಣ್ಣು ಇನ್ನೊಬ್ಬರ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡು ಅವನ ಜೊತೆಯಲ್ಲಿ ಬಾಳ್ವೆ ಮಾಡಲು ಹೋದಾಗ ಆ ಪ್ರದೇಶದಲ್ಲಿ ಮಾರ್ಯಾದೆವುಳ್ಳಂತ ಜನರು ಅವರ ಬಗ್ಗೆ ಅಸಹ್ಯವಾಗಿ ಮಾತಾಡುವುದನ್ನು ಕಾಣಬಹುದು.

[೭]"ಗಂಡುಳ್ಳ ಗರತಿ ಆಗಾದು ಬಿಟ್ಟು ಮಿಂಡಗಾರನ ರಂಡ್ಯಾಗ್ತಿನಂತೆ ಬರ್ತಾವಲ್ಲ ಸೂಳೇರೂ.... ಅವುಕ್ಕ ತೆಲಿಮ್ಯಾಲ ಮೆಟ್ಟಾಡಸ್ಬೇಕು ಇವರವ್ವಾನ...."[೭] ಹೀಗೆ ಮುಕಡ್ಯಾ. ತನ್ನ ಹೆಂಡತಿ ಆರು ವರ್ಷದ ಹಿಂದೆ ಭೀಮಳ್ಳಿ ಸವ್ಕಾರನ ಮನಿಗೆ ಹೊಕ್ಕು ಅವನ ಸೂಳೆಯಾಗಿದ್ದನ್ನು ನೆನಪಿಸಿಕೊಳ್ಳುತ್ತಾನೆ. ಸವ್ಕಾರರು ಬಡವರ ಹೆಂಡತಿಯನ್ನು ಲೈಂಗಿಕ ಸುಖಕ್ಕೆ ಮೆಚ್ಚಿಸಿಯೋ ಅಥವಾ ಅನೈತಿಕವಾಗಿಯೋ ಅವರನ್ನು ಬಲಾತ್ಕಾರದಿಂದ ಕೂಡಿ ಅವರ ಸಂಸಾರಿಕ ಜೀವನವನ್ನು ಹಾಳುಮಾಡುವ ಮೇಲ್ವರ್ಗದವರನ್ನು ಪ್ರತಿಭಟಿಸಲಾಗದೆ ದಲಿತರ ಬದುಕು ಅಂಧಕಾರದಲ್ಲಿ ಇರುವುದನ್ನು ಕಾಣಬಹುದು.

[೮]"ಗಂಡನ ಮಾಡಿಕುಡ್ತೇವಂದ್ರ ಹಳ್ಳಿ ಗಂಡ ನನಗೆ ಬ್ಯಾಡಂತಂದು ಈಗ ಶಾರ ಪಟ್ಟಣದ ಮಿಂಡಗಿಟ್ಕೊಂಡು ಹಾದರ ಮಾಡ್ಕೋತ ನಮ್ಮ ಮಾರೀಗಿ ಮಸಿ ಬಳೀಲಕ್ಕತ್ತಿದ್ದೇನೇ ಭೋಸಡಿ?" ಹಡಸಿ ಹಾದರಗಿತ್ತೀ.... "ನಿಮ್ಮಪ್ಪನ ಈಗ ಆ ಸಾವ್ಕಾರ ಸನ್ ಹಾಟ್ಯಾ ಯಾಕ ಕರಸ್ಕಾ ನಂಬೋದು ನಿನಗ ಗೊತ್ತಾದಾಯೇಸನ್ಯ ಕಾಶೀ....."[೮] ಎಂದು ಮಲ್ಲವ್ವ ಕಾಶಮ್ಮನಿಗೆ ಸಿಟ್ಟಿನಿಂದ ಬೈಯುತ್ತಾ ಅವಳ ಅಂತರಾಳದ ವೇದನೆಯನ್ನು ವ್ಯಕ್ತಪಡಿಸುತ್ತಾಳೆ. ಕಾಶಮ್ಮನು ಲಿಂಗಾರಾಜನನ್ನು ಪ್ರೀತಿಮಾಡಿದ್ದರಿಂದ ಮಲ್ಲಪ್ಪ ಜಮಾದಾರನ ಗೌರವ

ಹಾಳಾಗುವುದನ್ನು ಕಾಣಬಹುದು. ಮಲ್ಲವ್ವ ಪ್ರೀತಿಯಿಂದ ಸಾಕಿದ ಮಗಳು ಸಾವುಕಾರನ ಮಗನ ಜೊತೆ ಪ್ರೀತಿಯೆಂಬ ಚಲ್ಲಾಟವನ್ನು ಆಡಿ ಊರಿನ ಜನತೆಯಲ್ಲಿ ವಂಶದ ಮಾನ ಹೋಗಿ ಮಲ್ಲಪ್ಪ ಕುಟುಂಬವು ಯೋಚನೆಯ ಸುಳಿಯಲ್ಲಿ ಸಿಲುಕುವುದನ್ನು ಕಾಣಬಹುದು. ಹೀಗೆ ದಲಿತ ಹೆಣ್ಣು ಮೇಲ್ವರ್ಗದವರ ಪ್ರೀತಿಯಲ್ಲಿ ಸಿಲುಕಿದಾಗ ಅಲ್ಲಿ ಜಾತೀಯತೆ ಉಂಟಾಗಿ. ಹೆಣ್ಣಿನ ಬದುಕು ನರಕ ಯಾತನೆಯಲ್ಲಿ ವಿಲವಿಲನೆ ಒದ್ದಾಡುವುದನ್ನು ಕಾಣಬಹುದು.

ಸಾವುಕಾರ ಗುರಲಿಂಗಪ್ಪ ಸತ್ತನಂತರ ಕಾಶಮ್ಮನನ್ನು ಮದುವೆ ಆಗಿದ್ದರೂ, ಲಿಂಗರಾಜ ಅವಳನ್ನು ಸೋಲ್ಲಾಪುರದಿಂದ ಕರೆತಂದು ದೇಹದ ಸುಖಕ್ಕೋಸ್ಕರ ರಂಡೆಯಾಗಿ ಇಟ್ಟುಕೊಳ್ಳುವುದು ಒಂದಾದರೆ ಕಾಮದ ದಾಹದಿಂದ ಮೂಕಪ್ಪ ತನ್ನ ಹೆಂಡತಿ ತುಂಬು ಗರ್ಭಿಣಿ ಆಗಿದ್ದರೂ ಅವಳ ಮೇಲೆ ಕಾಮ ಪಿಶಾಚಿಯಂತೆ ಎರಗಿ ಕಲ್ಲವ್ವನನ್ನು ಸಾಯಿಸುತಾನೆ.

ದೇಹದ ಸುಖಕ್ಕೊಸ್ಕರ ಮೇಲ್ವರ್ಗದವರು ಕೆಳವರ್ಗದವರ ಮೇಲೆ ನಡೆಯುವ ಕ್ರೌರ್ಯ ಒಂದಾದರೆ, ದಲಿತರಿಂದಲೇ ದಲಿತ ಸ್ತ್ರೀಯರ ಮೇಲೆ ಕ್ರೌರ್ಯ ನಡೆಯುತ್ತದೆ. ಅಲ್ಲದೆ ಅನೈತಿಕ ಸಂಬಂಧಗಳೂ ಕಾಣುತ್ತವೆ. ಉದಾಹರಣೆಗೆ ಈರವ್ವ–ಜಮಾದಾರ ಮಲ್ಲಪ್ಪನ ಸಂಬಂಧ, ನಾಗವ್ವ–ಸಾಬಯ್ಯನ ಸಂಬಂಧ ಇತ್ಯಾದಿ. ಡಾ. ಗೀತಾರವರು ದಲಿತ ಸ್ತ್ರೀಯನ್ನು ಕೇಂದ್ರವಾಗಿಟ್ಟು ಇತರ ದಲಿತ ಬದುಕಿನ ಚಿತ್ರಣವನ್ನು ಕಣ್ಣಾರೆ ಕಂಡು ಅಲ್ಲಿನ ಜನಾಂಗದ ಆಚಾರ ವಿಚಾರಗಳನ್ನ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಜಮಾದಾರ ಮಲ್ಲಪ್ಪ ತನ್ನ ಹೊಲದಿಂದ ಬಂದ ಜೋಳದ ರಾಶಿಯನ್ನು ಕತ್ತರಿಸಿ ತಂದು 'ಕಣ'ದಲ್ಲಿ ಹಾಕಿಸಿ ಸುಗ್ಗಿಯನ್ನು ಮಾಡುತ್ತಾನೆ. ಮಲ್ಲಪ್ಪನ 'ಕಣ'ದಲ್ಲಿ ಇರುವ ಜೋಳದ ರಾಶಿ ಎಂದರೆ ಊರಿನವರಿಗೆಲ್ಲ ಹಬ್ಬ. ಕೆಳಗೇರಿ ಮಂದಿ ಸಮಗಾರರು, ಹಜಾಮರು, ಅಗಸರು, ಫಕೀರರು, ದೊಡ್ಡಿ ಹೊಲ್ಯಾರು, ಎಲ್ಲಾ ಸೇರಿ ರಾತ್ರಿಯಲ್ಲಿ ಕುಣಿಯುತ್ತಾ ಹಾಗೂ ಜಾತ್ರೆಯನ್ನು ಮಾಡುತ್ತಾ 'ಸುಗ್ಗಿ'ಯನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ಜಮಾದಾರ ಮಲ್ಲಪ್ಪ ಜೋಡಿ ಕುರಿಗಳನ್ನು ಕಣಕ್ಕೆ ಬಲಿಕೊಟ್ಟು ಖಂಡದ ಅಡಿಗೆ ಮಾಡಿಸಿ, ಬಿಳಿ ಜೋಳದ ರೊಟ್ಟಿಗಳನ್ನು ಮಾಡಿ. ಪೂಜೆ ಸಾಮಾನು ತಂದು ದೇವಿಗೆ ಹಾಗೂ ಕಣಕ್ಕೆ ಪೂಜೆ ಮಾಡಿ ನೈವೇದ್ಯ ಸಲ್ಲಿಸಿದ ಮೇಲೆ ಅಲ್ಲಿ ನೆರದಿದ್ದ ಮಂದಿಗೆ ಕುಡಿಯಲು ಸೇಂದಿ ಊಟವನ್ನು ಹಾಕಿಸಿ ಅಲ್ಲಿ ಬಂದ ಕೆಳ ಮಂದಿ ಜನರಿಗೆ ಜೋಳವನ್ನು ದಾನಮಾಡಿ ಜಮಾದಾರ ಮಲ್ಲಪ್ಪ ಉಳಿದದ್ದನ್ನು ಚೀಲಕ್ಕೆ ತುಂಬಿಸಿ ನೆಲದಲ್ಲಿರುವ ಹಗೇವುಗಳಿಗೆ ಹಾಕುತ್ತಿದ್ದ. ಹೀಗೆ ಕೃಷಿಯಲ್ಲಿ ಬೆಳೆದ ಪದಾರ್ಥಗಳನ್ನು ಮನೆಗೆ ತರುವ ಮೊದಲು

ಸಾಂಪ್ರದಾಯಿಕವಾಗಿ ಪೂಜೆಯನ್ನು ಮಾಡಿ ಬೆಳೆಯನ್ನು ತರುವುದು ಪೂರ್ವೀಕರಿಂದ ನಡೆದು ಬಂದ ಆಚರಣೆಗಳಾಗಿವೆ.

ಮಾಪುರ ತಾಯಿಯ ಜಾತ್ರೆಗೆ ಶಿವಳ್ಳಿಯ ಜಮಾದಾರ ಮಲ್ಲಪ್ಪನ ಮನೆಯಿಂದ ಸುಣ್ಣ ಬಣ್ಣಗಳಿಂದ ಕಂಗೊಳಿಸಿದ್ದು ಜೊತೆಗೆ ಮನೆಯಲ್ಲಿರುವ ಮಲ್ಲವ್ವ, ಕಲ್ಯಾಣಿ, ಕಾಶಮ್ಮ, ಶಾಣಮ್ಮ, ಎಲ್ಲರು ಸಾನ್ನ ಮಾಡಿ ಹಾಗು ಇತರ ಜಾತಿಗಳಾದ ಹೊಲೆ ಮಾದಿಗರ ಕಟಾಕ ಕಬ್ಬಲಿಗರ, ಕುರುಬ, ತಾಳವಾರರ ಗುಡಿಸಲುಗಳನ್ನು ಅಲ್ಲಿನ ಜನು ಸ್ವಚ್ಚಗೊಳಿಸಿ ಜಾತ್ರೆಗೆ ಹೊರಡಲು ಸಿದ್ಧರಾಗುತ್ತಾರೆ. ಜಮಾದಾರ ಮಲ್ಲಪ್ಪ ತನ್ನ ಮನೆಯಲ್ಲಿ ಜಾತ್ರೆಯ ಊಟಕ್ಕೆ ಸಾಮಾನುಗಳನ್ನು ಹಾಗೂ ದೇವರ ಹರಕೆಯ ಕುರಿ ಕೋಳಿಗಳನ್ನು ಎತ್ತಿನ ಬಂಡಿಗಳಿಗೆ ತುಂಬಿಸಿ ಊರಿನ ಹೆಂಗಸರು ಗಂಡಸರು ನೆಂಟರಿಷ್ಟರನ್ನು ಬಂಡಿಗಳಿಗೆ ಹತ್ತಿಸಿ ಅವರನ್ನು ಕರೆದುಕೊಂಡು ಹೋಗುವುದನ್ನು ಕಾಣಬಹುದು. ಜೊತೆಗೆ ಮಲ್ಲಪ್ಪ ಕುದುರೆ ಸವಾರಿ ಮಾಡುತ್ತಾ ಹೋದರೆ ಕೆಲವು ಗಂಡಸರು ದೀವಟಿಗೆ ಹಿಡಿದು ರಾತ್ರಿಯಲ್ಲಿ ನಡೆದು ಬರುವುದನ್ನು ನೋಡಬಹುದು. ದೇವಿಯ ಜಾತ್ರೆಗೆ ಬಂದು ದೇವಿಯ ಹರಕೆ ಕುರಿ, ಕೋಳಿಗಳಿಗೆ ಗುಡಿಯ ಪೂಜರಪ್ಪನ ಕೈಯಲ್ಲಿ ತೀರ್ಥಹಾಕಿಸಿ ಅವುಗಳು ಮೈ ಒದರಿದಾಗ ಬಲಿಕೊಡುವುದನ್ನು ಕಾಣಬಹುದು. ನಂತರ ಕೋಳಿ ಕುರಿ ಖಂಡದ ಅಡಿಗೆಯನ್ನು ಮೀಸಲಿಂದ ಮಾಡಿ ದೇವರಿಗೆ ಸೀರೆ, ಕುಬಸ, ಉಡಕ್ಕಿ ಕೊಬ್ಬರಿ, ಅಡಿಕೆ, ಹೂವು ಅರಿಸಿನ ಕುಂಕುಮವನ್ನು ಮುತ್ತೈದೆಯರು ಎಡೆ ಹೊತ್ತು ಮಾಪುರ ದೇವಿಯ ಗರ್ಭಗುಡಿಗೆ ತೆಗೆದುಕೊಂಡು ದೇವಿಗೆ ಅರ್ಪಿಸಿ ಪೂಜೆ ಮಾಡಿಸುತ್ತಾರೆ.

ಮಾಪುರ ಜಾತ್ರೆಯಲ್ಲಿ ಹರಕೆ ಹೊತ್ತವರು ಹೆಣ್ಣು ಗಂಡುಗಳು ಬೆತ್ತಲೆಯಾಗಿ ಬೇವಿನ ಹುಟ್ಟಗೆ ಸುತ್ತು ದೇವಿಯ ಗುಡಿಯ ಸುತ್ತ ಬಂದು ಹರಕೆಯನ್ನು ತೀರಿಸುವುದು, ಜೊತೆಗೆ 'ಜೋಗಿಣಿ'ಯರನ್ನು ಪಟ್ಟಕ್ಕೆ ಹಾಕಿ ಅವಳಿಗೆ ನೆತ್ತಿಯ ಮೇಲೆ ಪರಡಿ ಹೊರಿಸುತ್ತಾರೆ.

ಮಾಪುರ ತಾಯಿಗೆ ನೈವೇದ್ಯ ಕೊಟ್ಟ ಮೇಲೆ ಬಂದ ಜನರಿಗೆ ಕುಡಿಯಲು ಸೇಂದಿಕೊಟ್ಟು, ಊಟಕ್ಕೆ ಕುಂತವರಿಗೆ ರೊಟ್ಟಿ, ಕುದಿಸಿದ ಮಾಂಸದ ಖಂಡಗಳನ್ನು ಹುಳಿ ಬಾನ ಹಾಗೂ ಸಾರನ್ನು ಬಿಟ್ಟು ಸಂತೋಷದಿಂದ ಊಟ ಮಾಡಿ ಕುಡಿದು ಕುಪ್ಪಳಿಸಿ, ಎಲ್ಲಾ ಜಾತಿಯವರೂ ಊಟವನ್ನು ಮಾಡಿ ದೇವಿಗೆ ನಮಿಸಿ ಹೋಗುವುದನ್ನು ಕಾಣಬಹುದು. ಇಲ್ಲಿ ಕೆಳಗೇರಿಯ ಜನಾಂಗದವರು ಆಚರಿಸುವ ಹಬ್ಬದಲ್ಲಿ ವಿಧವಿಧವಾದ ಸಾಂಸ್ಕೃತಿಕ, ಸಾಂಪ್ರದಾಯಿಕ ಪದ್ಧತಿಗಳನ್ನು ಕಾಣಬಹುದು.

ಶಿವಳ್ಳಿಯ ಹೋಳಿಹಬ್ಬ ಸುತ್ತಮುತ್ತಲ ಊರಿನಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಈ

ಹಬ್ಬದಲ್ಲಿ ಮಾದರಗೇರಿಯಲ್ಲಿ ಹಲಗೆಗಳನ್ನು ಬಾರಿಸುವುದು ಬಹಳ ವಿಶೇಷವಾಗಿತ್ತು. ""ಝುಡ್... ಝುಡ್... ನಕ್... ಪಂಗ... ಪಂಗನಕ್...."" ಅಂತ ಹಲಗೆ ಬಾರಿಸುತ್ತ ಕುಣಿಯುತ್ತ ಹಾಡುತ್ತಾ ಸಂತೋಷದಿಂದ ಕುಣಿಯುತ್ತಿದ್ದರು.

ಹೋಳಿ ಹಬ್ಬದಲ್ಲಿ ಕಾಮಣ್ಣನನ್ನು ಸುಟ್ಟಾಗ ಊರಿನ ಮಂದಿ ಕುಣಿಯುತ್ತಾ ಹಲಗೆ ಬಾರಿಸುತ್ತ ಬಾಯಿ ಬಡೆದುಕೊಳ್ಳುತ್ತ ಟೊಂಕದ ಕೆಳಗಿನ ಹಾಡುಗಳನ್ನು ಹಾಡಿ ಮೋಜನ್ನು ಮಾಡುತ್ತಿದ್ದರು.

ಮಾಪುರ ತಾಯಿಯ ಜಾತ್ರೆಗೆಂದು ಶಿವಳ್ಳಿಯ ಜನರು ಮನೆಯ ಗೋಡೆಗಳಿಗೆ ಬಣ್ಣ ಸುಣ್ಣವನ್ನು ಹಾಕುತ್ತಿದ್ದರು. ಆದರೆ ಡೊಡ್ಡಿ ಹೊಲೆ ಭರಮ್ಯಾ ಮತ್ತು ಮರಗಿಯರನ್ನು ತಡೆಯಲಾರದ ದುಃಖದ ಪರಿಸ್ಥಿತಿ ಆವರಿಸಿತ್ತು. ನೀಲವ್ವನನ್ನು ಜಾತ್ರೆಯಲ್ಲಿ ಜೋಗಿಣಿಗೆ ಬಿಡಬೇಕೆಂಬುದೇ ಅವರಲ್ಲಿದ್ದ ನೋವಿಗೆ ಕಾರಣವಾಗಿತ್ತು. ನೀಲವ್ವ ಗರತಿಯಾಗಿ ಮದುವೆಮಾಡಿಕೊಂಡು ಮುತ್ತೈದೆಯಾಗಬೇಕೆಂಬ ಆಸೆ ಅವರ ಬಾಳಿನಲ್ಲಿ ನಿರಾಸೆಯಾಗಿತ್ತು. ಮರಗಿ ತನ್ನ ಗಂಡನಿಗೆ ಕಾಯಿಲೆ ವಾಸಿಯಾಗಲು ದೇವಿಯ ಹತ್ತಿರ ಹೊತ್ತ ಕೆಟ್ಟ ಹರಿಕೆ ನೀಲವ್ವನ ಬಾಳಿಗೆ ಮೃತ್ಯುವಾಗಿ ಎರಗುತ್ತದೆ. ಹೀಗೆ ಕೆಳಗೇರಿಯ ದಲಿತ ಜನಾಂಗದವರಲ್ಲಿ ಇದ್ದ ಇಂಥ ಕೆಟ್ಟ ಹರಕೆಗಳಿಂದ ದಲಿತರ ಹೆಣ್ಣು ಮಕ್ಕಳು ಅಂಧಕಾರದ ಬದುಕಿನಲ್ಲಿ ಬಾಳುವಂತಾಗಿತ್ತು.

ಕಾರ ಹುಣ್ಣಿಮೆಯ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುವುದನ್ನು ನೋಡಬಹುದು. ಶಿವಳ್ಳಿಯ ರೈತರು ತಮ್ಮ ಪ್ರೀತಿಪಾತ್ರರಾದ ಎತ್ತುಗಳಿಗೆ ಬಣ್ಣ ಹಾಕಿ ಅಲಂಕಾರ ವಸ್ತ್ರಗಳಿಂದ ಶೃಂಗರಿಸಿ ಮೆರವಣಿಗೆ ಮಾಡಿ 'ಕರಿ' ಹಾಯಿಸುತ್ತಿದ್ದರು. ಹಾಗೆಯೇ ಮೊಹರಂ ಹಬ್ಬದಲ್ಲಿ ಹಿಂದು, ಮುಸಲ್ಮಾನರು ಬೇದವಿಲ್ಲದೆ ಆತ್ಮೀಯತೆಯಿಂದ ಆಚರಿಸುತ್ತಿದ್ದರು. ಮೊಹರಂನಲ್ಲಿ ನಿಂಬಾಜಿ ಪೀರರು ಹಾಗು ಖತಲ್ ಸಾಬ್ ದೇವರ ಅಲಾಯಿ ಕುಣಿತ ನೋಡುಗರ ಮನಸ್ಸನ್ನು ರಂಜಿಸುತ್ತಿದ್ದವು. ಹೀಗೆ ಗುಲ್ಬರ್ಗಾದ ಶರಣ ಬಸಪ್ಪನ ಜಾತ್ರೆಯ ವರ್ಣನೆಯನ್ನು, ಹಾಗೂ ನಾಗರ ಪಂಚಮಿಯ ವಿಶೇಷತೆಯನ್ನು ಲೇಖಕರು ಕಾದಂಬರಿಯಲ್ಲಿ ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ.

ಮಾಪುರ ತಾಯಿಯ ಜಾತ್ರೆಯಲ್ಲಿ ಗಂಡಸರು ಹೆಂಗಸರು ಅನ್ನುವ ಭೇದಭಾವವಿಲ್ಲದೆ ಬೆತ್ತಲೆಯಾಗಿ ತಲೆಯ ಮೇಲೆ ಆರತಿಯನ್ನು ಹೊತ್ತು ಬಾಯಿಯಲ್ಲಿ ಬೇವಿನ ಕಡ್ಡಿಯನ್ನ ಕಟ್ಟಿಕೊಂಡು ಬರಿಗಾಲಿನಿಂದ ದೇವಿಯ ಗುಡಿಯನ್ನು ಸುತ್ತುವುದು ಹಾಗು ಜಾತ್ರೆಯಲ್ಲಿ ದೇವಿಯ ಹರಕೆಗೆ ಬಂದಿದ್ದ ಕುರಿ, ಕೋಳಿಗಳನ್ನು ಬಲಿ ಕೊಡುವುದು, ಅಮಾಯಕ

ಹೆಣ್ಣುಗಳನ್ನು 'ಜೋಗಿಣಿ'ಗೆ ಬಿಟ್ಟು ಹೆತ್ತವರ ಹರಕೆಯನ್ನು ತೀರಿಸುವುದಕ್ಕೆ ಹೆಣ್ಣು ಮಕ್ಕಳನ್ನು ಬಲಿಕೊಡುವುದು, ಜೋಗಿಣಿಯಾದ ಹೆಣ್ಣು ಸಂಪ್ರದಾಯದಂತೆ ತಲೆಯ ಮೇಲೆ ಜರಡಿ ಬುಟ್ಟಿ ಹೊತ್ತು ಕೊರಳಲ್ಲಿ ಕವಡೆಸರ ಹಾಕ್ಕೊಂಡು, ಬಗಲಲ್ಲಿ ಚೌಡಕಿ ಹಿಡ್ಕೊಂಡು ಉಧೋ..... ಉಧೋ... ಅಂತ ದೇವಿಯ ಮೈಮಾದ ಹಾಡುಗಳನ್ನು ಹಾಡುತ್ತ ಮನೆಮನೆ, ಗಲ್ಲಿಗಳಲ್ಲಿ, ಸಂತೆ, ರಸ್ತೆಗಳಲ್ಲಿ ಬೇಡುವುದು, ಮೊದಲ ದಿನ ಹಣವುಳ್ಳವನು ಬಂಗಾರದ ಒಡವೆ, ಸೀರೆ ಕುಪ್ಪಸಕೊಟ್ಟು ಆ ಹೆಣ್ಣನ್ನು ಪಟ್ಟಕ್ಕೆ ಹಾಕಿಕೊಂಡು, ಆ ರಾತ್ರಿ ಅವಳ ಮೈಯ ಮೀಸಲು ಮುರಿಯುವುದು, ಮರು ದಿನದಿಂದ ಅವಳು 'ಜೋಗಿಣಿ'ಯಾಗಿ ತನ್ನ ಬದುಕಿನ ಕೊನೆಯವರೆಗೂ ಸೂಳೆಯಾಗಿ ಬದುಕಿ, ಸೂಳೆಯಾಗಿ ಸಾಯುವುದು, ಅವಳು ಸಾಯುವವರೆಗೆ ಮದುವೆ ಅನ್ನುವುದೇ ಇಲ್ಲದೆ, ಹುಟ್ಟುವ ಮಕ್ಕಳಿಗೆ ಅಪ್ಪನ ಹೆಸರೇ ಇಲ್ಲದಂತಾಗುವುದು ಜೋಗಿಣಿ ಸಂಪ್ರದಾಯದಲ್ಲಿನ ಅಮಾನುಷತೆಯನ್ನು ಸಾರುತ್ತದೆ.

ಕಾರ ಹುಣ್ಣಿಮೆ ಬಂದರೆ ಶಿವಳ್ಳಿಯಲ್ಲಿ ಹಬ್ಬವನ್ನು ಉತ್ಸಾಹದಿಂದ ಆಚರಿಸುತ್ತಿದ್ದರು. ಎತ್ತುಗಳಿಗೆ ಬಣ್ಣವನ್ನು ಹಾಕಿ ಸಿಂಗರಿಸಿ ಮೆರವಣಿಗೆಯಲ್ಲಿ ಆಳು ಮಕ್ಕಳು ಬಾಜಿಯೊಂದಿಗೆ ಗೌರವದಿಂದ ಹೋಗುವುದನ್ನು ಕಾಣಬಹುದು. ಗೌಡರ ಎತ್ತುಗಳು ಸೊಕ್ಕಿನಿಂದ ಮುಂದೆ ಹೋಗುವುದನ್ನು ನೋಡಲು ಊರಿನ ಎಲ್ಲಾ ಮಂದಿಯು ಸೇರಿ ಖುಷಿಯಿಂದ ಎತ್ತುಗಳು 'ಕರಿ' ಹಾಯವುದುನ್ನು ಕಣ್ಣರೆ ಕಂಡು ಸಂಭ್ರಮ ಪಡುತ್ತಿದ್ದರು. 'ಕರಿ' ಹಾಯುವ ವಿಶೇಷತೆಯೆಂದರೆ ಅಲ್ಲಿಯ ಜನರು ಎತ್ತುಗಳನ್ನು ಹಿಂದೂ ಧರ್ಮದ ದೇವರು ಎಂದು ನಂಬಿ ಅವುಗಳಿಗೆ ವರ್ಷಕ್ಕೊಮ್ಮೆ ಅವುಗಳನ್ನು ಚೆನ್ನಾಗಿ ಮೇಯಿಸಿ ಸಿಂಗರಿಸಿ. ಮೆರವಣಿಗೆಯ ಮುಖಾಂತರ 'ಕರಿ'ಯನ್ನು ಹಾಯಿಸಿ ಸಂತೋಷ ಪಡಿಸುವುದು ಅವರ ಸಂಸ್ಕೃತಿಯನ್ನು ತಿಳಿಸುತ್ತದೆ.

ಕಾರಹುಣ್ಣಿಮೆಯ ಕರಿಯ ಮರುದಿನವೇ ಮೊಹರಂ ಹಬ್ಬದ ಚಾಂದ ಕಾಣಿಸಿದನೆಂಬ ಸುದ್ದಿ ಶಿವಳ್ಳಿಯ ಮಸುದಿಗೆ ಬಂದಾಗ ಅಲ್ಲಿಯ ಜನರು ಉತ್ಸಾಹದಿಂದ ಖತಲ್ ಸಾಬ್ ಹುಸೇನಿ ಸಾಬ್, ಮತ್ತು ನಿಂಬಾಜಿ ಪೀರರ. ಖತಲ್ ಸಾಬ್ ದೇವರು ಮಲ್ಲಪ್ಪನ ಮನೆಯ ದೇವರಲ್ಲಿ ಒಬ್ಬನಾಗಿದ್ದ ಅವನಿಗೆ ಬಲಿತ ಹೋತವನ್ನು ಬಲಿಕೊಡುತ್ತಿದ್ದ ಪದ್ಧತಿಯ ಆಚರಣೆಯನ್ನು ಕಾಣಬಹುದು.

ಹಿಂದು ಮುಸ್ಲಿಂ ಹುಡುಗರೆಲ್ಲ ಒಂದೇ ತರದ ಬಟ್ಟೆಯನ್ನು ಹಾಕಿ ಹಸಿರು ಬಣ್ಣದ ಅಂಗಿ ತಲೆ ಮೇಲೆ ರುಮಾಲನ್ನು ಸುತ್ತಿಕೊಂಡು ಬಲಗೈಯಲ್ಲಿ ನಿಂಬೆ ಹಣ್ಣು ಚುಚ್ಚಿದ ತಲವಾರ, ಜಂಬಜೆ, ಚಾಕು ಹಿಡಿದುಕೊಂಡು ಅಲಾಯಿ ಕುಣಿಯುವುದು ನೋಡುಗರ ಮನಸ್ಸನ್ನು ರಂಜಿಸುತ್ತಿದ್ದವು. ಹೀಗೆ ಅಲ್ಲಿನ ಸಾಂಸ್ಕೃತಿಕ ವೈಭವವನ್ನು ಕಾಣಬಹುದು.

ಜಂಬಗಿಯ ಮುದಿ ಜೋಗಣಿ ನಿಂಬೆವ್ವಾಯಿ ಜೀವನದಲ್ಲಿ ಮಾಪುರ ತಾಯಿಯ ಜೋಗಿಣಿಯಾಗಿ ಜೀವನ ಕಷ್ಟಗಳಲ್ಲಿ ಬಾಳನ್ನು ಸವೆಸುತ್ತ ಬದುಕುವಾಗ ತುಳುಜಾಳ ಕರೆದು [೧೦]“ನೀ “ಜೋಗಿಣಿ ಆಗಾದು ಬ್ಯಾಡವ್ವೋ.....”,[೧೦] ಎಂದು ಹೇಳುತ್ತಾ ಕಣ್ಣೀರು ಹಾಕುತ್ತಾಳೆ ನಿಂಬೆವ್ವಾಯಿ. ಜೋಗಿಣಿ ಎಂಬ ಸಂಪ್ರದಾಯ ಸುಳ್ಳು ಮಾಪುರ ತಾಯಿ ಹೆಣ್ಣು ದೇವತೆ ಆ ಹೆಣ್ಣು ದೇವತೆ ಹೆಣ್ಣು ಮಕ್ಕಳನ್ನು ಜೋಗಿಣಿ ಆಗೂ ಅಂತ ಯಾವ ದೇವರುಗಳು ಹೇಳುವುದಿಲ್ಲ. ಮೇಲ್ವರ್ಗದ ಹೆಣ್ಣು ಮಕ್ಕಳು ಗರತಿಯಾಗಿ ಒಬ್ಬ ಗಂಡನ ಜೊತೆ ಬಾಳ್ವೆ ಮಾಡುತ್ತಾರೆ. ಆದರೆ ಈ ಕೆಳವರ್ಗದ ದಲಿತ ಹೆಣ್ಣು ಮಕ್ಕಳು ಜೋಗಿಣಿ ಎಂಬ ಸಂಪ್ರದಾಯಕ್ಕೆ ಬಲಿಯಾಗಬೇಕಾಗುತ್ತದೆ.

ಮಾಪುರ ತಾಯಿಯ ಪೂಜರಪ್ಪನಿಗೆ ಊರಗೌಡ, ಕುಕ್ಕಣ್ಣಿ, ಶೆಟ್ಟಿ, ಸಾವುಕಾರ ಕೊಟ್ಟ ಸೇಂದಿ ಆಸೆಗೆ ಬಿದ್ದು ಅವರು ಹೇಳಿದ ಹಾಗೆ ಕೇಳಿ ಅವನು ಮೈಮೇಲೆ ದೇವರು ಬಂದ ಹಾಗೆ ನಟಿಸಿ ನಮ್ಮ ಕೆಳಗೇರಿ ಹೆಣ್ಣು ಮಕ್ಕಳನ್ನು ಜೋಗಿಣಿ ಮಾಡಿಸಿ ಮೇಲ್ವರ್ಗದವರು ನಮ್ಮ ದೇಹದ ಸುಖವನ್ನು ಅನುಭವಿಸಿ ಇತರರು ದೇವರ ಹೆಸರಿನಲ್ಲಿ ಬಂದ ಗಂಡಸರಿಗೆಲ್ಲ ದೈಹಿಕವಾಗಿ ಬಲಿಯಾಗುವುದನ್ನು ಕಾಣಬಹುದು.

ಬದುಕು ಕಾದಂಬರಿಯಲ್ಲಿ ಮೇಲ್ವರ್ಗಗಳ ಕ್ರೌರ್ಯಕ್ಕೆ ಬಲಿಯಾಗುವ ನೀಲವ್ವ, ತುಳಜವ್ವ ಇವರು ಸಮಾಜದಲ್ಲಿನ ಮೂಢನಂಬಿಕೆಗಳ ಆಚರಣೆಗಳಲ್ಲಿನ ಜೋಗಿಣಿ ಸಂಪ್ರದಾಯಕ್ಕೆ ಒಳಗಾಗಿದ್ದರೂ. ಅವರು ಜೋಗಿಣಿ ಪದ್ಧತಿಯ ವಿರುದ್ಧ ಪ್ರತಿಭಟಿಸಿ ನಿಲ್ಲುತ್ತಾರೆ.

ನೀಲವ್ವ ದೊಡ್ಡಿ ಹೊಲ್ಯಾ, ಭರಮ್ಯಾ, ಮತ್ತು ಮರಗವ್ವನ ಮಗಳು ಅವಳು 'ಜೋಗಿಣಿ' ಆಗಲು ಒಪ್ಪದೆ, ಗರತಿಯಾಗಿ ಬಾಳ್ವೆ ಮಾಡುತ್ತೇನೆ ಎಂದು ಕರುಳುಹಿಂಡುವಂತೆ ಗೋಳಾಡಿದರೂ, ಅವಳನ್ನು ಮಾಪುರ ತಾಯಿಯ ಹೆಸರಿನಲ್ಲಿ ಜೋಗಿಣಿ ಮಾಡುತ್ತಾರೆ. ಮುಂದೆ ಅವಳ ಬಾಳು ನರಕಯಾತನೆ ಆಗಿ ಬದುಕಲು ಆಗದ ಸಂದರ್ಭದಲ್ಲಿ ಮಾನಸಿಕವಾಗಿನೊಂದು ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಈ ಜೋಗಿಣಿ ಪದ್ಧತಿ ದಲಿತರಲ್ಲಿ ಮಾತ್ರ ಹೆಚ್ಚಾಗಿ ಕಂಡುಬರುತ್ತದೆ ಆದರೆ ಇದು ಮೇಲ್ವರ್ಗದ ಸ್ತ್ರೀಯರಲ್ಲಿ ಕಂಡುಬರುವುದಿಲ್ಲ. ತುಳಜವ್ವಳು ಜೋಗಿಣಿಯಾಗುವುದನ್ನು ಬಿಟ್ಟು ಹುಸೇನಪ್ಪನನ್ನು ಲಗ್ನ ಆಗಿ ಮುಂಬೈ ಪಟ್ಟಣದಲ್ಲಿ ವಾಸವಾಗಿದ್ದು. ಒಂದು ಗಂಡು ಮಗುವಿನ ಜೊತೆ ಊರಿಗೆ ಬಂದಾಗ ಪೂಜರಪ್ಪ ಊರಿನಲ್ಲಿ ಪಂಚಾಯಿತಿ ಮಾಡಿಸಿ ದಂಡವನ್ನು ಹಾಕಿ ಮತ್ತೆ ಜೋಗಿಣಿ ಆಗಬೇಕು ಎಂದು ತೀರ್ಮಾನ ಮಾಡಿದಾಗ ದಂಡವನ್ನು ಕಟ್ಟದೆ ಜೋಗಿಣಿ ಸಂಪ್ರದಾಯದ ವಿರುದ್ಧ ಸಿಡಿದೆದ್ದು ಅವ್ವ ಅಪ್ಪನನ್ನ ಜೊತೆಯಲ್ಲಿ ಕರೆದುಕೊಂಡು ಊರು

ಬಿಟ್ಟು ಹೊರಡುತ್ತಾಳೆ. ಈ ಜೋಗಿಣಿ ಎಂಬ ಅನಿಷ್ಟ ಪಿಡುಗನ್ನು ಧಿಕ್ಕರಿಸಿ ಹೊರಟು ಹೋಗುವುದು, ಬದುಕು ಕಾದಂಬರಿಯಲ್ಲಿನ ಇತರ ಹೆಣ್ಣುಗಳಿಗೆ ಮಾದರಿಯಾಗಿ ನಿಲ್ಲುತ್ತಾರೆ.

ಜೋಗಿಣಿಯರ ಬದುಕು ಹರೆಯದರಲ್ಲಿ ಮೋಜಿನಿಂದ ಕಳೆಯುತ್ತದೆ ಯಾವಾಗ ಹರೆಯ ಕುಸಿದಾಗ ಅವಳ ಗುಡಿಸಲಿಗೆ ಬರುವ ಜನರು ಕಮ್ಮಿ ಆಗುತ್ತಾರೆ. ಜೋಗಿಣಿ ಮಾಡಿದ ಮಂದಿ ಯಾರೂ ಇವಳಿಗೆ ಸಹಾಯ ಮಾಡಲು ಬರುವುದಿಲ್ಲ. ಇವಳಿಗೆ ಯಾವ ಆಸ್ತಿ ಇರುವುದಿಲ್ಲ. ಇವಳು ಯಾವಾಗ ಜೋಗಿಣಿ ಎಂಬ ಅನಿಷ್ಠ ಪಟ್ಟಕ್ಕೆ ಬಿದ್ದಾಗ ಅವಳ ಬಾಳು ನರಕ ಯಾತನೆ ಆಗುತ್ತದೆ. ಜೋಗಿಣಿಯಾದ ಮೇಲೆ ಹಗಲಲ್ಲಿ ತಲೆ ಮೇಲೆ ದೇವಿಯ ಪರಡಿ, ಅಗಲವಾದ ಬುಟ್ಟಿ, ಕೊರಳಲ್ಲಿ ಕವಡೆ ಸರ, ದೇವಿಯ ಪಾದದ ಬೆಳ್ಳಿ ಪದಕಗಳನ್ನು ಹಾಕಿಕೊಂಡು ಚಾಡಕಿ ಬಾರಿಸುತ್ತಾ ದೇವಿಯ ಹಾಡನ್ನು ಹಾಡುತ್ತಾ ಊರೂರು ಸುತ್ತಿ ಭಿಕ್ಷೆ ಬೇಡುತ್ತ ಜೀವನ ಸಾಗಿಸ ಬೇಕಾಗುತ್ತದೆ. ರಾತ್ರಿಯಲ್ಲಿ ದೇವರ ಹೆಸರಲ್ಲಿ ಬರುವರಿಗೆ ಸೆರಗು ಹಾಸುತ್ತ ಸೂಳೆಯಾಗಿ ಬದುಕಬೇಕಾಗುತ್ತದೆ. ಮುಂದೆ ವಯಸ್ಸಾಗಿ ಮುದಿ ಜೋಗಿಣಿಯಾದಾಗ ಇವಳ ಬದುಕು ದುರಂತಮಯವಾಗಿರುತ್ತದೆ.

ದಲಿತರ ಕುಡಿತದ ಚಟದಿಂದ ಮನೆಯ ಸಂಸಾರ ಹಾಗು ವೈಯಕ್ತಿಕ ಬದುಕು ಹಾಳಾಗುವುದನ್ನು ಕಾಣಬಹುದು. ಡಾ. ಗೀತಾರವರು ಮುಕ್ಯಾನ ಪ್ರಸಂಗವನ್ನು ಪ್ರಸ್ತಾಪಿಸುತ್ತಾರೆ. ಮುಕ್ಯಾ ಹುಟ್ಟು ಕುಡುಕ ದಿನಕ್ಕೆ ಎರಡು ಬಾರಿ ಹಸ್ತ ಮೈಥುನ ಮಾಡಿಕೊಂಡು ಹೊರ ಹೋಗಿಳ ಮೈನೆಕ್ಕಲು ಕೈಯಲ್ಲಿ ರೊಕ್ಕವಿಲ್ಲದ ವಿಕೃತಕಾಮಿಯಾಗಿದ್ದ ಅವನು ಕಲ್ಲವ್ವನಿಗೆ ನಿತ್ಯ ಬಸಿರಾಗುವಂತೆ ಮಾಡುತ್ತಿದ್ದ ಇತರ ಊರಿನ ಮಂದಿ ಆಡಿಕೊಳ್ಳುವ ಹಾಗೆ ಮಾಡುತ್ತಿದ್ದ. ಕಲ್ಲವ್ವನ ಬದುಕು ನಿತ್ಯ ಕಣ್ಣೀರಿನಲ್ಲಿ ಸಾಗುತ್ತಿತ್ತು. ಅವನ ಅತಿ ಕಾಮುಕತನದ ಹೊಡತಗಳನ್ನು ಸಹಿಸಿಕೊಂಡು ಬದುಕುವ ಕಲ್ಲವ್ವ ವರ್ಷಕ್ಕೊಂದರಂತೆ ಆರು ಮಕ್ಕಳನ್ನು ಹೆತ್ತು ರಕ್ತವಿಲ್ಲದಂತೆ ಕೃಶಳಾಗಿದ್ದಳು. ಮೂಕ್ಯಾ ಕುಡುಕ ಹಾಗು ಮೈಗಳ್ಳ. ಯಾವ ಕೆಲಸವನ್ನು ಮಾಡದೆ ಕಲ್ಲವ್ವನೇ ಕೂಲಿ ಮಾಡಿ ಸಂಸಾರ ಸಾಕಬೇಕು, ಆದರೆ ಮೂಕ್ಯ ರಾತ್ರಿ ಕುಡಿದು ತುಂಬು ಗರ್ಭಿಣಿಯಾಗಿದ್ದ ಕಲ್ಲವ್ವನಿಗೆ ಕಾಮಪಿಶಾಚಿಯಂತೆ ಎರಗಿದಾಗ ಅವಳು ಗೋಳಾಡಿದರೂ ಎಷ್ಟು ಹೇಳಿದರೂ ಕೇಳದ ಮೂಕ್ಯಾ ತನ್ನ ಕಾಮದಾಹ ತೀರಿಸಿಕೊಳ್ಳಲು ತನ್ನ ಹೆಂಡತಿಯನ್ನೆ ಬಲಿ ತೆಗೆದುಕೊಳ್ಳುತ್ತಾನೆ. ಕಲ್ಲವ್ವನ ಬದುಕು ಅಂತ್ಯವಾಗಿ ಮಕ್ಕಳು ಅನಾಥರಾಗುತ್ತಾರೆ. ಮೂಕ್ಯ ಜೈಲನ್ನು ಸೇರುತ್ತಾನೆ.

ಜಮಾದಾರ ಮಲ್ಲಪ್ಪ ಬೆಳ್ಳಿಯನ್ನು ಸೊಸೆ ಮಾಡಿಕೊಳ್ಳಲು ತೀರ್ಮಾನ ಮಾಡುತ್ತಾನೆ. ಈ ವಿಷಯವನ್ನು ಬೆಳ್ಳಿ ಮೈನೆರೆದಾಗ ಅವನ ಸಂಬಂಧಿಕರು ಸೇರಿ ವಿಷಯವನ್ನು

ಪ್ರಸ್ತಾಪಿಸಿ ಹಾಲಪ್ಪನನ್ನು ಒಪ್ಪಿಸುತ್ತಾರೆ. ಮುಪ್ಪಿನ ಕಾಲದಲ್ಲಿ ಮೊಮ್ಮಗಳಾದ ಬೆಳ್ಳಿ ನಮಗೆ ಆಸರೆಯಾಗಿ ನಿಲ್ಲುತ್ತಾಳೆ ಎಂಬುದು ಮಲ್ಲಪ್ಪನ ಬಯಕೆಯಾಗಿರುತ್ತದೆ. ಜಮಾದಾರ ಮಲ್ಲಪ್ಪ ಇಲಕಲ್ ಸೀರೆ ಕುಪ್ಪಸ ತಂದು ಬೆಳ್ಳಿಗೆ ಉಡಿಸಿ 'ಗಟ್ಟಿ' ಮಾಡಿಸುತ್ತಾರೆ. ಮಲ್ಲವ್ವ ಬಂಗಾರದ ಹೊನ್ನುಂಗುರ. ಗುಂಡಿನ ಸರವನ್ನು ಹಾಕುತ್ತಾಳೆ. ಹೀಗೆ ಬೆಳ್ಳಿ ಮತ್ತು ಕಲ್ಯಾಣಿಯ ಮದುವೆಯನ್ನು ಐದು ದಿನಗಳವರೆಗೆ ಊರಿನ ಮಂದಿ ಮೆಚ್ಚುವಂತೆ ಬಹಳ ವೈಭವದಿಂದ ಮಾಡುತ್ತಾನೆ.

ಜಮಾದಾರ ಮಲ್ಲಪ್ಪನ ಸಾವಿನ ನಂತರ ಕಲ್ಯಾಣಿಯ ಬದುಕಿನಲ್ಲಿ ಅನೇಕ ಕಷ್ಟಗಳು ಕಾಣಿಸಿಕೊಳ್ಳುತ್ತವೆ. ಜಂಬಗಿಯ ಮುಕಡಪ್ಪ ಸೇಂದಿ ಅಂಗಡಿಯಲ್ಲಿ ಕಾಶಮ್ಮನ ಬಗ್ಗೆ ಲಘುವಾಗಿ ಮಾತಡಿದ್ದನ್ನು ಕೇಳಿ ಕೋಪ ತಾಳಲಾರದೆ ಮುಕಡಪ್ಪನನ್ನು ದಬ್ಬಿದಾಗ ಅವನಿಗೆ ಕಲ್ಲು ತಲೆಗೆ ಹೊಡೆದು ಸಾಯುತ್ತಾನೆ ಮುಂದೆ ಕಲ್ಯಾಣಿಯನ್ನು ಗುಲ್ಬರ್ಗಾದಿಂದ ಪೋಲಿಸರು ಬಂದು ಎಳೆದುಕೊಂಡು ಹೋಗುವಾಗ ಕಲ್ಯಾಣಿ ನನ್ನದು ತಪ್ಪಿಲ್ಲ ಎಂದು ಬೇಡಿಕೊಂಡರು ಅವನನ್ನು ಠಾಣೆಗೆ ಎಳೆದೊಯ್ಯುವುದನ್ನು ಕಂಡು ಬೆಳ್ಳಿ ಓಡುತ್ತಾ ಬಂದು ಅಳುತ್ತ ತನ್ನ ಮಗುವನ್ನು ಪೋಲಿಸರ ಮುಂದೆ ಇಟ್ಟು ನನ್ನ ಗಂಡನನ್ನು ಕರೆದುಕೊಂಡು ಹೋಗಬೇಡಿ ಅವರು ಕೊಲೆ ಮಾಡಿಲ್ಲ ಎಂದು ಪೋಲಿಸರ ಕಾಲನ್ನು ಹಿಡಿದು ಬೇಡಿಕೊಂಡರೂ ಅವರು ನಿನ್ನ ಗಂಡನನ್ನು ವಕೀಲರಿಂದ ವಾದ ಮಾಡಿಸಿ ಬಿಡಿಸಿಕೊ ಎಂದು ಹೇಳಿ ಕರೆದುಕೊಂಡು ಹೊರಟಾಗ ಜಮಾದಾರ ಮಲ್ಲಪ್ಪನ ಕುಟುಂಬ ದುಃಖದ ಮಡುವಿನಲ್ಲಿ ಮುಳುಗುತ್ತದೆ. ಮುಂದೆ ಕಲ್ಯಾಣಿಗೆ ಹದಿನಾಲ್ಕು ವರ್ಷ ಸಜೆ ಆಗುತ್ತದೆ. ಮಲ್ಲವ್ವ ಇದನ್ನು ಕಂಡು ಸಂಕಟದಿಂದ ಕೊರಗುತ್ತಾಳೆ. ಕಲ್ಯಾಣಿ ಜೈಲಿಗೆ ಹೋಗಲು ಹಾಗೂ ಜಮಾದಾರ ಮಲ್ಲಪ್ಪ ಹೊಳಗೆ ಬಿದ್ದು ಸಾಯಲು, ಕಾಶಮ್ಮ ಗಂಡನನ್ನು ಬಿಟ್ಟು ಲಿಂಗರಾಜನ ತೋಟವನ್ನು ಸೇರಿದ್ದೇ ಕಾರಣವಾಗುತ್ತದೆ. ಹೀಗೆ ಜಮಾದಾರ ಮಲ್ಲಪ್ಪನ ಕುಟುಂಬ ಅನೇಕ ಕಷ್ಟಗಳಿಗೆ ಗುರಿಯಾಗುತ್ತದೆ. ಕಲ್ಯಾಣಿಗೆ ಹದಿನಾಲ್ಕು ವರ್ಷ ಸಜೆ ಅನುಭವಿಸುವುದು ಬೆಳ್ಳಿ ಮಲ್ಲವ್ವ ಮತ್ತು ಮಕ್ಕಳು ಅನೇಕ ಕಷ್ಟಗಳಿಗೆ ಗುರಿಯಾಗುತ್ತಾರೆ. ಮುಂದೆ ಮಲ್ಲವ್ವನಿಗೆ ಮಾದಗಕಳಸ್ಸ ದೆವ್ವವಾಗಿ ಕಾಡುತ್ತಿರುವಾಗ ಕಲ್ಯಾಣಿ ಮತ್ತು ಫತರೂ ಮಲ್ಲವ್ವನನ್ನು ಜಂಬಗಿ ಅಂಬಾಭಾವಾನಿ ದೇವಿಗೆ ಕಾಯಿ ಕರ್ಪೂರ ಹೂವನ್ನು ಕೊಟ್ಟು ದೇವಿಯ ಪೂಜೆ ಮಾಡಿಸುತ್ತಾನೆ. ಅಮಾವಾಸ್ಯೆಯ ವಿಶೇಷ ಅಲಂಕಾರದಿಂದ ದೇವಿಯನ್ನು ಶೃಂಗರಿಸಿದರೂ ದೇವಿಯ ಪೂಜೆ ನಡೆಯುತ್ತಿರುವಾಗ ಮನುಷ್ಯನ ಮೇಲೆ ದೇವರು ಬಂದು ಅಲ್ಲಿ ನೆರದಿದ್ದ ಜನಕ್ಕೆ, ಪ್ರಶ್ನೆಗೆ ಹೇಳಿಕೆಯನ್ನು ಕೊಟ್ಟು ಜನರ ಕಷ್ಟವನ್ನು ಪರಿಹರಿಸುತ್ತಿರುವುದು ಕಾಣಿಸುತ್ತದೆ.

ಅದೇ ಸಮಯದಲ್ಲಿ ಮಲ್ಲಪ್ಪನೂ ದೇವಿಗೆ ಪ್ರಶ್ನೆ ಕೇಳಿ ನಿಂಬೆಹಣ್ಣು, ಭಂಡಾರ ಪಡೆಯುತ್ತಾನೆ. ಇಂಥಲ್ಲೆಲ್ಲ ಜನರು ದೇವರ ಮೇಲೆ ಇರುವ ನಂಬಿಕೆ ಭಕ್ತಿಭಯ ಗೋಚರಿಸುತ್ತವೆ.

ಬೆಳ್ಳಿಗೆ ಈರವ್ವ ಒಂದು ಚೊಚ್ಚಲ ಹೆರಿಗೆಯನ್ನು ಮಾಡಿಸಿ ಗಂಡು ಮಗುವಿಗೆ ಜನ್ಮ ಕೊಡುವಂತೆ ಮಾಡುತ್ತಾಳೆ. ಜಮಾದಾರ ಮಲ್ಲಪ್ಪನೇ ಮತ್ತೆ ಹುಟ್ಟಿ ಬಂದನು ಎಂಬುದು ಅವರ ನಂಬಿಕೆಯಾಗಿರುತ್ತದೆ. ಈರವ್ವ ಕೂಸಿನ ಹೊಕ್ಕಳ ಬಳ್ಳಿ ಕತ್ತರಿಸಿ ಮಾಸನ್ನು ಹೊರತೆಗೆದು ಅಚ್ಚಾಕಟ್ಟಾಗಿ ಸೂಲಗಿತ್ತಿ ನಿರ್ವಹಿಸುತ್ತಾಳೆ.

ಮಲ್ಲವ್ವ ಮೊಮ್ಮಗ ಹುಟ್ಟಿದನ್ನು ಕೇಳಿ ಆರೋಗ್ಯದಲ್ಲಿ ಸ್ವಲ್ಪ ಚೇತರಿಕೆ ಕಂಡರೂ ಮಲ್ಲಪ್ಪನ ಸಾವು ಹಾಗು ಕಾಶಮ್ಮನ ನಡತೆಯಿಂದ ನೊಂದ ಮನಸ್ಸಿಗೆ ಸಮಾಧಾನ ಸಾಧ್ಯವಾಗುವುದಿಲ್ಲ.

ಕಲ್ಯಾಣಿ ಮಗು ಹುಟ್ಟಿದ ಮೇಲೆ ಮನೆಗೆ ಬರುವುದನ್ನು ಬಿಟ್ಟು ಸೇಂದಿ. ಕುಡಿಯುವುದು ಹಾಗೂ ಮುದಿ ಜೋಗಿಣಿ ಅಂಬವ್ವನ ಮಗಳು ಚಂದ್ರಿಯ ಜೊತೆ ಸೇರುವುದು. ಹೀಗೆ ಕೆಟ್ಟ ಅಭ್ಯಾಸಗಳನ್ನು ಮಾಡಿಕೊಂಡಿರುವುದರ ಬಗ್ಗೆ ಶಾಣಮ್ಮ ಕಣ್ಣೀರು ಹಾಕುವುದನ್ನು ತಿಳಿಯಬಹುದು. ಆದರೆ ಆ ಜನಾಂಗದವರಿಗೆ ಕುಡಿತ–ಕಾಮ ಎಂಬುದು ಪೂರ್ವಿಕರಿಂದ ಬಂದ ಬಳುವಳಿಯೇ ಆಗಿದೆ. ಬೆಳ್ಳಿಗೆ ಬಾಣಂತನ ಮುಗಿದ ಮೇಲೆ ಕಲ್ಯಾಣಿಯು ಜೋಗಿಣಿಯರ ಸಹವಾಸವನ್ನು ಬಿಟ್ಟು, ಬೆಳ್ಳಿಯ ಜೊತೆ ಆನಂದದಿಂದ ಕಳೆಯುತ್ತಾನೆ.

ಮಲ್ಲವ್ವನಿಗೆ ಮತ್ತೆ ಮುಕಡಪ್ಪ ದೆವ್ವವಾಗಿ ಕಾಡುತ್ತಾನೆ. ಅವನು ಅವಳ ಮೇಲೆ ಬಂದು ನಿನ್ನ ಮಗ ನನ್ನ ಕೊಲೆ ಮಾಡಿದ್ದಾನೆ ನಾನು ಹಸಿವಿನಿಂದ ಸತ್ತಿದ್ದೇನೆ ನನಗೆ ಕೋಳಿ ಪಲ್ಲ್ಯಾ, ಗೋಧಿ ರೊಟ್ಟಿ, ಲಿಂಬಿಕಾಯಿ ಬಾಳಕಾಯಿ, ಅರಿಶಿಣ, ಕರಿಮಸಿ, ಕೆಂಪು ಬಣಲಿಯಲ್ಲಿಟ್ಟು ನಾಕುರು ಸೀರುವ ಮಧ್ಯದಲ್ಲಿ ಇಡಿ ನಾನು ಹೊಟ್ಟೆ ತುಂಬ ಊಟಮಾಡಿ ನಿನ್ನನ್ನು ಬಿಟ್ಟು ಹೋಗುತ್ತೇನೆ. ಇಲ್ಲವಾದರೆ ನಿನ್ನ ಜೀವ ತಗೊಂಡು ಹೋಗುತ್ತೇನೆ ಎಂದು ಹೇಳಿದ್ದನ್ನು ಮಲ್ಲವ್ವ ಹೇಳಿದಾಗ ಫತರೂ ಎರಡು ದೆವ್ವಗಳು ಸೇರಿಕೊಂಡಿವೆ ಎಂಬುದನ್ನು ನಂಬಿ ಮುಕಡಪ್ಪ ಕೇಳಿದ ಆಹಾರವನ್ನು ಮಾಡಿಸಿ ಮಲ್ಲವ್ವನಿಗೆ ಮುಖದಿಂದ ಪಾದದವರೆಗೆ ಇಳಿತಗಿದು ದೆವ್ವವನ್ನು ಸಾಗಹಾಕುತ್ತಾನೆ.

ಮಲ್ಲವ್ವ ತನ್ನ ಬದುಕಿನಲ್ಲಿ ಪ್ರತಿಕ್ಷಣವೂ ಕಲ್ಯಾಣಿಯ ಯೋಚನೆ, ಮಲ್ಲಪ್ಪ ನೆನಪು, ಕಾಶಮ್ಮನು ಮಾಡಿದ ಮೋಸ ಹಾಗು ದೆವ್ವಗಳ ಕಾಟ ಇವುಗಳಿಂದ ಮನನೊಂದು ಸಾಯುತ್ತಾಳೆ. ಬೆಳ್ಳಿಯ ಬದುಕು ಇನ್ನಷ್ಟು ಜಟಿಲಗೊಳ್ಳುತ್ತದೆ.

ಗರ್ಭಿಣಿಯಾದ ಬೆಳ್ಳಿಗೆ ಆರು ತಿಂಗಳು ತುಂಬಿ ಏಳು ತಿಂಗಳು ನಡೆದಾಗ ಅವರ ಬಂಧು ಬಳಗದವರು ಕುಪ್ಪಸವನ್ನು ಕೊಡುವ ಪದ್ದತಿ ಹಾಗೂ ತವರು ಮನೆಯಿಂದ ಹಸಿರು ಸೀರೆ, ಹಸಿರು ಕುಪ್ಪಸ, ಹಸಿರು ಬಳೆ, ತಿಂಡಿ ಪದಾರ್ಥಗಳನ್ನು ಕೊಟ್ಟು ಅವಳ ಬಯಕೆಯನ್ನು ತೀರಿಸುತ್ತಾರೆ. ಕೆಳಗೇರಿಯ ಎಲ್ಲಾ ಮನೆಯವರು ಬೆಳ್ಳಿಗೆ ವಿಧವಿಧವಾದ ಅಡುಗೆಯನ್ನು ಮಾಡಿ ಕೊಡುತ್ತಿದ್ದರು. ಜೊತೆಗೆ ಬನದಿಂದ 'ನೀರಾ' ತಂದು ಕುಡಿಸುತ್ತಾರೆ. ನೀರಾ ಕುಡಿಯುವುದರಿಂದ ಮಗು ಬೆಳ್ಳಗೆ ಹುಟ್ಟುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು.

ಕಲ್ಯಾಣಿ ಜೈಲಿಗೆ ಹೋದ ಮೇಲೆ ಬೆಳ್ಳಿ ಮತ್ತು ಮಲ್ಲವ್ವ ಇಬ್ಬರು ಜಮಾದಾರನ ಮನೆಯಲ್ಲಿ ಸಂಸಾರ ಮಾಡುವುದು ಬಹಳ ಕಷ್ಟದಿಂದ ಕೂಡಿರುತ್ತದೆ. ಜಮಾದಾರನ ಮನೆಯಲ್ಲಿ ತುಂಬಿ ತುಳುಕುತ್ತಿದ್ದ. ದವಸ ದಾನ್ಯಗಳು, ಮಲ್ಲಪ್ಪನ ಸಾವಿನ ನಂತರ ಕಣ್ಮರೆಯಾಗಿ ಒಂದು ಹೊತ್ತಿನ ಊಟಕ್ಕೂ ಸಮಸ್ಯೆ ಉಂಟಾಗಿ ಬದುಕು ಕಷ್ಟದಿಂದ ಕೂಡಿದ್ದು ಬೆಳ್ಳಿಯ ಜೀವನವನ್ನು ಧೈರ್ಯದಿಂದ ಎದುರಿಸಿದರು. ಹೆದರಿಕೆ ಆತಂಕ ಅವಳ ಮನದಲ್ಲಿರುವುದನ್ನು ಕಾಣಬಹುದು.

ಬಡತನದಲ್ಲಿ ಬದುಕನ್ನು ಸಾಗುವ ಬೆಳ್ಳಿಗೆ, ಹಗಲು–ರಾತ್ರಿ ಸಂಸಾರದ ಯೋಚನೆ ಮತ್ತು ಕಲ್ಯಾಣಿ ಇಲ್ಲದ ಬದುಕು, ಮಲ್ಲಪ್ಪ ಜಮಾದಾರನ ಸಾವು, ಕಶಾಮ್ಮನ ಅಪಮಾನ, ಇವೆಲ್ಲವು ಅವಳ ಮನಸ್ಸಿನಲ್ಲಿ ಬಂದು ನಿದ್ರೆಯಿಲ್ಲದೆ ಕೊರಗುತ್ತಾ ನೋವಿನ ಜೀವನವನ್ನು ಸಾಗಿಸುತ್ತಾಳೆ.

ಬಾಣಂತಿಯಾಗಿದ್ದರು ಮಗುವನ್ನು ಬೆಳ್ಳಿ ಒಂದು ತಿಂಗಳು ತಂದು ತೋಟದಲ್ಲಿ ಬುಟ್ಟಿಯ ಒಳಗೆ ಮಲಗಿಸಿ, ಜೋಳವನ್ನು ಕೊಯ್ಯಲು ಆಳುಗಳ ಜೊತೆ ಸೇರಿ, ದುಡಿಯವುದನ್ನು ಕಾಣಬಹುದು ಬೆಳ್ಳಿ ಆಳಿಗೆ ದಿನಕ್ಕೆ ನಾಲ್ಕು ಸೇರು ಜೋಳ ಕೊಡುವ ಸಾಮಾರ್ಥ್ಯ ಇಲ್ಲವಾದ್ದರಿಂದ ಸ್ವತಃ ಬೆಳ್ಳಯೆ ತಾನು ಬಾಣಂತಿ ಎಂಬುದನ್ನು ಮರೆತು. ತೋಟದ ಕೆಲಸದಲ್ಲಿ ಮಗ್ನಳಾಗುತ್ತಾಳೆ ಇದನ್ನು ಕಂಡ ಫತರೂ ಮತ್ತು ನಿಜಾಮರು ನೊಂದು ಕಣ್ಣೀರಾಕುತ್ತಾರೆ. ಬೆಳ್ಳಿಯನ್ನು ಮನೆಗೆ ಕಳಿಸಲು ಪ್ರಯತ್ನಪಟ್ಟರು ಅದು ಸಾಧ್ಯವಾಗದೇ ಅವಳು ತನ್ನ ತೋಟದ ಕೆಲಸವನ್ನು ತಾನೇ ಮಾಡಬೇಕೆಂಬುದೆ ಅವಳ ಉದ್ದೇಶವಾಗಿರುತ್ತದೆ.

ಕಲ್ಯಾಣಿಗೆ ಹದಿನಾಲ್ಕು ವರ್ಷ ಸಜೆ ಎಂದು ತಿಳಿದಾಗ ಬೆಳ್ಳಿಯ ಕುಟುಂಬವು ದುಃಖದ ಮಡುವಿನಲ್ಲಿ ಸಿಲುಕಿಕೊಂಡರು ಅದನ್ನು ಧೈರ್ಯದಿಂದ ಸಹಿಸಿಕೊಂಡು ಬೆಳ್ಳಿ ಮಲ್ಲವ್ವ

ಮತ್ತು ಮಕ್ಕಳನ್ನು ಸಾಕುತ್ತಾಳೆ. ನಿಜಾಮ, ಫತರೂ ಹಾಗೂ ಹಾಲಪ್ಪ ಶಾಣಮ್ಮರು ಬೆಳ್ಳಿಯ ಸಂಸಾರಕ್ಕೆ ಆಸರೆಯಾಗಿ ನಿಂತು ಜೊತೆಗೆ ಕಲ್ಯಾಣಿಯನ್ನು ಜೈಲಿನಿಂದ ಬಿಡಿಸಲು ಸಹಕಾರಿಯಾಗಿರುವುದನ್ನು ಕಾಣಬಹುದು.

ಕಲ್ಯಾಣಿಯನ್ನು ನೋಡಲು ಬೆಳ್ಳಿ ಕಲ್ಬುರ್ಗಿ ಜೈಲಿಗೆ ಹೋಗಿ ಅವನ ಯೋಗಕ್ಷೇಮವನ್ನು ವಿಚಾರಿಸಲು ಹೋದಾಗ, ಅವನ ರೂಪವೇ ಬದಲಾಗಿ ಹೋಗಿರುವುದನ್ನು ಕಂಡ ಬೆಳ್ಳಿ, ಬಿಕ್ಕಿ ಬಿಕ್ಕಿ ಅಳುವುದನ್ನು ಕಾಣಬಹುದು. ಕಲ್ಯಾಣಿಯು ಉದ್ದವಾಗಿ ಗಡ್ಡ ಮೀಸೆಯನ್ನು ಬಿಟ್ಟು, ವಿಕಾರವಾಗಿ ಕಾಣುತ್ತಿದ್ದ ಅವನ ಮುಖದ ಆಶಾಭಾವನೆಯು ಕುಂದು ಹೋಗಿರುವುದನ್ನು, ನೋಡಿದ ಬೆಳ್ಳಿ ತಟ್ಟಸ್ಥವಾಗಿ ನಿಂತು ಗೋಳಾಡುವುದನ್ನು ಕಂಡ ಕಲ್ಯಾಣಿಯು ಸಹ ಅಳುವುದನ್ನು ಕಾಣಬಹುದು. ಹೀಗೆ ಬದುಕಿನಲ್ಲಿ ಕಲ್ಯಾಣಿ ಮತ್ತು ಬೆಳ್ಳಿಯರು ಮಾನಸಿಕ ವೇದನೆಯಲ್ಲಿ ಒರಳಾಡುವುದನ್ನು ತಿಳಿಯಬಹುದು.

ಬದುಕು ಕಾದಂಬರಿಯಲ್ಲಿ ಬೆಳ್ಳಿ ಅನುಭವಿಸುವ ನೋವು ಸಂಕಟ ಯಾತನೆ ಮನಸ್ಸಿಗೆ ಬಹಳ ಗಾಸಿಯನ್ನು ಉಂಟುಮಾಡುತ್ತದೆ. ಸಂಸಾರದ ಹಾದಿ ಕಷ್ಟದಿಂದ ಕೂಡಿದ್ದರೂ ತನ್ನ ಮಕ್ಕಳಾದ ಸುಕದೇವಿ, ಸಣ್ಣಮಲ್ಲು ಅವರನ್ನು ಪ್ರೀತಿ, ಮಮತೆಯಿಂದ ಸಾಕುತ್ತಾಳೆ. ಕಲ್ಯಾಣಿ ಜೈಲಿನಿಂದ ಬರುವವರೆಗೂ ಫತರೂ ಬೆಳ್ಳಿಗೆ ಬೆನ್ನೆಲುಬಾಗಿ ನಿಂತು ಎಲ್ಲಾ ಕೆಲಸಗಳಲ್ಲಿ ಭಾಗಿಯಾಗುತ್ತಾನೆ, ಮೇಲ್ವರ್ಗದ ಗಂಡುಗಳ ಕಾಮಕ್ಕೆ ಬಲಿಯಾಗದೆ ಧೈರ್ಯದಿಂದ ಜೀವನ ಸಾಗಿಸಬೇಕಾದ ಸಂದರ್ಭದಲ್ಲಿ ಶಿವಳ್ಳಿಯಲ್ಲಿ ಈರಪಾಸೆಗಪ್ಪಗೌಡನ ಕಾಮಕ್ಕೆ ಬಲಿಯಾಗಬೇಕಾದ ಬೆಳ್ಳಿ ಧೈರ್ಯದಿಂದ ಬದುಕಿನಲ್ಲಿ ಅವನಿಗೆ ತಕ್ಕ ಪಾಠವನ್ನು ಕಲಿಸಿ ಗರತಿಯಾಗಿ ಬಾಳ್ವೆ ಮಾಡುತ್ತಾಳೆ. ಇತರ ಕೆಳಗೇರಿ ಹೆಣ್ಣುಗಳಿಗೆ ದನಿಯಾಗಿ ನಿಲ್ಲುತ್ತಾಳೆ. ಕಲ್ಯಾಣಿ ಜೈಲಿಗೆ ಹೋದಾಗ ಪ್ರಾಯದಲ್ಲಿದ್ದ ಬೆಳ್ಳಿ ತನ್ನ ದೈಹಿಕ ಆಸೆ ಆಕಾಂಕ್ಷೆಗಳನ್ನು ಮರೆತು, ತನ್ನ ದಿನ ನಿತ್ಯದ ಬದುಕಿನ ಜಂಜಾಟದಲ್ಲಿ ಮಗ್ನಳಾಗುತ್ತಾಳೆ. ಕತ್ತಲಲ್ಲಿ ಬೆಳಕನ್ನು ಕಾಣುವ ಛಲಗಾತಿಯಾಗಿ ನಿಲ್ಲುತ್ತಾಳೆ.

ಮರಗೆವ್ವ ಮಾಪುರತಾಯಿಯ ಜೋಗಿಣಿ ಇವಳು ಬೆಳ್ಳಿಯ ಮನೆಗೆ ಬಂದು ಈರಪಾಸೆಗಪ್ಪಗೌಡ ನಿನ್ನ ಮೇಲೆ ಪ್ರೀತಿಯ ಹುಚ್ಚನ್ನು ಹಿಡಿಸಿಕೊಂಡಿದ್ದಾನೆ. ಒಂದೇ ಒಂದು ಸಾರಿ ಅವನ ಹಾಸಿಗೆಗೆ ಬಂದರೆ ನಿನ್ನ ಬಡತನ ನಿರ್ನಾಮವಾಗಿ, ನಿನಗೆ ಹಣ, ಬಂಗಾರದ ಒಡವೆ ಎಲ್ಲವನ್ನು ಕೊಟ್ಟು ನಿನ್ನ ಗಂಡ ಬರುವವರೆಗೂ ನಿನ್ನ ಜೊತೆ ಸಂಬಂಧ ಇಟ್ಟುಕೊಂಡು ನಿನ್ನ ಗಂಡ ಬಂದ ಮೇಲೆ ನಿನ್ನ ಸಹವಾಸಕ್ಕೆ ಬರುವುದಿಲ್ಲ ಎಂದು ಮರಗೆವ್ವ ಹೇಳಿದಾಗ ಬೆಳ್ಳಿ ಸಿಟ್ಟಿನಿಂದ ಆವೇಶ ಭರಿತಳಾಗಿ ''ನಾ ನಿನ್ನ

ಮಗಳದ್ದಂಗಿದ್ದೀನಿ ಅಂದೆಲ್ಲ. ಈಗಯಾ ತಾಯಿಯರೆ ತನ್ನ ಮಗಳಾಗಿ ನಿನ್ನಂಗ ಹಾದರಕ್ಕೆ ಇಳಸ್ತಾಳೇನು?"[೧೧] ಎಂದು ಅಳುತ್ತ ಹಣದ ಆಸೆಗೆ ನೀನು ಇಂಥ ನೀಚ ಕೆಲಸ ಮಾಡಬಾರದು ಎಂದು ಬೈದು ಕಳುಸುತ್ತಾಳೆ. ಹೀಗೆ ಬೆಳ್ಳಿಯನ್ನು ಅನೈತಿಕ ಸಂಬಂಧಕ್ಕೆ ಇಳಿಸಲು ಪ್ರಯತ್ನ ಪಡುವ ಮರಗವ್ವ ನಿರಾಸೆಯಿಂದ ಅಪಮಾನಕ್ಕೆ ಒಳಗಾಗಿ ಸಿಟ್ಟಿನಿಂದ ಹೊರನಡೆಯುತ್ತಾಳೆ. ಬದುಕಿನಲ್ಲಿ ಬೆಳ್ಳಿ ಅನೇಕ ಕ್ಲಿಷ್ಟಕರ ಪರಿಸ್ಥಿತಿಗೆ ಸಿಕ್ಕಿ ನರಳುವುದನ್ನು ಕಾಣಬಹುದು. ಆದರೂ ಬೆಳ್ಳಿ ತನ್ನ ಮನಸ್ಸನ್ನು ಗಟ್ಟಿ ಮಾಡಿ ಧೈರ್ಯದಿಂದ ಬಾಳ್ವೆ ಮಾಡುತ್ತ ಹೋದರು, ಅವಳ ಆಂತರಿಕ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ. ಬೆಳ್ಳಿಯು ಊರಿನಲ್ಲಿ ಕಾಮುಕರ ಕಣ್ಣಿಗೆ ಬಲಿಯಾಗುವ ಸಂಬಂಧ ಒದಗಿದಾಗ, ಅದನ್ನು ಧೈರ್ಯದಿಂದ ಎದುರಿಸಿ, ಯಾವುದೇ ಸಮಯದಲ್ಲಿ ತಾಳ್ಮೆ ಕಳೆದುಕೊಳ್ಳದೆ ಪ್ರೀತಿ ವಿಶ್ವಾಸದಿಂದ ಕಷ್ಟದ ಬದುಕನ್ನು ಸಾಗಿಸುತ್ತಿದ್ದಳು.

[೧೨]"ದುಡುದು ಉಣ್ಣಾಕೆ ಯಾತರ ನಾಚಿಕಿ ಮಗಾ? ಕೆಲಸ ಸಣ್ಣದೂ ದೊಡ್ಡದೂ ಅಂತಿರಂಗಿಲ್ಲ. ಮಂದಿ ಮಾತ ಕೇಳಬ್ಯಾಡ ನೀನು"[೧೨] ಎಂದು ನಾಗವ್ವಾಯಿ ಬೆಳ್ಳಿ ಮಾಡುವ ಕೊರವರ ಕೆಲಸವನ್ನು ಸಮರ್ಥಿಸಿ ಕೊಳ್ಳುತ್ತಾಳೆ. ಬೆಳ್ಳಿಯ ಕುಲದವರು ಕೊರವರ ಕೆಲಸವನ್ನು ಮಾಡುತ್ತಾಳೆಂದು, ನಮ್ಮ ಕುಲದ ಮರ್ಯಾದೆ ಹೊಗುತ್ತದೆಂದು ಮಾತಾಡಿಕೊಂಡರೂ ಅದನ್ನು ಲೆಕ್ಕಿಸದೆ ಈರವ್ವನ ಜೊತೆ ಅಡವಿಗೆ ಹೋಗಿ ಸೇಂದಿ ಪೊರಕೆಗಳನ್ನು ತಂದು ಒಣಗಿಸಿ, ನೀರಿನಲ್ಲಿ ನೆನಸಿ ಬುಟ್ಟಿ ಚಾಪೆಗಳನ್ನು ಹೆಣೆದು ಅವುಗಳನ್ನು ಈರವ್ವ ಸಂತೆಯಲ್ಲಿ ಮಾರಿ ಅವುಗಳಿಂದ ಬಂದ ಹಣದಿಂದ ಬೆಳ್ಳಿಯು ತನ್ನ ಜೀವನದ ಆರ್ಥಿಕ ಮುಗ್ಗಟ್ಟನ್ನು ನಿಭಾಯಿಸಿಕೊಳ್ಳುತ್ತಾಳೆ. ಹೀಗೆ ಕಾದಂಬರಿಯಲ್ಲಿ ಬೆಳ್ಳಿ ಪಟ್ಟಣದಲ್ಲಿ ಓದಿ ಬೆಳೆದರೂ ಅವಳು ಜಮಾದಾರ ಮಲ್ಲಪ್ಪನ ಮನೆಯಲ್ಲಿ ಅನುಭವಿಸುವ ಕಷ್ಟಗಳನ್ನು ಲೆಕ್ಕಿಸದೆ ಅವನ್ನು ಧೈರ್ಯದಿಂದ ಎದುರಿಸುತ್ತಾಳೆ.

ಬೆಳ್ಳಿಯು ತನ್ನ ಸಂಸಾರದಲ್ಲಿ ಯಾವುದೇ ಕಷ್ಟಗಳು ಎದುರಾದರು ಹತ್ತಿರದಲ್ಲಿ ರಂಡೆಯಾಗಿ ಸಾವುಕಾರನ ತೋಟದಲ್ಲಿ ಬದುಕುತ್ತಿದ್ದ, ಕಾಶಮ್ಮನ ಬಳಿ ಹೋಗಿ ಸಹಾಯವನ್ನು ಕೇಳದ, ಸ್ವಾಭಿಮಾನಿ ಹೆಣ್ಣಾಗಿ ನಿಲ್ಲುತ್ತಾಳೆ. ಜೀವನದಲ್ಲಿ ಯಾವುದೇ ಸಮಸ್ಯೆಯಿಂದ ನೊಂದರು ಅವಳು ಧೈರ್ಯದಿಂದ ಎದುರಿಸುವುದನ್ನು ಕಾಣಬಹುದು.

ಬೆಳ್ಳಿಯ ಶ್ರಮಪಟ್ಟು ತೋಟ, ಹೊಲಗಳಲ್ಲಿ ದುಡಿದು ಕಷ್ಟದಿಂದ ಬದುಕುವಾಗ, ಅವಳಿಗೆ ಫತರೂ ನಿಜಾಮರು ಸಹಾಯವಾಗುವುದನ್ನು ತಿಳಿಯಬಹುದು. ಇದರ ಜೊತೆಗೆ ಬೆಳ್ಳಿಯ ಸಂಸಾರದಲ್ಲಿ ಕಿತ್ತು ತಿನ್ನುವ ಬಡತನ ಕಾಡಿದರು. ಅವಳು ಈರವ್ವನ ಜೊತೆಗೆ

ಕಾಡಿಗೆ ಹೋಗಿ ಸಿಂದಿ ಪೂರಕೆಗಳನ್ನು ತಂದು, ಬುಟ್ಟಿ, ಚಾಪೆಗಳನ್ನು, ಎಣೆದು ಅವುಗಳಿಂದ ಬಂದ ಹಣದಿಂದ ಆರ್ಥಿಕತೆ ನೀಗುವುದನ್ನು ಕಾಣಬಹುದು. ಹೀಗೆ ಬೆಳ್ಳಿಗೆ ದಿನ ನಿತ್ಯ ಬದುಕಿನಲ್ಲಿ ಕಷ್ಟದ ಸರಮಾಲೆಯಂತೆ ಕೊರಳಿಗೆ ಸುತ್ತಿಕೊಂಡಿದ್ದರು. ಅವಳು ಅದನ್ನು ಎದುರಿಸಿ ಬದುಕುವುದನ್ನು ಕಾಣಬಹುದು.

ಕಲ್ಯಾಣಿಯು ಜೈಲನ್ನು ಸೇರಿದ ಸಮಯದಲ್ಲಿ ಬೆಳ್ಳಿ ಯೌವ್ವನದವಳಾಗಿದ್ದು, ಅವಳ ಬದುಕಿನ ಆಂತರಿಕ ಆಸೆ, ಆಕಾಂಕ್ಷೆಗಳು ನುಚ್ಚು ನೂರಾದರು, ಅದನ್ನು ಮನಸ್ಸಿನಲ್ಲಿ ಗಟ್ಟಿಯಾಗಿ ತಡೆದು ಗರತಿಯಾಗಿ ಬಾಳ್ವೆ ಮಾಡುತ್ತ, ಕಲ್ಯಾಣಿಯು ಜೈಲಿನಿಂದ ಬರುವವರೆಗೂ ದಿನಗಳನ್ನು ಎಣಿಸುತ್ತ ಸಂಕಟದ ಬದುಕನ್ನು ಕಳೆಯುತ್ತಿದ್ದಳು.

ಕಲ್ಯಾಣಿಯನ್ನು ಜೈಲಿನಿಂದ ಬಿಡಿಸಲು ಮಲ್ಲಪ್ಪನ ತೋಟವನ್ನು ಮಾರಲು ಬೆಳ್ಳಿ ತೀರ್ಮಾನ ಮಾಡುತ್ತಾಳೆ. ಅದು ಕಾಶಮ್ಮನಿಗೆ ತಿಳಿದಾಗ ಅವಳು ಮನನೊಂದು ಅಳುತ್ತಾ ಅದು ನಮ್ಮ ಮನೆಯ ಲಕ್ಷ್ಮಿ ಇದ್ದ ಹಾಗೆ. ಅದರಲ್ಲಿ ನಮ್ಮಪ್ಪನ ಸಮಾಧಿ ಇದೆ ಅದನ್ನು ಮಾರುವುದು ಬೇಡ ನಾನೇ ಸಹಾಯ ಮಾಡುತ್ತೇನೆ ಎಂದು ಫತರೂನಿಗೆ ಹೇಳುತ್ತಾಳೆ. ಫತರೂ ಹಾಲಪ್ಪ ಬೆಳ್ಳಿ ಶಾಣಮ್ಮನಿಗೆ ಒಪ್ಪಿಸಿ ತೋಟವನ್ನು ಕಾಶಮ್ಮನಿಗೆ ಒತ್ತೆಯಿಟ್ಟು ಸಾಲ ತೆಗೆದೂಕೊಂಡು ಮತ್ತೆ ಕಾಶಮ್ಮ ತೋಟವನ್ನು ಬೆಳ್ಳಿಗೆ ಬಿಟ್ಟು ಕೊಡುವ ವ್ಯವಸ್ಥೆ ಮಾಡುತ್ತಾರೆ. ಕಾಶಮ್ಮನೂ ತವರು ಮನೆಯ ಪ್ರೀತಿಯಿಂದ ತಮ್ಮನಾದ ಕಲ್ಯಾಣಿಯನ್ನು ಜೈಲಿನಿಂದ ಬಿಡಿಸಲು ಹಣದ ಸಹಾಯ ಮಾಡುತ್ತಾಳೆ.

ಕಾಶಮ್ಮನು ಸಹ ತನ್ನ ತಮ್ಮ ಜೈಲಿಗೆ ಹೋದಾಗ ಅವಳು ಊಟ ನೀರನ್ನು ಬಿಟ್ಟು ಕೊರಗುತ್ತ ತಮ್ಮನನ್ನು ಬಿಡಿಸಲು ಅವಳು ಲಿಂಗರಾಜನನ್ನು ಪೋಲಿಸ್ ಠಾಣೆಗೆ ಕಳಿಸಿದಾಗ ಕಲ್ಯಾಣಿ ಸಿಟ್ಟಿನಿಂದ ಲಿಂಗರಾಜನನ್ನು ಬೈಯದ್ದು ಕಳಿಸಿದರು ಕಾಶಮ್ಮನ ಸಹಾಯದಿಂದ ಕಲ್ಯಾಣಿಯ ಹದಿನಾಲ್ಕು ವರ್ಷಗಳ ನಂತರ ಬಿಡುಗಡೆ ಆಗುವುದನ್ನು ಕಾಣಬಹುದು, ಕಾಶಮ್ಮ ತನ್ನ ತಮ್ಮನನ್ನು ಬಿಡಿಸಲು ಕೋರ್ಟಿನಲ್ಲಿ ವಕೀಲನಿಗೆ ಕೊಡುವ ಹಣವನ್ನು ಶಾಣಮ್ಮ, ಹಾಲಪ್ಪನನ್ನು ಫತರೂನ ತೋಟದ ಮನೆಗೆ ಕರೆಸಿ ಸ್ವತಃ ಕಾಶಮ್ಮನೆ ಬಂದು ಹಣವನ್ನು ಕೊಟ್ಟಾಗ, ಹಾಲಪ್ಪನು ತಂದಿದ್ದ ತೋಟದ ಕಾಗದವನ್ನು ಅಡವಿಟ್ಟುಕೊಳ್ಳಲು ಕೊಟ್ಟಾಗ ಕಾಶಮ್ಮ ಮನನೊಂದು ಅದನ್ನು ತಿರಸ್ಕರಿಸುವುದನ್ನು ಕಾಣಬಹುದು. ಕಾಶಮ್ಮ ನಡತೆಯಲ್ಲಿ ಕೆಟ್ಟವಳಾಗಿ ಕಂಡರು ಅವಳು ತನ್ನ ತವರಿನ ಮನೆಯ ಮೇಲೆ ಇಟ್ಟಿದ್ದ ಆತ್ಮ ವಿಶ್ವಾಸವನ್ನು ಕಾಣಬಹುದು.

ಕಲಬುರ್ಗಿ ಜೈಲಿನಲ್ಲಿದ್ದ ಕಲ್ಯಾಣಿಗೆ ಅಲ್ಲಿನ ಜೈಲರ್ ಸಾಹೇಬರು ಅವನ ಒಳ್ಳೆಯ ಗುಣ, ನಡತೆಯನ್ನು ನೋಡಿ ಬೇಗ ಬಿಡುಗಡೆ ಮಾಡಲು ಸರಕಾರಕ್ಕೆ ಶಿಫಾರಸ್ಸು ಮಾಡಿದ್ದೀನಿ ಎಂದು ಹೇಳಿದಾಗ, ಕಲ್ಯಾಣಿಗೆ ಆನಂದ ಉಂಟಾಗಿ ಹದಿನಾಲ್ಕು ವರ್ಷಗಳ ನಂತರ ಊರಿಗೆ ಹೋದಮೇಲೆ ಬೆಳ್ಳಿಗೆ ತನ್ನ ಸಂಕಟವನ್ನೆಲ್ಲಾ ಹೇಳಿ ಮತ್ತೆ ಹೊಸದಾಗಿ ಸಂಸಾರವನ್ನು ಪ್ರಾರಂಭ ಮಾಡಬೇಕು. ಬೆಳ್ಳಿ ಮತ್ತು ಮಕ್ಕಳನ್ನು ಚೆನ್ನಾಗಿ ನೋಡಿಕೊಂಡು ಸುಖದಿಂದ ಬಾಳ್ವೆ ಮಾಡಬೇಕು ಎಂಬ ಕನಸ್ಸುಗಳನ್ನು ಜೈಲಿನಲ್ಲಿದ್ದು ಕೊಂಡು ಕಾಣುತ್ತಾನೆ. ಹೀಗೆ ಬದುಕು ಕಬ್ಬಿಣದ ಸರಳಿನ ಹಿಂದೆ ಇರುವ ಕಷ್ಟದ ಗೋಳಿನ ವ್ಯಥೆ ಅವನಿಗೆ ಪುನರ್ ಜನ್ಮ ಬಂದಂತೆ ಮಾಡುತ್ತದೆ. ಕಲ್ಯಾಣಿಯ ಹಿಂದಿನ ನೆನಪುಗಳನ್ನು ತನ್ನ ಮನಸ್ಸಿಗೆ ತಂದುಕೊಂಡು ದುಃಖಿಸುತ್ತಾನೆ.

ಕಲ್ಯಾಣಿಯ ಬಿಡುಗಡೆಯ ದಿನಾಂಕವನ್ನು ಸಾಹೇಬರು ಹಾಲಪ್ಪನಿಗೆ ತಿಳಿಸಿದಾಗ ಅವನು ಶಿವಳ್ಳಿಗೆ ಸುದ್ದಿ ಮುಟ್ಟಿಸಿದಾಗ ಬೆಳ್ಳಿ ಬಹಳ ಸಂತೋಷ ಪಡುತ್ತಾಳೆ ಫತರೂನ ಹರ್ಷಗೊಂಡು ಕಲ್ಯಾಣಿಯ ಬಿಡುಗಡೆಗೆ ಒಂದು ದಿನ ಮುಂಚಿತವಾಗಿ ಕಲ್ಬುರ್ಗಿಗೆ ಹೊರಡುತ್ತಾನೆ.

ಫತರೂ ಮತ್ತು ಹಾಲಪ್ಪ ಇಬ್ಬರೂ ಕಲ್ಬುರ್ಗಿ ಜೈಲಿನ ಬಾಗಿಲಲ್ಲಿ ಕುಳಿತರು, ಜೈಲಿನ ಸಮಯದ ಗಂಟೆ ಭಾರಿಸಿದಾಗ ಕಲ್ಯಾಣಿ ಹೊರಕ್ಕೆ ಬಂದಾಗ ಅವನನ್ನು ಫತರೂ ಓಡುತ್ತ ಬಂದು ತಬ್ಬಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಾನೆ. ಹಾಲಪ್ಪ ಅವರನ್ನು ಸಂತೈಸಿ ಜೈಲು ಖಾನೆಯಿಂದ ಮನೆಗೆ ಕರೆದುಕೊಂಡು ಹೊಗುತ್ತಾನೆ. ಶಾಣಮ್ಮ ತಮ್ಮನ ಮುಖವನ್ನು ನೋಡಿಕೊಂಡು ಅಳುತ್ತಾಳೆ. ಕಲ್ಯಾಣಿಯ ಶಿವೂನನ್ನು ಕರೆದು ಅವನನ್ನು ಮಾತಾಡಿಸಿ ತನ್ನ ಮಗನಾದ ಸಣ್ಣಮಲ್ಲುನನ್ನು ಕೇಳಿದಾಗ, ಹಾಲಪ್ಪ ಅವನು ಕಾಲೇಜಿನಿಂದ ಪ್ರವಾಸಕ್ಕೆ ಹೋಗಿರುವುದನ್ನು ತಿಳಿಸುತ್ತಾನೆ, ಶಾಣಮ್ಮ ತಮ್ಮನಿಗೆ ಎಣ್ಣೆ ಹೋಳಿಗೆ, ಸಣ್ಣಕ್ಕಿ ಬಾನ, ಜಿಗ್ಗೆ ಕಾಸಿದ ತುಪ್ಪ, ಚಪಾತಿ, ಸಂಡಗಿ, ಹಪ್ಪಳ, ಭಜ್ಜಿ ಎಲ್ಲವನ್ನು ಮಾಡಿ ಊಟಕ್ಕೆ ಹಾಕುತ್ತಾಳೆ. ನಂತರ ಕಲ್ಯಾಣಿ ಮತ್ತು ಫತರೂರು ಸಂಜೆ ಬಸ್ಸಿಗೆ ಶಿವಳ್ಳಿಗೆ ಹೊರಡುತ್ತಾರೆ. ಬೆಳ್ಳಿ ತನ್ನ ಗಂಡ ಬರುವನೆಂದು, ಮನೆ ಸಾರಿಸಿ, ರಂಗೋಲಿ ಹಾಕಿ ದೇವರಿಗೆ ಕುಂಕುಮ ಹಚ್ಚಿ ಊದಿನ ಕಡ್ಡಿ ಬೆಳಗಿದಳು. ಕಲ್ಯಾಣಿಗೆ ಸಿಹಿ ಅಂತ ಶ್ಯಾವಿಗೆ ಬಸ್ದು ಹಾಲು ಬೆಲ್ಲ ಕಲಸಿದ್ದಳು. ಕೋಳಿ ಪಲ್ಲ್ಯಾ ತಾಳಿ ಪಲ್ಲೆ, ಗೋಧಿ ಚಪಾತಿ ಮಾಡಿದಳು. ನಜಮಾ ಕೈಯಲ್ಲಿ ಬಿರ್‍ಯಾನಿ ಮಾಡಿಸಿದ್ದಳು. ಇದರ ಜೊತೆಗೆ ಫಕೀರಪ್ಪನ ಕೈಯಿಂದ ಬನದಿಂದ ತಾಜಾಸಿಂದಿಗೊಬ್ಬಿ ತರಿಸಿ, ಮನೆಯೆಲ್ಲ ಸಿಂಗರಿಸಿ ನವಿಲು ಬಣ್ಣದ ಇಳಕಲ್ ಸೀರೆ ಹುಟ್ಟು ಕಲ್ಯಾಣಿಯ ಬರುವ ದಾರಿಯನ್ನು ಕಾಯುತ್ತಿದ್ದಳು.

ಹದಿನಾಲ್ಕು ವರ್ಷಗಳ ನಂತರ ಶಿವಳ್ಳಿಗೆ ಬಂದಾಗ ಅಲ್ಲಿ ಅನೇಕ ಬದಲಾವಣೆ ಕಾಣುತ್ತಾನೆ. ಸಣ್ಣ ಸಣ್ಣ ಅಂಗಡಿಗಳು, ಹೋಟಲ್‌ಗಳು ಪಾನ್‌ಶಾಪ್, ಬೆಂಡು ಬತ್ತಾಸು, ಕಬ್ಬಿನ ತುಕಡಿಗಳು, ಸೇವು, ಕಾರಬೂಂದಿ ಅಂಗಡಿಗಳು, ಬಟ್ಟೆ ಅಂಗಡಿ, ಸಿಂದಿ ಮಳಿಗೆಗಳು, ಇವೆಲ್ಲವನ್ನು ಕಂಡ ಕಲ್ಯಾಣಿ ಅದನ್ನು ಹೆಚ್ಚಾಗಿ ಗಮನಿಸದೆ. ಫತರೂನ ಜೊತೆ ಬೇಗ ಬೇಗನೆ ಮನೆಯ ಕಡೆ ಹೋರಡುತ್ತಾರೆ. ಬೆಳ್ಳಿಯು ಕಲ್ಯಾಣಿಯನ್ನು ನೋಡಿ ಅಳುತ್ತ ಅವನ ತೊಳಿನಲ್ಲಿ ಬಂದಿಯಾಗಿ ಬಿಕ್ಕಿ ಬಿಕ್ಕಿ ಅಳುತ್ತಿದ್ದು ಮತ್ತೆ ಸಂತೋಷದಿಂದ ನಗುತ್ತಿದ್ದಳು. ನಾಗವ್ವಾಯಿ, ಸುಕದೇವಿ, ಈರವ್ವ, ಫಕೀರಪ್ಪ, ಕರೆಪ್ಪ ದಾನಮ್ಮ, ನಜಮಾ, ಗಿನ್ನ್ಯಾನಿ. ಎಲ್ಲರೂ ಕಣ್ಣೀರು ಸುರಿಸುತ್ತ ತುಟಿಗಳಲ್ಲಿ ನಗು ಅರಳಿಸಿಕೊಂಡು ನಿಂತಿದ್ದರು. ಬೆಳ್ಳಿಯ ಕಲ್ಯಾಣಿಗೆ ತನ್ನ ಮಗಳಾದ ಸುಕದೇವಿಯನ್ನು ಪರಿಚಯಿಸುತ್ತಾಳೆ, ಕಲ್ಯಾಣಿ ತನ್ನ ಮಗಳನ್ನು ಪ್ರೀತಿಯಿಂದ ಮುದ್ದಾಡುತ್ತಾ [೧೩]"ನಾನು ನಿನ್ನಪ್ಪ ಇದ್ದೀನಿ ಮಗಳೇ..... ಈಸೊರ್ಸಿನ ಮ್ಯಾಲ ನಿನಗ ನೋಡಾ ನಸೀಬ ಬಂದಾದ..... ನನಗ ಮಾಫ ಮಾಡು ಮಗಾ.... ನಾ ದುರ್ದೈವಿ ಅಪ್ಪಿದ್ದೀನಿ....."[೧೩] ಎಂದು ಅಳುತ್ತ ಮಗಳನ್ನು ಎದೆಗಪ್ಪಿಕೊಳ್ಳುತ್ತಾ ತನ್ನ ನೋವನ್ನು ಮರೆಯುತ್ತಾನೆ.

ಕಲ್ಯಾಣಿ ಹದಿನಾಲ್ಕು ವರ್ಷ ಸಜೆ ಮುಗಿಸಿ ಬಂದಾಗ ಊರಿನಲ್ಲಿ ಅವನ ಕುಲದವರು ಸುದ್ದ ಮಾಡಿಸಲು ಹೇಳಿದಾಗ ಕಲ್ಯಾಣಿ ತನ್ನ ಕುಲದವರಿಗೆ ಕೈಮುಗಿದು ನಾನು ಬಡವ ಜೈಲಿನಿಂದ ಬಂದಿದ್ದೇನೆ ನನ್ನ ಹೆಂಡತಿ ಕೂಲಿ ಮಾಡಿ ಸಂಸಾರ ಮಾಡಿರುವುದನ್ನು ನೀವು ನೋಡಿದ್ದೀರಿ, ನನ್ನ ಮೇಲೆ ಕರುಣೆ ತೋರಿಸಿ ಎಂದು ಕೈಮುಗಿದು ಬೇಡಿಕೊಂಡನು. ಆದರೆ ಅಲ್ಲಿನ ಪಂಚರು 'ಸುದ್ದ' ಮಾಡುವ ಖರ್ಚನ್ನು ಕೊಡಬೇಡ ಊರಿನಿಂದ ಕುಲದವರು ಬಂದಾಗ ಅವರಿಗೆ ಊಟ ಹಾಕಿಸು ನಿನ್ನದು ಕೊಲೆ ಕೇಸು ಆಗಿರುವುದರಿಂದ ಎಂಟನೂರು ಒಂದು ರೂಪಾಯಿ ದಂಡವನ್ನು ತೆರಬೇಕೆಂದು ಸೂಚಿಸುತ್ತಾರೆ. ಅಲ್ಲದೆ ಸೂಜಿಯಿಂದ ಅವನ ನಾಲಿಗೆ ತುದಿಗೆ 'ಚುಟಗಿ' ಹಾಕಿ, ಹೊಸ ಬಟ್ಟೆಯನ್ನು ಹಾಕಿಕೊಂಡು ತನ್ನ ಕುಲ ಬಾಂಧವರಿಗೆ ಅವನಿಂದ ಊಟ ಹಾಕಿಸಿ ಮತ್ತೆ ಕುಲಕ್ಕೆ ಸೇರಿಸಿಕೊಳ್ಳುತ್ತಾರೆ. ಕಲ್ಯಾಣಿ ಅವಮಾನ ಸಹಿಸಿಕೊಂಡು ಬದುಕುವುದರ ಜೊತೆಗೆ ತನ್ನ ಮಗನಾದ ಸಣ್ಣಮಲ್ಲು ತನ್ನ ಮುಖವನ್ನೇ ನೋಡಲು ಇಷ್ಟಪಡದೆ, ತನ್ನನ್ನು ಒಬ್ಬ ಕೊಲೆಗಾರ ಎಂದು ಭಾವಿಸಿ ತನ್ನ ಆಸ್ತಿಯ ಭಾಗವನ್ನೆಲ್ಲ ತಂಗಿ ಸುಕದೇವಿಗೆ ಬರೆದುಕೊಟ್ಟು ಹೊರಟು ಹೋಗುವುದು ದಾರುಣವೆನಿಸುತ್ತದೆ. ಸಾಲದ್ದಕ್ಕೆ ಸಣ್ಣಮಲ್ಲು ಅವನ ಕಛೇರಿಯಲ್ಲಿ ಕೆಲಸಮಾಡುವ ಇಮಲಾ ಎಂಬ ಮರಾಠಿ ಹುಡುಗಿಯನ್ನು ರಿಜಿಸ್ಟರ್ ಮದುವೆಯಾದ ಸುದ್ದಿ ಕಲ್ಯಾಣಿಗೆ ಮತ್ತು ಬೆಳ್ಳಿಗೆ ತಿಳಿದಾಗ ಅವರ ಮನಸ್ಸಿಗೆ ಮತ್ತಷ್ಟು ನೋವಾಗುತ್ತದೆ. ಒಂಭತ್ತು ತಿಂಗಳು ಹೆತ್ತು.

ಸಾಕಿದ ಮಗ ತಮಗೆ ತಿಳಿಯದ ಹಾಗೆ ಮದುವೆ ಮಾಡಿಕೊಂಡನಲ್ಲ ಎಂದು ಕೊರಗುತ್ತಾರೆ. ಆದರೂ ಹೆತ್ತ ಮಗ ಸುಖದಿಂದ ಇರಲಿ ಎಂದು ಹಾರೈಸುತ್ತಾರೆ. ಸಣ್ಣಮಲ್ಲು ಬೇರೆ ಜಾತಿಯ ಹೆಣ್ಣನ್ನು ಮದುವೆ ಆದರೂ ಸುಕದೇವಿ ಹಾಗೂ ಬೆಳ್ಳಿ ಅವಳನ್ನು ನೋಡುವ ಕಾತುರವನ್ನು ವ್ಯಕ್ತಪಡಿಸುತ್ತಾರೆ. ಹೀಗೆ ರಕ್ತ ಸಂಬಂಧಗಳ ಬೆಸುಗೆ ಪ್ರೀತಿ ವಿಶ್ವಾಸಗಳು ಅವರ ಆಂತರಿಕ ನೋವನ್ನು ಮರೆಸುವುದನ್ನು ಕಾಣಬಹುದು. ಸಣ್ಣಮಲ್ಲು ದಲಿತ ಹುಡುಗನಾದರೂ ಸಂಸ್ಕಾರದಿಂದ ಮೇಲು ವರ್ಗದವರಂತೆ ನಡೆದುಕೊಳ್ಳುತ್ತಾನೆ.

ಸುಕದೇವಿಯನ್ನು ನೋಡಲು ಕಲ್ಲಳ್ಳಿಯ ಸಾವುಕಾರನ ಮನೆಯಲ್ಲಿ ಆಳುಮಗನಾಗಿ ಇದ್ದ ದೇವಿಂದ್ರನನ್ನ ಫಕೀರಪ್ಪನು ಕಳಿಸುತ್ತಾನೆ. ದೇವಿಂದ್ರನನ್ನು ನೋಡಿ ಕಲ್ಯಾಣಿ ಮತ್ತು ಬೆಳ್ಳಿ, ಸುಕದೇವಿ ಹಾಗು ಫತರೂ ಒಪ್ಪಿದರು, ಕಲಬುರ್ಗಿಯಿಂದ ಹಾಲಪ್ಪ ಶಾಣಮ್ಮನನ್ನು ಕರೆಸಿ ದೇವಿಂದ್ರನಿಗೂ ಸುಕದೇವಿ ಒಪ್ಪಿಗೆಯಾಗುತ್ತಾಳೆ. ಮನೆಯಳಿಯನಾಗಿ ಇರಲು ಒಪ್ಪಿದ ಮೇಲೆ ವೈಶಾಖದ ಸಂಜೆಯಲ್ಲಿ ದೇವಿಂದ್ರ ಸುಕದೇವಿ ಗಂಡ ಹೆಂಡತಿಯರಾಗುತ್ತಾರೆ. ಮದುವೆಗೆ ಶಿವು ಮತ್ತು ಸಣ್ಣಮಲ್ಲು ಬಂದು ಹರಸಿದ ಸಣ್ಣಮಲ್ಲು ಬೆಳ್ಳಿಯನ್ನು ಕರೆದು ಮಗಳಿಗೆ ಒಳ್ಳೆಯ ವರನನನ್ನು ನೋಡಲಿಲ್ಲ ಎಂದು ಆಕ್ಷೇಪಿಸುತ್ತಾನೆ. ಕಾಶಮ್ಮ ಶಾಣಮ್ಮ. ಹಾಗೂ ಹಾಲಪ್ಪ. ಬೆಳ್ಳಿ ಮತ್ತು ಕಲ್ಯಾಣಿಗೆ ಧೈರ್ಯ ಹೇಳಿ ನೊಂದ ಮನಸ್ಸನ್ನು ಸಂತೈಸುತ್ತಾರೆ.

ಸಣ್ಣಮಲ್ಲು ಅಪ್ಪ ಜೈಲಿನಿಂದ ಬಂದು ಆರು ತಿಂಗಳಾದರೂ ಹಳ್ಳಿಗೆ ಬಂದು ಅಪ್ಪನ ಮುಖವನ್ನು ನೋಡಲಿಲ್ಲ. ಕಲ್ಯಾಣಿ ಗುಲ್ಬರ್ಗಾದಲ್ಲಿ ಸಣ್ಣಮಲ್ಲುವಿನ ಹೆಗಲ ಮೇಲೆ ಕೈಯನ್ನು ಹಾಕಿದಾಗ ದೂರ ಸರಿದು ನಿಂತನು. ಇದನ್ನು ನೋಡಿ ಬೆಳ್ಳಿಯ ಮನಸ್ಸು ತಡೆಯಲಾಗದೆ, ೧೪"ಯಾಕಂಗ ಮಾಡ್ತ್ಯೊರು ಸೀಳ ನಾಯಿಯಂಗ?", ನಿನಗೆ ಜನುಮ ಕೊಟ್ಟ ಅಪ್ಪದಾನ ಅಂವಾ ಚವದಾವರ್ಸ ವನವಾಸ ಕಳದಂಗ ಕಳೆದು ಮಗನ ಮಾರಿ ನೋಡ್ಲಕ ಬಂದಾನಂವಾ, ನಿನಗೇನು ಅವ್ವ ಅಪ್ಪ ಯಾರು ಬೇಕಾಗಿಲ್ಲೇನು?"೧೪ ಎಂದು ಕೇಳಿದಾಗ ಸಣ್ಣಮಲ್ಲು ನನಗೆ ಜನ್ಮ ಕೊಡು ಅಂತ ಹೇಳಿರಲಿಲ್ಲ, ನಾನು ಓದುವ ಕಾಲೇಜಿನಲ್ಲಿ ಗೆಳೆಯರು ಇವರ ಅಪ್ಪ ಕೊಲೆ ಮಾಡಿ ಜೈಲಿನಲ್ಲಿದ್ದು ಬಂದವನೆ ಎಂದು ಅಸಹ್ಯವಾಗಿ ನೋಡುತ್ತಾರೆ ಎಂದು ಹೇಳಿ ಹೊರ ಹೋಗುತ್ತಾನೆ. ಕಲ್ಯಾಣಿ ಮತ್ತು ಬೆಳ್ಳಿಗೆ ನೋವುಂಟಾದಾಗ ಹಾಲಪ್ಪ ಶಾಣಮ್ಮ ಸಾಂತ್ವನ ಹೇಳಿ ಸುಮ್ಮನಾಗಿಸಿದರು. ಹೀಗೆ ಅಪ್ಪ ಮಗನ ಬಾಂಧವ್ಯ ಮುರಿದು ಬೀಳುವುದನ್ನು ಕಾಣಬಹುದು. ಮುಂದೆ ಕಲ್ಯಾಣಿ ಸಣ್ಣಮಲ್ಲುನನ್ನು 'ನನ್ನ ಮಗ' ಎಂದು ಎಲ್ಲೂ ಹೇಳಿಕೊಳ್ಳುವುದಿಲ್ಲ.

ಕಲ್ಯಾಣಿ ಫಕೀರಪ್ಪನ ಸಹಾಯದಿಂದ ಸುಕದೇವಿಯನ್ನು ದೇವೆಂದ್ರನಿಗೆ ಮದುವೆ ಮಾಡಿ ತನ್ನ ಮನೆಯ ಮಗನಾಗಿ ಇಟ್ಟುಕೊಂಡು ಹೊಲ ಗದ್ದೆ ಕೆಲಸಗಳನ್ನು ದೇವೇಂದ್ರನಿಗೆ ವಹಿಸುತ್ತಾನೆ. ಫತೂರನಿಗೆ ರುಕ್ಮದ್ದೀನನ ಹಿರಿಯ ಮಗಳಾದ ನಜಮಾಳ ಜೊತೆ ಮದುವೆಯನ್ನು ಮಸೀದಿಯಲ್ಲಿ, ಮುಲ್ಲಾ, ಕಲ್ಯಾಣಿ, ಹಾಲಪ್ಪ ಎಲ್ಲರೂ ಸೇರಿ ಮದುವೆಯನ್ನು ಮಾಡಿದರು. ಮುಂದೆ ಫತರೂ ಮತ್ತು ನಜಮಾ ಕಲ್ಯಾಣಿ ತನ್ನ ಮನೆಯ ಅಂಗಳದ ಮನೆಯಲ್ಲಿ ವಾಸವಾಗಿ ಇರಲಿ ಎಂದು ಹೇಳುವುದು ಫತರೂನ ಮೇಲೆ ಇದ್ದ ನಂಬಿಕೆ, ಪ್ರೀತಿ, ವಾತ್ಸಲ್ಯವನ್ನು ತೋರಿಸುತ್ತದೆ. ಜಮಾದಾರ ಮಲ್ಲಪ್ಪನಿಂದ ಕಲ್ಯಾಣಿಯವರೆಗೆ ಅವರ ಸಂಸಾರದ ಕಷ್ಟ ಸುಖದಲ್ಲಿ ಭಾಗಿಯಾಗಿ ಪ್ರಾಮಾಣಿಕತೆಯೊಂದಿಗೆ ನಡೆದುಕೊಂಡು ಬಂದವನು ಫತರೂ. ಜಾತಿಯಲ್ಲಿ ಮುಸ್ಲಿಂ ಹುಡುಗನಾದರೂ ಬದುಕಿನಲ್ಲಿ ಎಂದೂ ಜಾತೀಯತೆಯನ್ನು ತೋರದೆ ಜಮಾದಾರ ಮಲ್ಲಪ್ಪನ ಮನೆಮಗನಾಗಿ. ಒಕ್ಕಲುತನದಿಂದ ಹಿಡಿದು ಕುಟುಂಬದ ಆಗುಹೋಗುಗಳ ಬಗ್ಗೆ ಎಲ್ಲಾ ರೀತಿಯಲ್ಲಿ ಸಹಕಾರಿಯಾಗಿ ನಿಲ್ಲುವುದನ್ನು ಕಾಣಬಹುದು. ಫತರೂ ಮತ್ತು ನಜಮಾ ಇಬ್ಬರೂ ಕಷ್ಟಪಟ್ಟು ಕೂಲಿಮಾಡಿ ಬದುಕನ್ನು ಸಾಗಿಸುತ್ತಾರೆ.

ಫಕೀರಪ್ಪ ಮತ್ತು ದಾನಮ್ಮ, ಸುಕದೇವಿಯ ಮದುವೆಯನ್ನು ಮುಂದೆ ನಿಂತು ಮಾಡುತ್ತಾರೆ. ಇವರು ಬಮನಳ್ಳಿ ಎಂಬ ಊರಿನವರು. ಅಲ್ಲಿ ಇವರಿಗೆ ಮನೆ, ಹೊಲ ಇಲ್ಲದೆ ಹೆಂಡತಿ, ಮಗ, ಸೊಸೆ ಜೊತೆ ಶಿವಳ್ಳಿಗೆ ಬಂದು ಕೂಲಿ ಮಾಡುತ್ತ ಫತರೂನ ಸಹಾಯದಿಂದ ತೋಟದಲ್ಲಿ ಕೂಲಿ ಕೆಲಸವನ್ನು ಮಾಡುತ್ತಾ ಕಲ್ಯಾಣಿಯ ಮನೆಯಂಗಳದಲ್ಲಿ ಇದ್ದು ಬಿಡುತ್ತಾರೆ. ಕಲ್ಯಾಣಿ ಜೈಲಿನಲ್ಲಿ ಇದ್ದಾಗ ಬೆಳ್ಳಿಗೆ ಫಕೀರಪ್ಪ ಮತ್ತು ಅವನ ಮಗ ಕರೆಪ್ಪ ಆಸರೆಯಾಗಿ ನಿಲ್ಲುತ್ತಾರೆ. ಹೀಗೆ ಬದುಕಿನಲ್ಲಿ ಒಬ್ಬರಿಗೆ ಒಬ್ಬರು ಸಹಾಯಕ ವ್ಯಕ್ತಿಗಳಾಗಿ ನಿಲ್ಲುವುದನ್ನು ನೋಡಬಹುದು.

ಕಲ್ಯಾಣಿ ಹೆಚ್ಚಾಗಿ ತೋಟದಲ್ಲಿಯೇ ಇರುತ್ತಾನೆ. ಅವನು ಜೈಲಿನಿಂದ ಬಂದ ಮೇಲೆ ಊರಿನ ಗಂಡಸರು ಹೆಂಗಸರು ಅವನನ್ನು ನೋಡುವ ದೃಷ್ಟಿಕೋನವೇ ಬೇರೆಯಾಗುತ್ತದೆ. ಕಲ್ಯಾಣಿಯ ಮನಸ್ಸಿಗೆ ಬೇಜಾರಾಗುವಾಗೆ ಐಗೋಳ ಅನಪೂರ್ಣವ್ವ ಹೇಳುತ್ತಾಳೆ : [೧೫]"ಯವ್ವ ಕಲ್ಯಾಣಿ.... ಏಟು ಇಳ್ದು ಹೋಗಿದ್ದೆಲವ್ವ........ ಜೈಲ್ ಖಾನ್ಯಾಗ ಕಲ್ಲಿ ಒಡೀಲಕ್ಕ ಹಚ್ಚತಾರಂತಲ್ಲ ಸಿಮಿಂಟು ಕಲಸಿ ಮಾಡಿದ ರೊಟ್ಟಿಕುಡ್ತಾರಂತಲ್ಲ ಉಣ್ಣಾಕ... ಅಯ್ಯೋ ಪಾಪ ಅದಕ್ಕೆ ಈಟು ಖರಾಬಾಗಿದ್ದಿ ಬಿಡಪ್ಪ..... ಮೈಯೆಲ್ಲಾ ಎಲೂನೇ ತೇಲ್ಯಾವ ಕೋಡಿ........"[೧೫] ಹೀಗೆ ಜನರು ಮಾತಾಡುವ ರೀತಿಯನ್ನು ಕಂಡು ಊರಲ್ಲಿ ಓಡಾಡುವುದನ್ನೆ ಬಿಟ್ಟು

ತೋಟದಲ್ಲಿ ವಾಸ ಮಾಡುತ್ತಿದ್ದನು. ಜೈಲಿನಿಂದ ಬಂದ ಕಲ್ಯಾಣಿ ತನ್ನ ಮಗನಿಂದಲೂ ಸುಖಕಾಣದೆ, ಊರಿನ ಜನಗಳು ಅಸಹ್ಯವಾಗಿ ಮಾತನಾಡುವುದನ್ನೇ ಕೇಳಿ, ಮಾನಸಿಕವಾಗಿ ನೊಂದರು ಬೆಳ್ಳಿ ಅವನಿಗೆ ಕಾಳಜಿಯಿಂದ ನೋಡಿಕೊಳ್ಳುತ್ತಿರುತ್ತಾಳೆ. ಆದರೂ ಕಲ್ಯಾಣಿ ದಿನದಿಂದ ದಿನಕ್ಕೆ ಯಾವುದರಲ್ಲೂ ಆಸಕ್ತಿ ಇಲ್ಲದವನಾಗಿ, ಕಷ್ಟದ ಬದುಕನ್ನು ಸಾಗಿಸುತ್ತಾನೆ.

ದೇವೀಂದ್ರ ಕಷ್ಟಪಟ್ಟು ಫತರೂನೊಂದಿಗೆ ತೋಟದಲ್ಲಿ ಕೆಲಸವನ್ನು ಮಾಡುತ್ತಾ ಒಕ್ಕಲುತನವನ್ನು ಮುಂದುವರಿಸಿ, ಕಾಶಮ್ಮನ ತೋಟವನ್ನು ಪಾಲಿಗೆ ಮಾಡುತ್ತಾರೆ. ಆರು ಎತ್ತುಗಳು, ನಾಲ್ಕು ಎಮ್ಮೆಗಳನ್ನು ಖರೀದಿ ಮಾಡುತ್ತಾರೆ. ಹೊಲದಲ್ಲಿ ಕೆಲಸ ಮಾಡಲು ಫಕೀರಪ್ಪನ ಕುಟುಂಬದವರು ವರ್ಷ ಪೂರ್ತಿ ಇವರ ಜೊತೆ ತೋಟದಲ್ಲಿ ಕೆಲಸದಲ್ಲಿ ತೊಡಗುತ್ತಿದ್ದರು. ತೊಗರಿ, ಗೋಧಿಯನ್ನು ಹೆಚ್ಚಾಗಿ ಬೆಳೆದಾಗ ಕಲ್ಯಾಣಿ–ದೇವೀಂದ್ರನನ್ನು ಅಪ್ಪಿಕೊಂಡು ಸಂತೋಷಪಟ್ಟನು. ಹೀಗೆ ಜಮಾದಾರ ಮಲ್ಲಪ್ಪನ ಮರೆಯಾಗಿದ್ದ ತೋಟದ ಬೆಳೆಯನ್ನು ದೇವೀಂದ್ರ ಫತರೂನಿಂದ ಮತ್ತೆ ಕಾಣುವಂತಾಗುತ್ತದೆ. ದೇವೀಂದ್ರ ಮತ್ತು ಫತರೂ ಜಮಾದಾರ ಮಲ್ಲಪ್ಪನ ಕುಟುಂಬಕ್ಕೆ ಆಧಾರಸ್ಥಂಭವಾಗಿ ನಿಲ್ಲುತ್ತಾರೆ.

ಜಮಾದಾರ ಮಲ್ಲಪ್ಪನ ಕುಟುಂಬವು ಬದುಕಿನಲ್ಲಿ ನಾನಾ ವಿಧದ ಸಂಕಷ್ಟಗಳಿಗೆ ಸಿಲುಕಿ ನಲುಗಿ ಹೋಗಿದ್ದುದು, ಮತ್ತೆ ಪ್ರಾರಂಭದ ದಿನಗಳನ್ನು, ಕ್ಷಣಗಳನ್ನು ಕಾಣುವಂತಾಗುತ್ತದೆ. ಆದರೆ ಕಲ್ಯಾಣಿ ಹುಣ್ಣಿಮೆ ದಿನ ತೋಟದಲ್ಲಿ ಮಲಗಿದ್ದಾಗ ಮಲ್ಲವ್ವ ಮತ್ತು ಜಮಾದಾರ ಮಲ್ಲಪ್ಪ ಕನಸಿನಲ್ಲಿ ಬಂದು ಶ್ರೀಶೈಲಕ್ಕೆ ಹೊಗುತ್ತೇವೆ ಎಂದು ಹೊರಡುವುದು ಕಲ್ಯಾಣಿ ಮನಸ್ಸಿಗೆ ಚಿಂತನೆಯಾಗಿ ಕಾಡ ತೊಡಗುತ್ತದೆ. ಇವನೂ ಸಹ ಶ್ರೀಶೈಲಕ್ಕೆ ಹೊರಡಲು ಮುಂದಾಗುತ್ತಾನೆ. ಜೊತೆಯಲ್ಲಿ ಬೆಳ್ಳಿಯೂ ಸಹ ಹೊರಡುತ್ತಾಳೆ. ನಾಗವ್ವಾಯಿ, ಸುಕದೇವಿ, ದೇವೆಂದ್ರ, ಫಕೀರಪ್ಪ, ಫತೂರು ಮತ್ತು ಕಾಶಮ್ಮನಿಗೆ ಹೋಗಿ ಬರುತ್ತೇವೆ ಎಂದಾಗ ಕಲ್ಯಾಣಿ ಮತ್ತು ಬೆಳ್ಳಿಯ ಮನಸ್ಸಿನಲ್ಲಿ ಉಂಟಾಗುವ ನೋವನ್ನು ತಡೆದುಕೊಂಡು ಶ್ರೀಶೈಲಕ್ಕೆ ಹೋಗುತ್ತಾರೆ. ಹೀಗೆ ಆಂತರಿಕ ಬದುಕಿನಲ್ಲಿ ನೋವನ್ನು ಅನುಭವಿಸುತ್ತಲೇ ಜೀವನದ ಪಯಣ ಸಾಗುತ್ತದೆ. ತಿಂಗಳಾದರೂ ಶ್ರೀಶೈಲದಿಂದ ಬರದ ಕಲ್ಯಾಣಿ ಬೆಳ್ಳಿಯರ ಬಗ್ಗೆ ಚಿಂತೆ ಕಾಡಿದಾಗ ಶಾಣಮ್ಮ ಮತ್ತು ಹಾಲಪ್ಪ ಶಿವಳ್ಳಿಗೆ ಬಂದಾಗ ಶ್ರೀಶೈಲದಿಂದ ಹಿಂದುರುಗುವಾಗ ಬಸ್ಸು ದೊಡ್ಡ ಕಮರಿಗೆ ಬಿದ್ದು ಕಲ್ಯಾಣಿ ಬೆಳ್ಳಿಯರು ಸತ್ತ ಸುದ್ದಿ ಶಾಣಮ್ಮ, ಹಾಲಪ್ಪ, ಕಾಶಮ್ಮ, ಫಕೀರಪ್ಪ, ಫತೂರು, ನಿಜಾಮ, ನಾಗವಾಯಿ, ಸುಕದೇವಿ, ದೇವೆಂದ್ರ ಅವರ ಕುಟುಂಬದಲ್ಲಿ ಅಳುವಿನ ಆಕ್ರಂದನ ಮುಗಿಲು ಮುಟ್ಟಿ ಯಾರಿಗೂ ಸಮಾಧಾನ ಹೇಳದಂತಾಗಿ ಸುತ್ತ ಕತ್ತಲು ಕವಿದು ಎಲ್ಲರ ಮೊಗದಲ್ಲೂ ದುಃಖ ಆವರಿಸುತ್ತದೆ.

'ಬದುಕು' ಕಾದಂಬರಿ ಒಂದು ಪ್ರದೇಶ ಸಂಸ್ಕೃತಿಯನ್ನು ಮೂರ್ತ ಮತ್ತು ಅಮೂರ್ತ ನೆಲೆಯಲ್ಲಿ ಕಟ್ಟಿಕೊಡುತ್ತದೆ. ಅದರ ಹಿನ್ನೆಲೆಯಲ್ಲಿರುವ ನಂಬಿಕೆಗಳು ಆಚರಣೆಗಳು ಸಾಂಸ್ಕೃತಿಕ ಸಾಮಾಜಿಕ ಆರ್ಥಿಕ ಮೌಲ್ಯಗಳನ್ನು ಕಾದಂಬರಿಯಲ್ಲಿ ಕಾಣಬಹುದು.

ಲೇಖಕರು ಕಾದಂಬರಿಯಲ್ಲಿ ಕೆಳವರ್ಗದವರ ಮೇಲಾಗುತ್ತಿರುವ ದೌರ್ಜನ್ಯ ಶೋಷಣೆ ಅವರ ಮೂಢನಂಬಿಕೆ, ಕ್ರೌರ್ಯ ಹಿಂಸೆ ಹಸಿವು ಕೆಟ್ಟ ಆಚರಣೆಗಳನ್ನು ಹತ್ತಿರದಿಂದ ಕಂಡು ಆ ಜನಾಂಗದ ಸಮಗ್ರ ಬದುಕನ್ನು ಎಲ್ಲಾ ಸಂಕೀರ್ಣತೆಯೊಂದಿಗೆ ಕಟ್ಟಿಕೊಟ್ಟಿದ್ದಾರೆ.

ಜಮಾದಾರ ಮಲ್ಲಪ್ಪನ ಕುಟುಂಬವೇ ಕೇಂದ್ರ ವಸ್ತುವಾದರೂ ಇತರ ನಾನಾ ಜನಾಂಗದವರ ನೋವು-ನಲಿವುಗಳನ್ನು ಉಡುಗೆ-ತೊಡುಗೆಗಳನ್ನು, ಆಭರಣಗಳ ವರ್ಣನೆಗಳನ್ನು ಜೊತೆಗೆ ಸೊಂಟದ ಕೆಳಗಿನ ಬೈಗುಳಗಳನ್ನು, ಸಂಭೋಗದ ವರ್ಣನೆಗಳನ್ನೂ, ಹೈದ್ರಾಬಾದ್ ಕರ್ನಾಟಕದ ಆಡುಭಾಷೆಯಲ್ಲಿ ಸಮರ್ಥವಾಗಿ ವಿವರಿಸಿದ್ದಾರೆ.

[೧೬]"ಕಾದಂಬರಿಗೆ ಯಶಸ್ಸು ದಕ್ಕುವುದಕ್ಕೆ ಮುಖ್ಯ ಕಾರಣ ಭಾಷೆ. ಅತ್ಯಂತ ವಿಸ್ತೃತ ಕಥಾವಸ್ತುವನ್ನು ನಿರ್ವಹಿಸುವ ಭಾಷೆ ಕಲ್ಬುರ್ಗಿ ಕನ್ನಡದ, ದಲಿತರ ಬದುಕಿನ ಸೊಗಡು ಸಾರವೆಲ್ಲ ಕೆನೆಗಟ್ಟಿರುವ ಭಾಷೆ. ಈ ಭಾಷೆಯಲ್ಲಿ ಅಲ್ಲದಿದ್ದರೆ, ಈ ಸಂಸ್ಕೃತಿಯನ್ನು ಕಟ್ಟಿ ಕೊಡುವುದೇ ಸಾಧ್ಯವಿಲ್ಲವೇನೋ ಎಂಬಂತಹ ಅವಿನಾಭಾವ ಸಂಬಂಧ ಇಲ್ಲಿಯ ಭಾಷೆ ಮತ್ತು ವಸ್ತುವಿನದು. ಅತ್ಯಂತ ಸಹಜವಾಗಿ ಸರಳವಾಗಿ ಆಯಾವರ್ಗದ ಭಾಷೆ ಬಳಸಲ್ಪಟ್ಟಿದೆ. ಪಾತ್ರ ಸಂಭಾಷಣೆಯಷ್ಟೇ ಅಲ್ಲದೆ, ನಿರೂಪಣೆಯಲ್ಲೂ ಈ ದೇಸೀತನದ ಸೊಗಸು ಮೆರೆದಿದೆ."[೧೬]

ಹೈದ್ರಾಬಾದ್ ಕರ್ನಾಟಕದ ಗ್ರಾಮೀಣ ಜನಾಂಗದ ಜೀವನದ ಕ್ರಮವನ್ನು ಹಾಗೂ ಧಾರ್ಮಿಕ ಮೂಢನಂಬಿಕೆಗಳ ಆಚರಣೆಯ ಪದ್ಧತಿಯನ್ನು ದಲಿತರ ಬದುಕಿನ ಹೋರಾಟದ ಏಳು-ಬಿಳುಗಳನ್ನು, 'ಬದುಕು' ಕಾದಂಬರಿಯ ಅಧ್ಯಯನದಿಂದ ತಿಳಿಯಬಹುದು. ಕಾದಂಬರಿಯಲ್ಲಿ ಹತ್ತಾರು ಪಾತ್ರಗಳು ಬರುತ್ತವೆ. ಪಾತ್ರಗಳ ಮೂಲಕ ಅನೇಕ ತಿರುವುಗಳನ್ನು ಕಾಣಬಹುದು. ಶೋಷಿತ ಸಮುದಾಯದ ಪರ ನಿಂತು ದನಿಯೆತ್ತುವ ಪಾತ್ರಗಳೂ ಸಹ ಇವೆ. ಕೆಲವು ಪ್ರಮುಖ ಪಾತ್ರಗಳು ಅನೇಕ ನೆಲೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಯಾವುದೇ ಪ್ರತಿರೋಧವಿಲ್ಲದಿರುವುದು ಒಂದಾದರೆ ಕೆಲವು ಪ್ರತಿಭಟಿಸುವಂತಹ ಪಾತ್ರಗಳು ಕಂಡು ಬರುತ್ತವೆ.

ಹೀಗೆ ಬದುಕು ಕಾದಂಬರಿಯಲ್ಲಿ ಬರುವ ಎಲ್ಲಾ ಪಾತ್ರಗಳೂ ಜೀವಂತವಾಗಿವೆ. ಜಮಾದಾರ ಮಲ್ಲಪ್ಪ ಕಾದಂಬರಿಯ ಪ್ರಮುಖ ಪಾತ್ರವಾದರೆ ಇತರ ಪಾತ್ರಗಳು ಬಹಳ

ಮುಖ್ಯವಾಗಿ ಕಾರ್ಯನಿರ್ವಹಿಸುತ್ತವೆ. ಈ ಕಾದಂಬರಿಯಲ್ಲಿ ಕೆಳಗೇರಿ ದಲಿತರ ಬದುಕಿನ ಪಾತ್ರಗಳ ವಿವರಗಳನ್ನು ಡಾ. ಗೀತಾರವರು ವಿವರಣಾತ್ಮಕವಾಗಿ ನೀಡಿದ್ದಾರೆ. ಒಂದೊಂದು ಪಾತ್ರವೂ ಸಮಾಜದಲ್ಲಿರುವ ಶೋಷಣೆ, ಹಿಂಸೆ, ಕ್ರೌರ್ಯವನ್ನು ಎದುರಿಸುವ ಪಾತ್ರಗಳಾದರೆ, ಮತ್ತೆ ಕೆಲವು ದೈಹಿಕ ಸುಖಕ್ಕೆ ಮೂಢನಂಬಿಕೆಯ ಆಚರಣೆಗೆ ಬಲಿಯಾಗುವ ಪಾತ್ರಗಳಾಗಿವೆ. 'ಬದುಕು' ಕಾದಂಬರಿಯಲ್ಲಿ ಒಂದು ಸಮುದಾಯದ ಸಮಗ್ರ ಬದುಕಿನ ದರ್ಶನವಿದೆ. ಇಲ್ಲಿನ ಪಾತ್ರಗಳಲ್ಲಿ ಕಾದಂಬರಿಯ ಬೆಳವಣಿಗೆಯಲ್ಲಿ ಬಹುಮುಖ್ಯ ಎನಿಸುವ ಕೆಲವು ಪಾತ್ರಗಳ ಒಂದು ಸ್ಥೂಲ ಪರಿಚಯ ಹೀಗಿದೆ :-

ಪ್ರಮುಖ ಪಾತ್ರಗಳು:

ಫತರೂ

ತುಳಜಾ

ನೀಲವ್ವ

ಹಾಲಪ್ಪ

ಮಾರ್ತಾಂಡ

ನಾಗವ್ವಾಯಿ

ಸಣ್ಣಮಲ್ಲು

ಈರವ್ವ

ಫತರೂ:

ಫತರೂ ಮಲ್ಲಪ್ಪ ಜಮಾದಾರನ ಆಳು ಮಗ. ಆದರೆ ಮಲ್ಲಪ್ಪ ಅವನನ್ನು ಸ್ವಂತ ಮಗನಾಗಿ ಪ್ರೀತಿಯಿಂದ ಕಾಣುತ್ತಿದ್ದ. ಫತರೂ ಮಲ್ಲಪ್ಪನ ಸಂಸಾರದ ಕಷ್ಟ ಸುಖಗಳಲ್ಲಿ ಹಗಲಿರುಳು ಮನೆಮಗನಂತೆ ಜೊತೆಯಿದ್ದ, ಫತರೂ ಸಣ್ಣವನಾಗಿದ್ದಾಗ ತಂದೆ ತಾಯಿಯನ್ನೂ ಕಳೆದುಕೊಂಡು ಮಲ್ಲಪ್ಪನ ಒಡಲಿಗೆ ಬಿದ್ದಿದ್ದ. ಅದರಂತೆ ಮಲ್ಲಪ್ಪ ಅವನನ್ನ ಎಂದೂ ಹಿಂಸಿಸದೆ ಸಾಕಿದನು. ಜಾತಿಯಲ್ಲಿ ಮುಸ್ಲಿಂನಾದರೂ ಮಲ್ಲಪ್ಪನ ಒಕ್ಕಲುತನದಿಂದ ಹಿಡಿದು ಎಲ್ಲಾ ರೀತಿಯಲ್ಲಿ ಸಹಕಾರಿಯಾಗಿದ್ದನು. ಫತೂರನನ್ನು ಕಾಶಮ್ಮ ಅಣ್ಣನೆಂದು ಶಾಣಮ್ಮ ತಮ್ಮನೆಂದು ಗೌರವದಿಂದ ಕಾಣುತ್ತಿದ್ದರು. ಕಲ್ಯಾಣಿಯು ಜೈಲಿಗೆ ಹೋದಾಗ ಬೆಳ್ಳಿಯ ಕಷ್ಟದಲ್ಲಿ ಭಾಗಿ ಆಗಿದ್ದನು. ಕಲ್ಯಾಣಿಯನ್ನು ಬಿಡುಗಡೆ ಮಾಡಿಸಲು ಕಲ್ಯಾಣಿಗೆ ಗೊತ್ತಿಲ್ಲದ

ರೀತಿ ಕಾಶಮ್ಮನಿಂದ ಹಣವನ್ನು ತಂದು ಬೆಳ್ಳಿಯ ಸಾಲವನ್ನು ತೀರಿಸಿ ಮನೆ, ಸಂಸಾರದಲ್ಲಿ ಬೆಳ್ಳಿಗೆ ಬೆನ್ನೆಲುಬಾಗಿ ನಿಂತನು. ಬದುಕು ಕಾದಂಬರಿಯಲ್ಲಿ ಫತರೂನ ಪಾತ್ರ ಬಹಳ ವಿಶಿಷ್ಟವಾಗಿ ಮೂಡಿ ಬಂದಿದೆ. ಫತರೂನಿಗೆ ಬಾಡು, ಸೇಂದಿ, ಎಂದರೆ ಬಲು ಇಷ್ಟ ಮೊಲ, ಮೀನು, ಬೇಟೆ ಆಡುವುದರಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದನು. ಕಲ್ಯಾಣಿಯು ಫತರೂನಿಗೆ ನಜಮಾಳ ಜೊತೆ ಮದುವೆ ಮಾಡಿ. ಫತರೂನಿಗೆ ಹೊಲವನ್ನು ಖರೀದಿ ಮಾಡಿ ನೋಂದಣಿ ಮಾಡಿಸಿ ಉಡುಗೊರೆಯಾಗಿ ಕೊಟ್ಟು ಕಲ್ಯಾಣಿ ಬೆಳ್ಳಿಯರು ಫತರೂನು ಮಾಡಿದ ಸಹಾಯಕ್ಕೆ ಕೃತಜ್ಞತೆ ಸಲ್ಲಿಸಿದರು.

ತುಳಜಾ:

ತುಳಜಾ ಜಂಬಗಿಹಳ್ಳಿಯ ಮಾದರ ಕಳಸಪ್ಪನ ಮಗಳು. ಚುಂಚೂರು ಮಾಪುರ ದೇವಿಗೆ ಜೋಗಿಣಿ ಎಂಬ ಹರಕೆಗೆ ಬಲಿಯಾಗಲು ನಿಂತವಳು. ತುಳಜಾ ತನ್ನ ಕೇರಿಯ ಹಲವು ಜೋಗಿಣಿಯರ ಬದುಕಿನ ದಾರುಣ ಜೀವನಗಾಥೆಯನ್ನು ತಿಳಿದ ತುಳಜಾ, ಜೋಗಿಣಿ ಪದ್ಧತಿಗೆ ವಿರುದ್ಧವಾಗಿ ನಡೆಯುತ್ತಾಳೆ. ಆದರೆ ಸಂಪ್ರದಾಯ ಬಿಡದೆ ತುಳಜಾಳನ್ನು ಜೋಗಿಣಿಯಾಗಿ ಬಿಡುತ್ತಾರೆ. ಈ ಪದ್ಧತಿ ಇವಳಿಗೆ ಒಗ್ಗದೆ ಊರೂರು ತಿರುಗಿ ಭಿಕ್ಷೆ ಬೇಡುತ್ತಾ ಕಲ್ಬುರ್ಗಿಯ ಸಂತೆಯಲ್ಲಿ ದೇವಿಯ ಹಾಡಿನ ದನಿಗೆ ಮನಸೋತ ಹುಸೆನಪ್ಪ ತುಳಜಾಳನ್ನು ಮದುವೆ ಮಾಡಿಕೊಂಡು ಮುಂಬೈ ಪಟ್ಟಣಕ್ಕೆ ಕರೆದೊಯ್ಯುತ್ತಾನೆ. ತುಳಜಾ ಗಂಡು ಮಗುವಿಗೆ ಜನ್ಮ ನೀಡಿ ತಾಯಿ ತಂದೆ ನೋಡಲು ಊರಿಗೆ ಬಂದಾಗ ಪೂಜಾರಪ್ಪನಿಗೆ ವಿಷಯ ತಿಳಿದು ಊರಿನಲ್ಲಿ ಪಂಚಾಯಿತಿ ಮಾಡಿಸಿದಾಗ ತುಳಜವ್ವ ಜೋಗಿಣಿ ಎಂಬ ಅನಿಷ್ಟ ಪಿಡುಗಿನ ವಿರುದ್ಧ ಹೋರಾಟ ಮಾಡಿದ ಹೆಣ್ಣಾಗಿ ನಿಲ್ಲುತ್ತಾಳೆ. ಗರತಿಯಾಗಿ ಬಾಳಬೇಕೆಂಬ ಆಸೆ ಹೊಂದಿದ್ದ ತುಳಜಾ ಸಂಪ್ರದಾಯಕ್ಕೆ ಮಣಿದು ಜೋಗಿಣಿ ಆಗಿ ನಂತರ ಹುಸನಪ್ಪನ ಜೊತೆ ಗರತಿಯಾಗಿ ಬದುಕು ಸಾಗಿಸುತ್ತಾಳೆ.

ಡಾ. ಗೀತಾರವರು ತುಳಜಾ ಪಾತ್ರವನ್ನು ವಿಶಿಷ್ಟ ರೀತಿಯಲ್ಲಿ ಚಿತ್ರಿಸಿದ್ದಾರೆ.

ನೀಲವ್ವ:

ನೀಲವ್ವ ದೊಡ್ಡಿ ಹೊಲ್ಯಾ ಭರಮ್ಯಾ ಮತ್ತು ಮರಗಿಯ ಮಗಳು. ಇವಳನ್ನು ಮಾಪುರ ತಾಯಿ ಜಾತ್ರೆಯಲ್ಲಿ ದೇವಿ ಪಟ್ಟಕ್ಕೆ ಹಾಕಿ ಸೇವೆಗೆ ಬಿಡಲು ತಯಾರು ಮಾಡಿದಾಗ ನೀಲವ್ವ ಕರುಳು ಹಿಚುಕುವ ಹಾಗೆ ಜೋಗಿಣಿ ಆಗೊಲ್ಲ ಎಂದು ಗೋಳಾಡಿದರೂ,

ಅವಳನ್ನು ಇಷ್ಟವಿಲ್ಲದಿದ್ದರೂ ಜೋಗಿಣಿಯಾಗಿ ಮಾಡಿ ನೀಲವ್ವನ ಬದುಕನ್ನು ಅಂಧಕಾರದಲ್ಲಿ ಮುಳುಗಿಸುತ್ತಾರೆ. ಈ ಕೆಟ್ಟ ಆಚರಣೆಗಳು, ದಲಿತ ಹೆಣ್ಣುಮಕ್ಕಳಿಗೆ ಮಾತ್ರ ಮೀಸಲು. ಮೇಲ್ವರ್ಗದ ಜನಾಂಗದಲ್ಲಿ ಈ ಪದ್ಧತಿಗಳು ಕಂಡುಬರುವುದಿಲ್ಲ. ಈ ಮೂಢನಂಬಿಕೆಯ ಪದ್ಧತಿಯಿಂದ ಮಾನಸಿಕವಾಗಿ ನೊಂದ ನೀಲವ್ವ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಹಾಲಪ್ಪ:

ಹಾಲಪ್ಪ ಜಮಾದಾರ ಮಲ್ಲಪ್ಪನ ಸೋದರಳಿಯ ಇವನು ಶಾಣಮ್ಮನನ್ನು ಮದುವೆ ಆಗಿ ಗುಲ್ಬರ್ಗಾದಲ್ಲಿ ಬಟ್ಟೆ ಗಿರಾಣಿಯಲ್ಲಿ ಕೆಲಸದಲ್ಲಿ ಇರುತ್ತಾನೆ. ಇವನು ಮಲ್ಲಪ್ಪನ ಸಂಸಾರದಲ್ಲಿ ಬಹಳ ಪ್ರಮುಖ ಪಾತ್ರವಹಿಸುತ್ತಾನೆ. ಹಾಲಪ್ಪನ ಮನಸ್ಸು ಹಾಲಿನಂಥಾದ್ದು ಇವನು ಕಾಶಮ್ಮನನ್ನು ಸೊಲ್ಲಾಪುರದ ಮಾರ್ತಾಂಡನಿಗೆ ಮದುವೆ ಮಾಡಿಸಿ ಹಾಗೂ ತನ್ನ ಮಗಳಾದ ಬೆಳ್ಳಿಯನ್ನು ಕಲ್ಯಾಣಿಗೆ ಕೊಟ್ಟು ಮದುವೆ ಮಾಡುತ್ತಾನೆ. ಹೀಗೆ ತನ್ನ ಜೀವನವನ್ನು ಮಲ್ಲಪ್ಪನ ಸಂಸಾರಕ್ಕೆ ಮುಡುಪಾಗಿಟ್ಟು ಆ ಮನೆಯ ಆಗುಹೋಗುಗಳ ಬಗ್ಗೆ ಎಂಥ ಕಷ್ಟ ಪರಿಸ್ಥಿತಿ ಬಂದರೂ ಅದನ್ನೆಲ್ಲ ಧೈರ್ಯದಿಂದ ಎದುರಿಸುತ್ತಿದ್ದನು. ಹಾಲಪ್ಪ ಮತ್ತು ಶಾಣಮ್ಮನವರ ದೇಹ ಗುಲ್ಬರ್ಗಾದಲ್ಲಿ ಇದ್ದರೂ, ಮನಸ್ಸು ಮಾತ್ರ ಶಿವಳ್ಳಿಯಲ್ಲಿ ಇರುತ್ತಿತ್ತು. ಹೀಗೆ ಹಾಲಪ್ಪ ಕಾದಂಬರಿಯಲ್ಲಿ ಪ್ರಾರಂಭದಿಂದಲೂ ಅಂತ್ಯದವರೆಗೂ ವಿಶಿಷ್ಟ ರೀತಿಯಲ್ಲಿ ಕಾರ್ಯ ನಿರ್ವಹಿಸುವುದನ್ನು ಕಾಣಬಹುದು.

ಮಾರ್ತಾಂಡ :

ಕಾದಂಬರಿಯಲ್ಲಿ ವಿಶೇಷವಾಗಿ ಮಾರ್ತಾಂಡನ ಪಾತ್ರ ಓದುಗನ ಹೃದಯವನ್ನು ತಲ್ಲಣಗೊಳಿಸುತ್ತದೆ. ಮಾರ್ತಾಂಡ ಜಮಾದಾರ ಮಲ್ಲಪ್ಪನ ಎರಡನೆ ಮಗಳಾದ ಕಾಶಮ್ಮನ ಗಂಡ. ಇವನು ಸೊಲ್ಲಾಪುರದಲ್ಲಿ ಬಟ್ಟೆಗಿರಣಿಯಲ್ಲಿ ಉದ್ಯೋಗ ಮಾಡುತ್ತಿರುತ್ತಾನೆ. ಇವನಿಗೆ ಹಾಲಪ್ಪ ಕಾಶಮ್ಮನನ್ನು ಕೊಟ್ಟು ಲಗ್ನ ಮಾಡಿಸಿರುತ್ತಾನೆ. ಮಾರ್ತಾಂಡ ರೂಪವಂತ ಗುಣವಂತನೂ ಆಗಿರುತ್ತಾನೆ. ಕಾಶಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾನೆ. ಆದರೆ ಕಾಶಮ್ಮನ ನಡತೆಯ ಬಗ್ಗೆ ಮಾರ್ತಾಂಡನಿಗೆ ತಿಳಿದಿರುವುದಿಲ್ಲ ಕಾಶಮ್ಮನ ಉಸಿರು ಸೊಲ್ಲಾಪರದಲ್ಲಿದ್ದರೆ. ಮನಸ್ಸು ಮಾತ್ರ ಸಾವುಕಾರ ಲಿಂಗರಾಜನಲ್ಲಿರುತ್ತದೆ. ಕಾಶಮ್ಮ ಮಾರ್ತಾಂಡನಿಗೆ ದ್ರೋಹ ಮಾಡಿ ಲಿಂಗರಾಜನ ಜೊತೆ ಬಂದು ತೋಟದಲ್ಲಿ ರಂಡೆಯಾಗಿ ಸೇರಿಕೊಳ್ಳುತ್ತಾಳೆ. ಮಾರ್ತಾಂಡ ಕಾಶಮ್ಮನ ಹತ್ತಿರ ಬಂದು ಕಾಲಿಗೆ ಬಿದ್ದು ಬೇಡಿಕೊಂಡರೂ

ಅವಳು ಅವನ ಜೋತೆ ಹೋಗದೆ ನೀನು ನನಗೆ ತಾಳಿ ಕಟ್ಟಿದ್ದರೂ ನಾನು ನಿನ್ನನ್ನು ಗೆಳೆಯನಾಗಿ ನೋಡಿದ್ದೇನೆ, ಆದರೆ ಲಿಂಗರಾಜ ಈ ನನ್ನ ದೇಹಕ್ಕೆ ಮನಸ್ಸಿಗೆ ಅವನೆ ಯೋಗ್ಯನಾದವನು. ನೀನು ಬೇರೆ ಮದುವೆ ಆಗು ಎಂದಾಗ ಮಾರ್ತಾಂಡ ಊರೂರು ಸುತ್ತುತ್ತ ಅರೆ ಹುಚ್ಚನಾಗಿ ಸಾಯುವ ಮೊದಲು ಕಾಶಮ್ಮನನ್ನು ನೋಡಿ ಶಿವಳ್ಳಿಯ ಊರಿನ ಹೊರಗಡೆ ಸಾಯುವುದನ್ನು ಕಾಣಬಹುದು.

ಮಾರ್ತಾಂಡ ಕಾಶಮ್ಮನನ್ನು ಮದುವೆಯಾಗಿ ಎಂದೂ ಸುಖ ಪಡದೆ ಕಷ್ಟದ ಸುಳಿಯಲ್ಲಿ ಸಿಲುಕಿ ಬದುಕಿನಲ್ಲಿ ಮೇಲೇಳದೆ ತನ್ನ ಜೀವನದ ಕೊನೆಯವರೆಗೆ ಕಾಶಮ್ಮನ ನೆನಪಿನಲ್ಲಿರುವುದನ್ನು ಕಾಣಬಹುದು.

ಮಾರ್ತಾಂಡ ಪ್ರೀತಿಯ ತ್ಯಾಗಕ್ಕೆ ಆದರ್ಶವ್ಯಕ್ತಿ ಆಗುತ್ತಾನೆ. ತಾಳಿಕಟ್ಟಿದ ಹೆಂಡತಿ ಲಿಂಗರಾಜನ ಜೊತೆ ಓಡಿ ಹೋಗಿ ಬಾಳ್ವೆ ಮಾಡುತ್ತಿದ್ದರೂ ಮಾರ್ತಾಂಡ ಅಲ್ಲಿಗೆ ಹೋಗಿ ಮತ್ತೆ ಜೀವನ ಮಾಡಲು ಕರೆಯುತ್ತಾನೆ, ಅವಳು ಬಾರದೆ ಲಿಂಗರಾಜನ ಜೊತೆಯಲ್ಲಿ ಉಳಿಯುವ ನಿರ್ಧಾರ ತಿಳಿಸುತ್ತಾಳೆ. ಆದರೆ ಮಾರ್ತಾಂಡ ಕಾಶಮ್ಮ ಲಿಂಗರಾಜನ ತೋಟದಲ್ಲಿ ಇದ್ದಾಳೆ ಎಂದು ತಿಳಿದರೂ ಪ್ರತಿಭಟನೆಯನ್ನಾಗಲೀ, ಸೇಡನ್ನಾಗಲೀ ತೋರಿಸದೆ ಸಂಕಟದ ಬದುಕಿನಲ್ಲಿ ನೊಂದು ಕಾಲವಾಗುತ್ತಾನೆ.

ನಾಗವ್ವಾಯಿ:

ನಾಗವ್ವಾಯಿ ಜಮಾದಾರ ಮಲ್ಲಪ್ಪನ ಮನೆಯ ಹತ್ತಿರ ಇರುವ ಬ್ಯಾಡರ ವಠಾರದಲ್ಲಿ ನಾಗವ್ವಾಯಿ ಗುಡಿಸಲು ಇತ್ತು ಮಗ ಹೆಂಡತಿ ಮಾತು ಕೇಳಿ ನಾಗವ್ವಾಯಿಯನ್ನು ಹೊರಗೆ ಹಾಕಿದರು. ಐವತ್ತು ವರ್ಷದಾಟಿದರೂ ಗಟ್ಟಿ ಮುಟ್ಟಾಗಿರುವ ಹೆಂಗಸು ಗಂಡ ಸತ್ತನಂತರ ಮನೆಯಿಂದ ಹೊರಬಿದ್ದು ದುಡಿಯಲು ಶುರು ಮಾಡಿ ಗಂಡಸರಲ್ಲಿ ಗಂಡಸಾಗಿ ಹೆಂಗಸರಲ್ಲಿ ಹೆಂಗಸಾಗಿ ಕೂಲಿಮಾಡುತ್ತಿದ್ದಳು. ನಾಗವ್ವಾಯಿಗೆ ಸೇಂದಿ, ಮಾಂಸದ ಖಂಡ, ಬೀಡಿ ಎಲೆ, ತಂಬಾಕುಗಳು ಪ್ರಿಯವಾಗಿದ್ದವು. ನಾಗವ್ವಾಯಿ ಹರೆ ವಯಸ್ಸಿನಲ್ಲಿ ಈಳಿಗೇರ ಸಾಬಯ್ಯನಿಗೂ ಮತ್ತು ನಾಗವ್ವಾಯಿಗೂ ಸಂಬಂಧವಿದ್ದರು ಅದು ಬಹಳ ಕಾಲ ಉಳಿಯಲಿಲ್ಲ. ನಾಗವ್ವಾಯಿ ಮಲ್ಲಪ್ಪ ಮಲ್ಲವ್ವ ಸಾವಿನ ನಂತರ ಬೆಳ್ಳಿಗೆ ಆಸರೆಯಾಗಿ ನಿಂತಳು, ಕಾದಂಬರಿಯಲ್ಲಿ ಅವಳು ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾ ಜನರನ್ನೂ ರೇಗಿಸುವ ಪ್ರವೃತ್ತಿಯನ್ನು ಹೊಂದಿದ್ದಳು.

ಸಣ್ಣಮಲ್ಲು:

ಸಣ್ಣಮಲ್ಲು ಕಲ್ಯಾಣಿ ಮತ್ತು ಬೆಳ್ಳಿಯರ ಮಗ. ಅವನು ಕಲ್ಯಾಣಿಗೆ ವಿರುದ್ಧವಾಗಿ ನಡೆಯುತ್ತಾನೆ. ಅಪ್ಪ ಕೊಲೆಗಡುಕ ಜೈಲುವಾಸ ಅನುಭವಿಸಿದವನು ಎಂದು ಕಲ್ಯಾಣಿಯ ಮುಖವನ್ನು ನೋಡದೆ ಗುಲ್ಬರ್ಗಾದ ಶಾಣಮ್ಮನ ಮನೆಯಲ್ಲಿ ಇದ್ದು ಅಲ್ಲಿಯೆ ವಿದ್ಯಾಭ್ಯಾಸವನ್ನು ಮಾಡಿ ಸರಕಾರಿ ನೌಕರಿಗೆ ಸೇರಿ ಮರಾಠಿ ಹುಡುಗಿಯನ್ನು ಲಗ್ನವಾಗಿ ಶಿವಳ್ಳಿಯಲ್ಲಿ ತಂದೆ ತಾಯಿಯ ಪರಿಸ್ಥಿತಿಯನ್ನು ವಿಚಾರಿಸದೆ ತನ್ನ ಪಾಲಿಗೆ ಬಂದ ಆಸ್ತಿಯನ್ನು ತಂಗಿ ಸುಕದೇವಿಗೆ ಬರೆದುಕೊಟ್ಟು ಕೊಲೆಗಾರನ ಮಗ ಎಂದು ಕರೆಸಿಕೊಳ್ಳಲು ಇಷ್ಟವಿಲ್ಲದ ವ್ಯಕ್ತಿಯಾಗಿ, ಜಾತಿ ಪದ್ಧತಿಯನ್ನು ತಿರಸ್ಕರಿಸಿ ಅಂತರಜಾತಿ ವಿವಾಹವನ್ನು ಮಾಡಿಕೊಂಡು ಉತ್ತಮ ಸಂಸ್ಕಾರದ ವ್ಯಕ್ತಿತ್ವವನ್ನು ಕಂಡುಕೊಂಡು ಆಧುನಿಕತೆಯ ತಳಹದಿಯಲ್ಲಿ ಜೀವನವನ್ನು ಸಾಗಿಸುತ್ತಾ ನ್ಯಾಯ ನೀತಿಯಿಂದ ಕೂಡಿದ ಆದರ್ಶ ವ್ಯಕ್ತಿತ್ವವುಳ್ಳವನಾಗಿದ್ದ. ಕಲ್ಯಾಣಿ ಮತ್ತು ಬೆಳ್ಳಿ ತನ್ನ ಮಗ ಸಣ್ಣಮಲ್ಲು ತೆಗೆದುಕೊಂಡ ನಿರ್ಧಾರದಿಂದ ಅವರ ಮನಸ್ಸಿನಲ್ಲಿ ತುಂಬಾ ನೊಂದುಕೊಳ್ಳುತ್ತಾರೆ. ಮಗಳಾದ ಸುಕದೇವಿಯ

❖ ❖ ❖

ಅಡಿ ಟಿಪ್ಪಣಿಗಳು

೧. ಪುಟ ೨೫, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೨. ಪುಟ ೮೬, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೩. ಪುಟ ೧೦೫, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೪. ಪುಟ ೩೧೫, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೫. ಪುಟ ೪೩೮, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೬. ಪುಟ ೩೭೪–೨೫೧, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೭. ಪುಟ ೪೩೮, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೮. ಪುಟ ೧೦೯, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೯. ಪುಟ ೨೬೪, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೧೦. ಪುಟ ೨೦೬, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೧೧. ಪುಟ ೪೪೯, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೧೨. ಪುಟ ೪೨೪, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೧೩. ಪುಟ ೪೫೭ ' ಬದುಕು', ಲೇ: ಡಾ॥ ಗೀತಾ ನಾಗಭೂಷಣ

೧೪. ಪುಟ ೩೬೫–೨೫೧, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೧೫. ಪುಟ ೪೫೮, 'ಬದುಕು', ಲೇ: ಡಾ॥ ಗೀತಾ ನಾಗಭೂಷಣ

೧೬. ಪುಟ ೬೯, 'ಕಲಬುರ್ಗಿಯ ಸ್ಪಂದನ', ಡಾ॥ ಸರಸ್ವತಿ ಚಿಮ್ಮಲಗಿ

❖ ❖ ❖

ಸಮಾರೋಪ

ಡಾ. ಗೀತಾನಾಗಭೂಷಣ ಹೆಸರಾಂತ ಕಾದಂಬರಿಗಾರ್ತಿ ಆಗಿ ಕನ್ನಡ ಸಾಹಿತ್ಯದಲ್ಲಿ ತನ್ನದೆ ಆದ ಸ್ಥಾನಮಾನವನ್ನು ಪಡೆದಿದ್ದಾರೆ ಅವರ ಹಲವಾರು ಕಾದಂಬರಿಗಳು ಓದುಗರ ಗಮನ ಸೆಳೆದಿವೆ. ಅವರ 'ಬದುಕು' ಕಾದಂಬರಿ ಮಹತ್ವದ ಕೊಡುಗೆಯಾಗಿದೆ. ನೀಡಿದೆ ಕಾದಂಬರಿಯಲ್ಲಿ ಕೆಳವರ್ಗದ ಜನಜೀವನವನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ.

ಸಮಾಜದಲ್ಲಿ ನಡೆಯುವ ಧಾರ್ಮಿಕ ಆಚರಣೆಗಳು ಕೆಳವರ್ಗದವರ ಸುಖ ದುಃಖಗಳು, ರೀತಿ ರಿವಾಜು, ಶಾಸ್ತ್ರ ಸಂಪ್ರದಾಯಗಳು, ಮೂಢ ನಂಬಿಕೆಗಳು. ದಲಿತ ಸ್ತ್ರೀಯರ ಮೇಲೆ ನಡೆಯುವ ಕ್ರೌರ್ಯ, ವರ್ಗ ಸಂಘರ್ಷ, ವರ್ಣ ಭೇದ, ಜಮೀನ್ದಾರಿ ಪದ್ಧತಿ ಜೋಗಿಣಿ ಪದ್ಧತಿ, ಹಸಿ ಹಸಿ ಪ್ರೇಮ ಪ್ರಣಯ, ಕಾಮ, ಕುಡಿತ, ಸಾಮಾಜಿಕ ಚಿತ್ರಣ ಅವರ ಕಾದಂಬರಿಯ ವಸ್ತುವಾಗಿದೆ. ಗ್ರಾಮೀಣ ಬದುಕಿನ ಜೀವನವನ್ನು ಹತ್ತಿರದಿಂದ ಕಂಡಂತಹ ಗೀತಾರವರು ಗುಲ್ಬರ್ಗಾದ ಜಿಲ್ಲೆಯ ಆಡು ಭಾಷೆಯಲ್ಲಿ ಜಾನಪದ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಕಾದಂಬರಿಯನ್ನು ಸೃಷ್ಟಿಸಿದ್ದಾರೆ.

ಡಾ. ಗೀತಾರವರು ಹಿಂದುಳಿದ ಜನಾಂಗದಲ್ಲಿ ಹುಟ್ಟಿ ಅವರು ಕಡು ಬಡತನದಲ್ಲಿ ಬೆಳೆದು, ವಿದ್ಯಾಭ್ಯಾಸ ಮಾಡಿ ಉಪನ್ಯಾಸಕಿ ಆಗಿ ಕಾರ್ಯನಿರ್ವಹಿಸಿ ಅನೇಕ ಪರಿಸ್ಥಿತಿಗಳು ಎದುರಾದರೂ ಎದೆಗುಂದದೆ ಲೇಖನಿ ಹಿಡಿದು ಛಲಗಾರ್ತಿಯಾಗಿ ವಿರಳ ಸಾಹಿತಿಗಳಲ್ಲಿ ಡಾ. ಗೀತಾನಾಗಭೂಷಣ ಅಗ್ರಗಣ್ಯರೆನಿಸಿಕೊಂಡರು.

ಡಾ. ಗೀತಾನಾಗಭೂಷಣರವರು ತಮ್ಮ ಕಾದಂಬರಿಯಲ್ಲಿ ಹಳ್ಳಿಯ ಅಮಾಯಕ ದಲಿತ ಮಹಿಳೆಯರ ನೋವು, ಸಂಕಟ, ಶೋಷಣೆ, ದೌರ್ಜನ್ಯ, ಚುಂಚುರಿನ 'ಮಾಪುರ ತಾಯಿಯ' ಹೆಸರಿನಲ್ಲಿ ದಲಿತ ಜನಾಂಗದವರಲ್ಲಿ ಇರುವ ಬೆತ್ತಲೆ ಸೇವೆ ಜೋಗಿಣಿ ಪದ್ಧತಿಯ ಆಚರಣೆ ದೇವಿಯ ಹೆಸರಿನಲ್ಲಿ ಸೂಳೆಗಾರಿಕೆಯ ಪದ್ಧತಿ ಸಮಾಜದ ಮೇಲೆ ಯಾವ ರೀತಿ ಕೆಟ್ಟ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ವಿಶ್ಲೇಷಣಾತ್ಮಕವಾಗಿ ಹೇಳಲಾಗಿದೆ ಮತ್ತು ಸಾಮಾಜಿಕ ಪ್ರಜ್ಞೆ ಕುರಿತು ಕೆಲವು ಅಂಶಗಳನ್ನು ಕುರಿತು ಚರ್ಚೆಗೆ ಒಳಪಡಿಸಲಾಗಿದೆ.

ದಲಿತ ಜನಾಂಗದವರ ಝೋಪಡಿ ಒಳಗಿನ ದುಃಖ ದುಮ್ಮಾನಗಳನ್ನು ಹತ್ತಿರದಿಂದ ಕಂಡಂತಹ ಗೀತಾರವರು ದಲಿತ ಸ್ತ್ರೀಯರನ್ನು ಕೇಂದ್ರೀಕರಿಸಿ ಮತ್ತು ಕೆಳವರ್ಗದ ಅನಕ್ಷರಸ್ಥ ಹೆಣ್ಣು ಮಕ್ಕಳ ಮೇಲೆ ಮೇಲ್ವರ್ಗದ ಜನರಿಂದ ಕ್ರೌರ್ಯಕ್ಕೆ ಬಲಿಯಾಗುವ ಸನ್ನಿವೇಶಗಳನ್ನು ಹಾಗು ದಲಿತರಲ್ಲೆ ಉಂಟಾಗುವ ಕೌಟುಂಬಿಕ ಸಮಸ್ಯೆಗಳನ್ನು ಅವರಲ್ಲೆ ಮೇಲು ಕೀಳು ಎಂಬ ಭಾವನೆಗಳನ್ನು ಬದುಕಿನ ವಿವರಗಳನ್ನು ಬಹಳ ವಿಸ್ತಾರವಾಗಿ ಅನಾವರಣಗೊಳಿಸಿದ್ದಾರೆ.

ಬಂಡಾಯದ ನೆಲೆಯಿಂದ ಬಂದಂತಹ ಡಾ. ಗೀತಾರವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅತ್ಯುತ್ತಮ ಕಾದಂಬರಿಗಳನ್ನು ಕೊಟ್ಟಿದ್ದಾರೆ. ಅವರ ಕಾದಂಬರಿಗಳಲ್ಲಿ ದಿನ ನಿತ್ಯದ ಬದುಕಿನ ಕೆಳವರ್ಗದ ಆರ್ಥಿಕ, ಧಾರ್ಮಿಕ, ಸಾಮಾಜಿಕ ಚಿತ್ರಣಗಳನ್ನು ಹಾಗು ಹೈದ್ರಾಬಾದ್ ಕರ್ನಾಟಕದ ಪ್ರಾದೇಶಿಕತೆಯ ಆಚರಣೆಗಳು, ಉರ್ದು ಭಾಷೆಯ ಮಿಶ್ರಣಗಳನ್ನು, ಸೊಂಟದ ಕೆಳಗಿನ ಪದಗಳ ವೈಯ್ಯಾರ, ಸೇಂದಿ, ಬಾಡು, ಹಾದರ, ಸಾಂಸ್ಕೃತಿಕ ಚಿತ್ರಣಗಳನ್ನು ದಲಿತ ಸ್ತ್ರೀ ನೋವಿನ ಅನುಭವಗಳನ್ನು ಅವರ ಬದುಕಿನ ಜೀವನ ಕ್ರಮವನ್ನು ಕಣ್ಣಾರೆ ಕಂಡ ತಮ್ಮ ಅದ್ಭುತ ಬರವಣಿಗೆಯ ಮುಖಾಂತರ 'ಬದುಕು'ನ್ನು ಕಟ್ಟಿಕೊಟ್ಟಿದ್ದಾರೆ.

ಡಾ. ಗೀತಾರವರ ಕಾದಂಬರಿಯಲ್ಲಿ ಬರುವ ಮುಖ್ಯ ಪಾತ್ರಗಳ ಜೊತೆ ಇತರ ಸಣ್ಣ ಪುಟ್ಟ ಪಾತ್ರಗಳಾದ ಫತೂರು, ಮಾರ್ತಾಂಡ, ಹಾಲಪ್ಪ, ಮುಕ್ಕಡಪ್ಪ, ಗುರುಲಿಂಗಪ್ಪ, ನಾಗವ್ವಾಯಿ, ಈರವ್ವ ಹೀಗೆ ಇನ್ನು ಹಲವು ಪಾತ್ರಗಳು ಕಾದಂಬರಿಗೆ ಆಧಾರಸ್ತಂಭವಾಗಿವೆ.

ಡಾ. ಗೀತಾನಾಗಭೂಷಣರವರು ಬದುಕು ಕಾದಂಬರಿಯಲ್ಲಿ ಹೈದ್ರಾಬಾದ್ ಕರ್ನಾಟಕದ ಗ್ರಾಮೀಣ ಪ್ರದೇಶದ, ಜನರ ಸಮಗ್ರ ಬದುಕಿನ ಚಿತ್ರಣವನ್ನು ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ಶಿವಳ್ಳಿಯ ದಲಿತ ಜನರ ಸಾಮಾಜಿಕ ಜೀವನದ ಕ್ರಮವನ್ನು ಹಾಗು ಸಂಪ್ರದಾಯ. ಮೂಢನಂಬಿಕೆ, ಮೊಹರಂ ಹಬ್ಬ, ಹೋಳಿ ಹುಣ್ಣಿಮೆ, ಮಾಮರ ತಾಯಿಯ ಜಾತ್ರೆ ಹೀಗೆ ಹಲವು ಸಾಂಸ್ಕೃತಿಕ ಆಚರಣೆಗಳನ್ನು ವಿವರಣಾತ್ಮಕವಾಗಿ ಚಿತ್ರಿಸಿದ್ದಾರೆ.

ಜಮಾದಾರ ಮಲ್ಲಪ್ಪನ ಬದುಕಿನ ಚಿತ್ರಣದ ಜೊತೆಗೆ ಇತರ ಶೋಷಿತರ ಜೀವನದ ಆಗು-ಹೊಗುಗಳನ್ನು ವಿವರಿಸಿದ್ದಾರೆ, ಜೊತೆಗೆ ಜಾತಿ ತಾರತಮ್ಯ ಜಮೀನ್ದಾರಿ ಪದ್ಧತಿ, ವಿಧವಾ ಸಮಸ್ಯೆಯನ್ನು ಹಾಗು ದಲಿತ ಸ್ತ್ರೀಯರ ಮೇಲಾಗುವ ಕ್ರೌರ್ಯ ದಬ್ಬಾಳಿಕೆಯನ್ನು ಡಾ. ಗೀತಾರವರು 'ಬದುಕು' ಕಾದಂಬರಿಯಲ್ಲಿ ನಿರೂಪಿಸಿದ್ದಾರೆ.

ಕನ್ನಡ ಕಾದಂಬರಿಯ ಲೋಕದಲ್ಲಿ 'ಬದುಕು' ಕಾದಂಬರಿ ಮೈಲಿಗಲ್ಲಾಗಿ ನಿಲ್ಲುತ್ತದೆ. ಆ ಸಮುದಾಯದಲ್ಲಿ ಹುಟ್ಟಿ ಒಡನಾಟದಲ್ಲಿದ್ದು ಅಲ್ಲಿಯ ಜನಾಂಗ ಅನುಭವಿಸುವ ನೋವು ಸಂಕಟಗಳನ್ನು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ.

" 'ಬದುಕು' ಕಾದಂಬರಿ ಮಾತ್ರವಾಗಿರದೆ. ಒಂದು ಸಾಂಸ್ಕೃತಿಕ ಗ್ರಂಥವಾಗಿದೆ, ದುಡಿಯುವ ವರ್ಗದ. ಕಪ್ಪಮಂದಿಯ ಜೀವನದ ರೀತಿ, ನೀತಿ ರಿವಾಜು, ರೂಢಿ, ಅಳು, ನಗು, ಪ್ರೀತಿ, ಪ್ರಣಯ, ಕಾಮ, ಪ್ರೇಮ, ಹಾದರ, ಕಳವು, ಹಸಿವು, ಕುಡಿತ, ಹವ್ಯಾಸಗಳೆಲ್ಲ ಒಳಗೊಂಡಿರುವ ಸಾಂಸ್ಕೃತಿಕ ದಾಖಲೆಯಾಗಿದೆ."

ಡಾ. ಗೀತಾರವರ ಬದುಕು ಕಾದಂಬರಿಯೂ ಕೂಡ ಕನ್ನಡ ಸಾಹಿತ್ಯದ ಹಲವು ಪ್ರಾದೇಶಿಕ ಪರಂಪರೆಯನ್ನು ಮುಂದುವರಿಸಿ ಕೊಂಡು ಹೋಗಿರುವುದಕ್ಕೆ ನಿದರ್ಶನವಾಗಿದೆ.

ಅಲ್ಲದೆ ಅವುಗಳ ಸಾಲಿನಲ್ಲೂ ಎದ್ದು ನಿಲ್ಲುವಂತ ಮೌಲಿಕವಾದ, ದಲಿತ ಸಮುದಾಯದ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ನೈತಿಕ, ಇತ್ಯಾದಿಯಾಗಿ ಹಲವಾರು ಮಗ್ಗಲುಗಳನ್ನು ಸಮಗ್ರವಾಗಿ ಪರಿಚಯಿಸುತ್ತ, ಲೇಖಕೀಯರ ಸಂದರ್ಭದಲ್ಲಿ ತಮ್ಮದೇ ಆದ ಒಂದು ಅನನ್ಯತೆಯನ್ನು ಸ್ಥಾಪಿಸಿಕೊಂಡಿದೆ.

❖ ❖ ❖

ಆಕರ ಗ್ರಂಥಗಳು

1. ಕನ್ನಡ ಕಾದಂಬರಿ ನಡೆದು ಬಂದ ರೀತಿ : ಡಾ॥ ಶಾಂತಿನಾಥ ದೇಸಾಯಿ
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

2. ಹೊಸಗನ್ನಡ ಸಾಹಿತ್ಯ : ಪ್ರೊ. ಎಲ್.ಎಸ್. ಶೇಷಗಿರಿರಾವ್
ಕನ್ನಡ ಸಾಹಿತ್ಯ ಪರಿಷತ್
ಬೆಂಗಳೂರು – 18

3. ಡಾ॥ ಗೀತಾನಾಗಭೂಷಣ "ಕಲಬುರ್ಗಿಯ ಸ್ಪಂದನ" : ಡಾ॥ ಸರಸ್ವತಿ ಚಿಮ್ಮಲಗಿ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು – 560 002

4. 'ಮಹಿಳಾ ಮಾರ್ಗ' : ಡಾ॥ ಕೆ. ಷರೀಪಾ–ಬಸವರಾಜ
ಸೂಳಿಬಾವಿ, ಲಡಾಯಿ ಪ್ರಕಾಶನ
ಗದಗ

5. ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ : ಬರಗೂರು ರಾಮಚಂದ್ರಪ್ಪ
ಅಂಕಿತ ಪುಸ್ತಕ, ಬಸವನಗುಡಿ
ಬೆಂಗಳೂರು – 560 004

6. ಕನ್ನಡ ಸಾಹಿತ್ಯ ಚರಿತ್ರೆ (2006) : ತ.ಸು. ಶಾಮರಾಯ
ಉದಯರವಿ ಆಫ್‌ಸೆಟ್ ಪ್ರಕಾಶನ
ಮೈಸೂರು

7. ಕನ್ನಡ ಕಥನ ಸಾಹಿತ್ಯ ಸಣ್ಣಕಥೆ (2003) : ಜಿ.ಎಸ್. ಅಮೂರ
ಸ್ನೇಹ ಪ್ರಕಾಶನ
ಬೆಂಗಳೂರು

8. ಐಚ್ಛಿಕ ಕನ್ನಡ ಭಾಗ 1 (ಸಾಹಿತ್ಯ ಚರಿತ್ರೆ) : ಪ್ರೊ. ಬಿ.ಆರ್. ರಾಮಚಂದ್ರಗೌಡ
ಕನ್ನಡ ಪ್ರಾಧ್ಯಪಕರು ಮತ್ತು
ಕಾಲೇಜ್, ಶಿಕ್ಷಣ ಇಲಾಖೆ
ಹೆಚ್ಚುವರಿ ನಿರ್ದೇಶಕರು (ನಿವೃತ್ತ)
ಬೆಂಗಳೂರು – 560080

9. "ಕಾಗೆ ಮುಟ್ಟಿತ್ತು" : ಲೇ: ಶ್ರೀಮತಿ ಗೀತಾನಾಗಭೂಷಣ

10. 'ದಂಗೆ' : ಲೇ: ಶ್ರೀಮತಿ ಗೀತಾನಾಗಭೂಷಣ

11. 'ಹಸಿಮಾಂಸ ಮತ್ತು ಹದ್ದುಗಳು' : ಲೇ: ಶ್ರೀಮತಿ ಗೀತಾನಾಗಭೂಷಣ
ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು–560018

12. ಯುಗ ಧರ್ಮ ಹಾಗೂ ಸಾಹಿತ್ಯ ದರ್ಶನ : ಕೀರ್ತಿನಾಥ ಕುರ್ತುಕೋಟಿ
ಲೋಟಸ್ ಪ್ರಿಂಟರ್‍ಸ್
4ನೇ ಬ್ಲಾಕ್ ರಾಜಾಜಿನಗರ
ಬೆಂಗಳೂರು – 10

13. 'ಗ್ರಾಮೀಣ' : ಲೇ: ಡಾ. ಎಂ. ಚಿದಾನಾಂದಮೂರ್ತಿ

14. ಕನ್ನಡ ಸಂಶೋಧನೆ ತಾತ್ವಿಕ ವಿಚಾರ : ಲೇ: ರಹಮತ್ ತರೀಕೆರೆ
ಪ್ರಸಾರಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

15. ಕನ್ನಡ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ (2003) : ಡಾ. ಆರ್.ವಿ. ಭಂಡಾರಿ
ಶ್ರೀರಾಘವೇಂದ್ರ ಪ್ರಕಾಶನ
ಅಂಕೋಲಾ ಉತ್ತರ ಕನ್ನಡ

16. ಕನ್ನಡ ಸಂಶೋಧನೆಯ ವೈಧಾನಿಕತೆಗಳು : ಡಾ. ಅಮರೇಶ ನುಗಡೋಣಿ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ.

17. ಡಾ. ಗೀತಾನಾಗಭೂಷಣ : ಲೇಖಕರು: ಡಾ. ಎನ್. ಗಾಯಿತ್ರಿ

18. ಬಂಡಾಯ ಹತ್ತು ವರ್ಷ ಅನ್ವೇಷಣೆ ಸಾಹಿತ್ಯ ಪತ್ರಿಕೆ (30–06–1990) : ಸಂಪಾದಕರು :
ಆರ್.ಜಿ. ಹಳ್ಳಿನಾಗರಾಜ್.

19. 'ಕರ್ಮವೀರ' ಪತ್ರಿಕೆ, ಮಾರ್ಚ್ 2010 : ಬಾಬು ಕೃಷ್ಣಮೂರ್ತಿ
ಬೆಂಗಳೂರು

20. 'ಪ್ರಜಾವಾಣಿ' ಪತ್ರಿಕೆ, 19, 20, ಫೆಬ್ರವರಿ 2010

21. 'ಕನ್ನಡಪ್ರಭ' ಪತ್ರಿಕೆ, 19, 21, ಫೆಬ್ರವರಿ 2010

22. 'ಕರ್ನಾಟಕ ರಕ್ಷಣಾ ವೇದಿಕೆ' ಫೆಬ್ರವರಿ 2010 : ಮಾಸಪತ್ರಿಕೆ

23. ವಿಜಯ ಕರ್ನಾಟಕ ಪತ್ರಿಕೆ
19, 20, ಫೆಬ್ರವರಿ 2010

❖ ❖ ❖